UNIVERSAL LIBRARY
OU_200365
UNIVERSAL LIBRARY

# ಸುಭದ್ರ

[illegible]

[illegible]

[illegible]

[illegible]

[illegible]

[illegible]

[illegible]

ಬೆಂಗಳೂರು ಸಿಟಿ.

1919.

**All rights reserved.**

ಬೆಲೆ ೬ ಆಣೆ. | ಅಂಚೆ ವೆಚ್ಚ ಬೇರೆ.

ಕೆ. ಎಸ್. ಕೃಷ್ಣಯ್ಯರ್, ಬಿ. ಎ., ಯವರ
'ಐರಿಷ್' ಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟಿತು.
ಬೆಂಗಳೂರು ಸಿಟಿ.

# ಸುಭದ್ರೆ.

---

## — ಮೊದಲನೆಯ ಅಧ್ಯಾಯ —

ಪ್ರಸಹಗೆ ಸ್ವಲ್ಪ ದೂರದಲ್ಲಿ ರಾಮಪುರವೆಂಬ ಸಣ್ಣ ಅಗ್ರಹಾರವಿರುವುದು. ಆ ಅಗ್ರಹಾರದಲ್ಲಿ ವಿಶ್ವನಾಥನೆಂಬ ಬ್ರಾಹ್ಮಣನು ವಾಸವಾಗಿದ್ದನು. ಅವನಿಗೆ ಒಬ್ಬಳೇ ಮಗಳು. ಅವಳ ಹೆಸರು ಸುಭದ್ರೆ.

ಸುಭದ್ರೆಗೆ ೧೩ ವರ್ಷ ತುಂಬಿದ್ದಿತು; ಇನ್ನೂ ಮದುವೆಯಾಗಿರಲಿಲ್ಲ. ವಿಶ್ವನಾಥನಿಗೂ ಅವನ ಹೆಂಡತಿ ರಮಾಬಾಯಿಗೂ ಹಗಲೂ ಇರುಳೂ ಮಗಳ ಮದುವೆಯ ಚಿಂತೆ. ಸುಭದ್ರೆಗೆ ಎಂಟು ವರ್ಷ ತುಂಬಿದಾಗಿನಿಂದ ಅವರು ಪ್ರಯತ್ನ ಪಡುತ್ತಿದ್ದರೂ ಅವಳಿಗೆ ಒಬ್ಬ ವರನು ದೊರೆಯುವುದು ಅಸಾಧ್ಯವಾಗಿದ್ದಿತು.

ಸುಭದ್ರೆಯು ಚೆಲುವಿಕೆಯಲ್ಲಿಯೂ, ಒಳ್ಳೆಯತನದಲ್ಲಿಯೂ, ಬುದ್ಧಿಕುಶಲತೆಯಲ್ಲಿಯೂ, ಅವಳ ಓರಗೆಯ ಹುಡುಗಿಯರೆಲ್ಲರಿಗಿಂತಲೂ ಮೇಲಾಗಿದ್ದಳು. ಆದರೇನು ? ಬಡವನ ಮಗಳು. ಅದುದರಿಂದಲೇ ಯಾರೂ ಅವಳನ್ನು ತಂದುಕೊಳ್ಳಲು ಒಪ್ಪುತ್ತಿರಲಿಲ್ಲ.

ಒಂದು ದಿನ ಸಾಯಂಕಾಲ ವಿಶ್ವನಾಥನೂ ರಮಾಬಾಯಿಯೂ ಇದೇ ವಿಚಾರವಾಗಿ ಹಲವು ಬಗೆಯಲ್ಲಿ ಯೋಚನೆಯನ್ನು ಮಾಡುತ್ತಾ ಕುಳಿತಿದ್ದರು. ಆಗ ಒಬ್ಬ ದೊಡ್ಡ ಮನುಷ್ಯನು ಅವರ

ಮನೆಗೆ ಬಂದನು. ಅವನು ಕನ್ಯಾನ್ವೇಷಣಕ್ಕಾಗಿ ಬಂದಿರುವುದಾಗಿ ತಿಳಿಯಬಂದಿತು. ಅವನ ವಜ್ರದ ಹತ್ತ ಕಡಕು, ಪಚ್ಚೆ, ಕೆಂಪು, ವಜ್ರಗಳು ಕೆತ್ತಿದ ಉಂಗುರಗಳು, ಕುತ್ತನಿಯ ಅಂಗರೇಕು, ಜರತಾರಿನ ರುಮಾಲು, ಇವುಗಳೆಲ್ಲವನ್ನೂ ನೋಡಿ ಆ ಬಡ ದಂಪತಿಗಳು ಬೆಕ್ಕಸಬೆರಗಾದರು. ವಿಶ್ವನಾಥನು, "ನಿಮ್ಮಂತಹ ದೊಡ್ಡ ಮನುಷ್ಯರ ಸಂಗಡ ಬಾಂಧವ್ಯವು ದೊರಕಿದುದೇ ಆದರೆ ನಮ್ಮ ಪೂರ್ವಜನ್ಮದ ಸುಕೃತದ ಫಲವೇ ಸರಿ. ನಕ್ಷತ್ರಾನುಕೂಲವನ್ನು ನೋಡಿ ಅನಂತರ ಮುಂದಣ ಮಾತನ್ನಾಡಬಹುದು'' ಎಂದನು. ಹೊಸಬನು, "ನಾನು ಮೊದಲು ಕನ್ಯೆಯನ್ನು ನೋಡಬೇಕು'' ಎಂದನು. ರಮಾಬಾಯಿಯು ಕಿರುಮನೆಯಲ್ಲಿ ಓದುತ್ತ ಕುಳಿತಿದ್ದ ಸುಭದ್ರೆಯನ್ನು ಕರದುಕೊಂಡು ಬಂದಳು. ಅವಳನ್ನು ನೋಡಿ ಹೊಸಬನಿಗೆ ಬಲು ಸಂತೋಷವಾಯಿತು. "ಇಂತಹ ಚೆಲುವೆಗೆ ವರನು ಸಿಕ್ಕಲಿಲ್ಲವೇ'' ಎಂದನು. ಸುಭದ್ರೆಯು ನಾಚಿಕೊಂಡು ಒಳಗೆ ಹೋದವಳು ಹಾಗೆಯೆ ಕಿಟಕಿಯ ಬಾಗಿಲಲ್ಲಿ ಇವರ ಮಾತುಗಳನ್ನು ಆಲಿಸುತ್ತಾ ನಿಂತುಕೊಂಡಳು. ವಿಶ್ವನಾಥನು "ರಾಯರೆ, ವರನ ಜಾತಕವನ್ನು ಕೊಡಬೇಕಾಗಲಿ, ನೋಡುತ್ತೇನೆ. ನನಗೂ ಸ್ವಲ್ಪ ಜ್ಯೋತಿಷ್ಯ ಪರಿಚಯವುಂಟು'' ಎಂದನು.

ಶ್ರೀಧರರಾಯ (ಅದೇ ಹೊಸಬನ ಹೆಸರು)—ಜಾತಕವನ್ನು ನೋಡಬೇಕಾದುದೇನು, ಸ್ವಾಮಿ, ಮನಸ್ಸು ಒಪ್ಪಿದರೆ ಸರಿ.

ವಿಶ್ವನಾಥ—ಮನಸ್ಸು ಒಪ್ಪಿತೆಂದು ಕುಲಗೋತ್ರ ತಿಳಿಯದೆ ಕೊಡುವುದಕ್ಕಾಗುವುದೆ ?

ಶ್ರೀಧರ—ವರನು ದೇಶಸ್ಥಬ್ರಾಹ್ಮಣ, ಕಾಶ್ಯಪಗೋತ್ರ, ಬೇಕಾದಷ್ಟು ಹಣವಿದೆ, ನಿಮ್ಮ ಮಗಳಿಗೆ ಮೈತುಂಬಾ

ಒಡವೆಯನ್ನಿ ಕ್ಕು ವುದಲ್ಲದೆ, ನಿಮ್ಮ ಮನಸ್ಸಿಗೂ ತೃಪ್ತಿ ಯಾಗುವಂತೆ ಸನ್ಮಾನವನ್ನು ಮಾಡುತ್ತಾನೆ.

ವಿಶ್ವನಾಥ— ಇದೇನೊ ನನಗೆ ಕನಸಿನಂತೆ ತೋರುತ್ತಿದೆ, ಅಂತಹ ವರನು ಸಿಕ್ಕುವಷ್ಟು ಪುಣ್ಯವನ್ನು ನಾವು ಮಾಡಿರುವೆವೆ ?

ಶ್ರೀಧರ—ವರನು ನಿಮ್ಮೆದುರಿಗೇ ಕುಳಿತುಕೊಂಡು ಮಾತು ಕೊಡುತ್ತಿರುವಾಗ ನಿಮಗೆ ಅಪನಂಬಿಕೆಯೇಕೆ ?

ವಿಶ್ವನಾಥ— ಇದೇನು ಸ್ವಾಮಿ, ಹೀಗೆ ಮಾತನಾಡುತ್ತೀರಿ, ನನಗಾವುದೂ ಅರ್ಥವಾಗುವುದಿಲ್ಲ.

ಶ್ರೀಧರ—ಸ್ವಾಮಿ, ನಿಮ್ಮಲ್ಲಿ ಮುಚ್ಚುಮರೆಯೇಕೆ, ಕನ್ಯೆಯು ಬೇಕಾಗಿರುವುದು ನನಗೇ—

ವಿಶ್ವನಾಥ—ಏನು, ಏನು, ನಿಮಗೆ?

ಶ್ರೀಧರ—ಅದೇನು ಅಷ್ಟು ಆಶ್ಚರ್ಯಪಡುತ್ತೀರಿ ? ನಾನು ಹೇಳುವುದನ್ನು ಪೂರಾ ಕೇಳಿ! ನಾನೇನೋ ವಯಸ್ಸಾದವನಂತೆ ತೋರಿದರೂ, ನನಗಿನ್ನೂ ಇಪ್ಪತ್ತು ವರ್ಷಕೂಡ ಆಗಿಲ್ಲ. ನನಗೆ ನಿಮ್ಮ ಹುಡುಗಿಯನ್ನು ಮದುವೆ ಮಾಡಿಕೊಳ್ಳಬೇಕೆಂಬ ಇಷ್ಟವಿದೆ. ಇದಕ್ಕೋಸ್ಕರ ನೀವೇನು ಕೇಳಿದರೂ ಕೊಡಲು ಸಿದ್ಧನಾಗಿದ್ದೇನೆ.

ವಿಶ್ವನಾಥ—ಅಯ್ಯೋ! ನಾನು ಮಗಳನ್ನು ಮಾರಲೆ ? ನಾನು ಹುಟ್ಟಿದುದಕ್ಕೆ ಸಾರ್ಥಕವಾಯಿತು.

ಶ್ರೀಧರ—ನೀವು ಆರೀತಿ ಯೋಜನೆ ಮಾಡಕೂಡದು ನಿಮ್ಮ ಮಗಳನ್ನು ನನಗೆ ಕೊಟ್ಟರೆ ನೀವು ನನಗೆ ಕೇವಲ ಆತ್ಮೀಯರಾಗುವಿರಿ, ನಾನು ಕೊಡುವ

ಹಣವು ನಿಮ್ಮ ಪೋಷಣೆಗೋಸ್ಕರವೆಂದು ತಿಳಿಯಬೇಕಲ್ಲದೆ ನಿಮ್ಮ ಮಗಳಿಗೋಸ್ಕರ ಕೊಡುವ ಕ್ರಯವೆಂದು ಭಾವಿಸಕೂಡದು.

ವಿಶ್ವನಾಥ—(ಹೆಂಡತಿಯಕಡೆನೋಡಿ) ನೀನೇನು ಹೇಳುವೆ?

ರಮಾಬಾಯಿ—ಇಂತಹ ದೊಡ್ಡ ಮನುಷ್ಯರ ಮಾತನ್ನು ತೆಗೆದುಹಾಕುವುದು ಹೇಗೆ? ಎಷ್ಟೋ ಜನರು ಷಷ್ಠ್ಯ ಪೂರ್ತಿಶಾಂತಿಯಾದ ಮೇಲೆ ಕೂಡಾ ಮದುವೆ ಮಾಡಿಕೊಂಡು ಮಕ್ಕಳು ಮರಿಗಳನ್ನು ಪಡೆದು ಸುಖವಾಗಿದ್ದಾರೆ.

ವಿಶ್ವನಾಥ—ಸರಿ, ನಿನಗೆ ಒಪ್ಪಿಗೆಯೆಂಬುದು ಗೊತ್ತಾಯಿತು, ಇನ್ನು ನನ್ನದೇನಿದೆ. (ಶ್ರೀಧರರಾಯನನ್ನು ಕುರಿತು) ರಾಯರೆ, ನಿಮ್ಮ ಇಷ್ಟದಂತೆ ಆಗಲಿ, ನಾಳೆ ಶುದ್ಧ ಸಪ್ತಮೀ ದಿನವೇ ಲಗ್ನವಿದೆ, ನಮಗೂ ಕಾಲವಿಳಂಬಕ್ಕೆ ಅವಕಾಶವಿಲ್ಲ.—

ಈ ಮಾತನ್ನು ಕೇಳಿದೊಡನೆಯೇ ಶ್ರೀಧರರಾಯನ ಸಂತೋಷಕ್ಕೆ ಪಾರವೇ ಇರಲಿಲ್ಲ. ಸ್ವಾಮಿ, ನನಗೆ ಬೇಕಾಗಿರುವುದೂ ಅದೇ "ಶುಭಸ್ಯಶೀಘ್ರಂ" ಎಂದನು.

ರಮಾಬಾಯಿಯು—"ಮಾತು ನಿಶ್ಚಯವಾಗಲಿ" ಎಂದಳು.

ಶ್ರೀಧರ—ಅದಕ್ಕೇನು ನೀವು ಹೇಳಿದಷ್ಟು ಕೊಡಲು ಸಿದ್ಧನಾಗಿದ್ದೇನೆಂದು ಆಗಲೇ ಹೇಳಿದೆನಷ್ಟೆ.

ರಮಾಬಾಯಿ—ನಮಗೆ ಎರಡುಸಾವಿರರೂಪಾಯಿ ಕೃಷ್ಣಾರ್ಪಣವಾಗಿ ಕೊಡಬೇಕು, ಅಲ್ಲದೆ ಹುಡುಗಿಗೆ ಒಂದು ತೊಡಿಗೆ ನಗಗಳು ಒಂದು ಪೀತಾಂಬರ ಇಷ್ಟೂ ಆಗಬೇಕು.

ಶ್ರೀಧರ—ಇಷ್ಟೇತಾನೆ, ಇದೋ ನಾಲ್ಕುಸಾವಿರ ರೂಪಾಯಿಸ "ನೋಟು'' ಗಳನ್ನು ಈಗಲೇ ಕೊಡುತ್ತೇನೆ. ನಿಮಗೆ ಬೇಕಾದಷ್ಟು ಇಟ್ಟುಕೊಂಡು, ಮಗಳಿಗೆ ಬೇಕಾದಷ್ಟು ಸಗವನ್ನು ಮಾಡಿಸಿ ಉಳಿದುದನ್ನು ಮದುವೆಗೋಸ್ಕರ ವೆಚ್ಚಮಾಡಿ. ಇದರಲ್ಲೊಂದು ಕಾಸನ್ನೂ ನಾನು ಕೇಳುವುದಿಲ್ಲ.

ವಿಶ್ವನಾಥನಿಗೆ ಅಷ್ಟೊಂದು ನೋಟುಗಳನ್ನು ನೋಡುತ್ತಲೆ ಕಣ್ಣುಗಳರಳಿದುವು. "ಏನಾದರೂ ಆಗಲಿ, ಈ ನನ್ನ ಹುಟ್ಟು ಬಡತನವಾದರೂ ಮುಕ್ತಾಯವಾಗುವುದು'' ಎಂದಂದುಕೊಂಡು ಅವುಗಳನ್ನು ತೆಗೆದಿಟ್ಟುಕೊಂಡನು.

ಇವರಸಂಭಾಷಣೆಯುನಡೆಯುತ್ತಿದ್ದಾಗಸುಭದ್ರೆಗೆ ಮೊದಲು ಕೊಂಚ ಹೊತ್ತು ಸಂತೋಷವೂ, ಅನಂತರ ಸ್ವಲ್ಪ ಸಂದೇಹವೂ ಉಂಟಾಗಿದ್ದಿತು.ಕೊನೆಯಮಾತುಗಳುಕಿವಿಗೆಬಿದ್ದೊಡನೆಯೆ ಅವಳಿಗೆ ಸಿಡಿಲು ಬಡಿದಂತಾಯಿತು. ನಿಲ್ಲಲು ತ್ರಾಣವಿಲ್ಲದೆ ಕೂತುಬಿಟ್ಟಳು.

ಶ್ರೀಧರರಾಯನು ಲಗ್ನಕ್ಕೆಎರಡುದಿವಸಮುಂಚಿತವಾಗಿ ಬರುವುದಾಗಿ ಹೇಳಿ ಹೊರಟುಹೋದನು. ಅನಂತರ ರಮಾಬಾಯಿಯು ಸುಭದ್ರೆ! ಸುಭದ್ರೆ! ಎಂದು ಕೂಗಿದಳು —ಉತ್ತರ ಬರಲಿಲ್ಲ. ಕಿರುಮನೆಯೊಳಕ್ಕೆ ಹೋಗಿ "ಸುಭದ್ರೆ! ಊಟಕ್ಕೇಳಮ್ಮ'' ಎಂದಳು. ಸುಭದ್ರೆಯು "ಅಮ್ಮ! ಹಸಿವಿಲ್ಲ, ತೊಂದರೆಮಾಡಬೇಡ'' ಎಂದು ಖಂಡಿತವಾಗಿ ಹೇಳಿಬಿಟ್ಟಳು.

ಸುಭದ್ರೆ ಯಾವಾಗಲೂ ಈ ರೀತಿ ಮಾತನಾಡಿದವಳಲ್ಲ. ಆದರೂ ರಮಾಬಾಯಿ ಕಾರಣವೇನೆಂಬುದನ್ನು ಯೋಚಿಸಲೇ ಇಲ್ಲ. ವಿಶ್ವನಾಥನು ಊಟಕ್ಕೆ ಕುಳಿತುಕೊಳ್ಳುವಾಗ್ಗೆ "ಸುಭದ್ರೆ ಎಲ್ಲಿ ?

ಊಟಕ್ಕೆ ಬರುವುದಿಲ್ಲವೆ'' ಎಂದು ಹೆಂಡತಿಯನ್ನು ಕೇಳಲಾಗಿ ಅವಳು ‹‹ಇಲ್ಲವಂತೆ, ಹಸಿವಿಲ್ಲವೆನ್ನುತ್ತಾಳೆ'' ಎಂದಳು.

ವಿಶ್ವನಾಥ-- ನಾವು ಮಾತನಾಡುತ್ತಿದ್ದ ವಿಷಯದಲ್ಲಿ ಅವಳಿಗೇನಾದರೂ ಅಸಮಾಧಾನವೊ ? ಈ ಕಾಲಕ್ಕೆ ತಕ್ಕ ಹಾಗೆ ಅವಳಿಗೂ ತಿಳಿಸಿ ಮಾತು ಕೊಟ್ಟಿದ್ದರೆ ಚೆನ್ನಾಗಿತ್ತು-ಆ ಮೇಲೆ ನಮ್ಮ ಭಾರವು ತಪ್ಪುತ್ತಿತ್ತು.

ರಮಾಬಾಯಿ—‹‹ಒಳ್ಳೇ ಕಾಲ! ಅಷ್ಟಿಲ್ಲದೆ ಹೆಂಗಸರು ದರ್ಬಾರು ಮಾಡುತ್ತಾರೆಯೆ? ಅದು ಹೇಗಾದರೂ ಇರಲಿ, ನಮ್ಮ ಸುಭದ್ರೆ ಪೂರ್ವಕಾಲದವಳು, ಈ ಕಾಲದವರ ಹಾಗಲ್ಲ. ಮೈತುಂಬಾ ಒಡವೆಯನ್ನಿಟ್ಟು ಬಿಟ್ಟರೆ ಎಲ್ಲಾ ಅಸಮಾಧಾನವೂ ಹೋಗುತ್ತದೆ'' ಎಂದಳು ಗಂಡನು ಸುಮ್ಮನಾದನು.

ಸುಭದ್ರೆಗೆ ಹುಚ್ಚು ಹಿಡಿದಂತಾಯಿತು, ಏನೊಂದೂ ತೋಚದೆ ಸುಮ್ಮನೆ ಅಳತೊಡಗಿದಳು. ಯಾವರೀತಿಯಲ್ಲಿ ಯೋಚಿಸಿದರೂ ಮನಸ್ಸೊಪ್ಪಲಿಲ್ಲ. ತಂದೆತಾಯಿಗಳೆ ತನಗೆ ಮೃತ್ಯುಗಳೆಂಬುದು ಈಗ ತಿಳಿಯಿತು. ಅವರು ಹಣದ ಆಸೆಗೆ ತನ್ನನ್ನು ಮಾರಿ ಬಿಡುವರೆಂದು ಎಂದಿಗೂ ಅವಳು ಯೋಚಿಸಿರಲಿಲ್ಲ. ಅದರಲ್ಲಿಯೂ ಆ ವಕ್ರಾಕಾರವುಳ್ಳ ಮುದುಕನಿಗೆ ಕೊಡುವರೆಂದು ಕನಸಿನಲ್ಲಿಯೂ ನೆನಸಿರಲಿಲ್ಲ. ‹‹ಓಡಿ ಹೋಗೋಣವೆಂದರೆ ಅಬಲೆಯಾದ ಹುಡುಗಿ, ಅಲ್ಲದೆ ಎಲ್ಲಿ ಹೋಗುವುದು? ಹೇಗೆ ಹೋಗುವುದು? ಅಯ್ಯೋ ! ಭಗವಂತನೆ ! ಏತಕ್ಕೆ ಸೃಷ್ಟಿಸಿದೆ? ಅವನನ್ನು ಮದುವೆಯಾಗುವ ಮೊದಲು ಸಾವಾದರೂ ಬರಬಾರದೆ ?'' ಎಂದು ಅನೇಕ ವಿಧವಾಗಿ ಹಂಬಲಿಸಿದಳು. ತಾಯಿಯ ಭಯದಿಂದ ಗಟ್ಟಿಯಾಗಿ ಅಳಲಾರದೆ ಸುಮ್ಮನೆ ಕಣ್ಣೀರು ಸುರಿಸುತ್ತಿದ್ದಳು. ಅಷ್ಟರಲ್ಲಿಯೇ ತಾಯಿಯು ಬರುವ ಸದ್ದನ್ನು ಕೇಳಿ

ಕಣ್ಣೊರಸಿಕೊಂಡು ಸುಮ್ಮನಾದಳು. ರಮಾಬಾಯಿ ಸುಭದ್ರೆಯನ್ನು ಪುನಃ ಊಟಕ್ಕೆಬ್ಬಿಸಿದಳು, ಆವಳು ಏಳಲಿಲ್ಲ. ಈಗ ರಮಾಬಾಯಿಯ ಮನಸ್ಸಿಗೆ ಸ್ವಲ್ಪ ಹೊಳೆಯಿತು. ಆದರೂ ಕೇಳಕಬಾರದೆಂದಾಡು ಕೊಂಡು ಹೊರಟುಹೋದಳು.

ಸುಭದ್ರೆಗೆ ರಾತ್ರಿಯೆಲ್ಲಾ ನಿದ್ರೆ ಬರಲಿಲ್ಲ. ಯಾವಾಗಲೂ ಆ ಮುದುಕನಸ್ವರೂಪವೇ ಕಣ್ಣೆದುರಿಗೆ ಬಂದು ನಿಂತು, ಭಯವನ್ನುಂಡುಮಾಡುತ್ತಿತ್ತು. ಮಹಾಭಾರತದಲ್ಲಿ ಉಕ್ತಳಾದ ಸುಭದ್ರೆಯ ಪರಿಣಯವನ್ನು ಚೆನ್ನಾಗಿ ಕೇಳಿದ್ದಳು. ಹಾಗೆಯೆ ಯಾವನಾದರೂ ಮಹಾತ್ಮನು ಕಷ್ಟನಿವಾರಣೆಮಾಡುವನೆ? ‹‹ಅಯ್ಯೋ! ಇದು ಕಲಿಯುಗ! ಆಗಿನ ಅರ್ಜುನನನ್ನು ಈಗ ಬಾರೆಂದರೆ ಎಲ್ಲಿಂದ ಬಂದಾನು? ಸುಮ್ಮನೆ ಭ್ರಾಂತಿ.'' ಎಂದು ನಾನಾ ವಿಧವಾಗಿ ಯೋಚನೆ ಮಾಡುತ್ತಾ ಆ ರಾತ್ರಿಯನ್ನು ಬಹು ಪ್ರಯಾಸದಿಂದ ಕಳೆದಳು.

—— o ——

## — ಎರಡನೆಯ ಅಧ್ಯಾಯ —

ಮಾರಣೆಯದಿನ ಬೆಳಗಾಗುತ್ತಲೆ ಸುಭದ್ರೆಯು ಎಂದಿನಂತೆ ಪಾಠಶಾಲೆಗೆ ಹೋದಳು. ಅಲ್ಲಿ, ಆಕೆಯ ಮುಖವು ಬಾಡಿರುವುದನ್ನು ಉಪಾಧ್ಯಾಯೆಯೂ, ಸುಭದ್ರೆಯ ಸಂಗಾತಿಯರೂ ನೋಡಿದರು. ಕಾರಣವು ಯಾರಿಗೂ ತಿಳಿಯದು. ಸುಭದ್ರೆ ಯಾವಾಗಲೂ ಪಾಠವನ್ನು ತಪ್ಪುತ್ತಿದ್ದವಳಲ್ಲ. ಈ ದಿನ ಉಪಾಧ್ಯಾಯೆಯೊಂದನ್ನು ಕೇಳಿದರೆ ಇವಳೊಂದನ್ನು ಹೇಳುವಳು. ಹೀಗಿದ್ದುದರಿಂದ ಇವಳ ಮನಸ್ಸಿನಲ್ಲಿ ಏನೋ ವ್ಯಸನವಿರಬಹುದೆಂದು ಉಪಾಧ್ಯಾಯೆಯು ಊಹಿಸಿ ಸುಭದ್ರೆಯನ್ನು ಕರೆದು—‹‹ಸುಭದ್ರೆ! ನೀನು ಈಗ

ಮನೆಗೆ ಹೋಗು, ನಾನೂ ಪಾಠಗಳನ್ನೆಲ್ಲಾ ಮುಗಿಸಿಕೊಂಡುಬರುತ್ತೇನೆ.'' ಎಂದು ಹೇಳಿ ಕಳುಹಿಸಿಬಿಟ್ಟಳು. ಸುಭದ್ರೆಯು ಮನೆಗೆ ಬಂದಳು. ತಾಯಿಯು "ಇದೇನು ಇಷ್ಟು ಬೇಗ ಬಂದೆ?'' ಎಂದು ಕೇಳಲು "ಮೈಯಲ್ಲಿ ಸ್ವಸ್ಥವಿಲ್ಲ'' ಎಂದು ಉತ್ತರಕೊಟ್ಟು ತನ್ನ ಚಿಕ್ಕಮನೆಗೆ ಹೋಗಿ ಕೂತುಕೊಂಡು ಉಪಾಧ್ಯಾಯೆ ಬರುವುದನ್ನೆ ಎದುರುನೋಡುತ್ತಿದ್ದಳು. ೧೦|| ಗಂಟೆಗೆ ಸರಿಯಾಗಿ ಉಪಾಧ್ಯಾಯೆ ಬಂದಳು. ರಮಾಬಾಯಿಯ ಸಂಗಡ ಹೇಳಿ ಸುಭದ್ರೆಯನ್ನು ಮನೆಗೆ ಕರೆದುಕೊಂಡು ಹೋದಳು.

ಈ ಉಪಾಧ್ಯಾಯೆಯ ಹೆಸರು ಗಂಗಾಬಾಯಿ. ಈಕೆ ವಯಸ್ಸಾದವಳಾಗಿಯೂ, ವಿದ್ಯಾವತಿಯಾಗಿಯೂ ಇದ್ದಳು. ಈಕೆಗೆ ಚಿಕ್ಕಂದಿನಲ್ಲಿಯೆ ಪತಿವಿಯೋಗವುಂಟಾದುದರಿಂದ ತನ್ನ ಕಾಲವನ್ನು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದರಲ್ಲೇ ಕಳೆಯುತ್ತಿದ್ದಳು. ಮತ್ತು ಮಕ್ಕಳಿಲ್ಲದವಳಾದಕಾರಣ ವಿದ್ಯಾರ್ಥಿನಿಯರನ್ನೆ ತನ್ನ ಮಕ್ಕಳೆಂದು ಭಾವಿಸಿಕೊಂಡಿದ್ದಳು ಸುಭದ್ರೆಯಲ್ಲಿ ಮಾತ್ರ, ಉಳಿದೆಲ್ಲರಲ್ಲಿದ್ದುದಕ್ಕಿಂತಲೂ ಅತಿಶಯವಾದ ಪ್ರೇಮವಿದ್ದಿತು.

ಸುಭದ್ರೆಯೂ ಗಂಗಾಬಾಯಿಯೂ ಮನೆಗೆ ಬಂದಕೂಡಲೆ ಉಯ್ಯಾಲೆ ಮಣೆಯ ಮೇಲೆ ಕುಳಿತುಕೊಂಡರು. ಗಂಗೆಯು— ಏಕಮ್ಮ ಸುಭದ್ರೆ! ಮಂಕಾಗಿದ್ದೀಯೆ? ಎಂದು ಕೇಳಿದೊಡನೆಯೆ ಸುಭದ್ರೆಯ ಮನಸ್ಸಿನಲ್ಲಿದ್ದ ದುಃಖಕ್ಕೆ ತಡೆಯಿಲ್ಲದಂತಾಗಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಅಳುವು ನಿಲ್ಲುವತನಕ ಗಂಗಾಬಾಯಿ ಸುಮ್ಮನಿದ್ದಳು, ಅಳುವು ನಿಂತಮೇಲೆ—"ತಾಯಿ! ನೀನು ಸ್ವಲ್ಪವೂ ಹೆದರಬೇಡ, ನಿನ್ನ ಮನಸ್ಸಿನಲ್ಲಿ ಯಾವ ಗುಟ್ಟಿನ ಸಂಗತಿಯಿದ್ದರೂ ನನ್ನೊಡನೆ ಹೇಳು, ನಾಚಿಕೆ ಪಡಬೇಕಾದುದಿಲ್ಲ'' ಎಂದಳು.

ಸುಭದ್ರೆ— "ಏನು ಹೇಳಲಿ, ಮದುವೆ ಮಾ........."
ಪುನಃ ಅಳತೊಡಗಿದಳು.

ಗಂಗಾ – (ಕಣ್ಣೊರಸಿ) "ಯಾರಿಗೆ ಕೊಡುತ್ತಾರಂತೆ ?"

ಸುಭದ್ರೆ—ಬಿಕ್ಕಿ ಬಿಕ್ಕಿ ಅಳುತ್ತಾ "ಒಬ್ಬ ಭೂ-ಊ-ತ-ನಿಗೆ"

ಗಂಗೆಯು ಎಲ್ಲವನ್ನೂ ಊಹಿಸಿದಳು, ಹಿಂದಿನ ದಿನ ಸಾಯಂಕಾಲ ನಾವು ಹಿಂದೆ ವಿವರಿಸಿದ ವ್ಯಕ್ತಿಯು ವಿಶ್ವನಾಥನ ಮನೆಯನ್ನು ಕಂಡು ಹಿಡಿಯುವುದಕ್ಕೋಸ್ಕರ ಗಂಗಾಬಾಯಿಯನ್ನೆ ಬಂದು ಕೇಳಿದ್ದನು. ಆಗ ಅವನನ್ನು ಚೆನ್ನಾಗಿ ನೋಡಿ ಅವನ ಆಡಂಬರದಿಂದ ಕಾರಣವನ್ನು ಸ್ವಲ್ಪಮಟ್ಟಿಗೆ ಊಹಿಸಿದ್ದಳು. ಈಗ ಸ್ಥಿರಪಟ್ಟಿತು.

ಗಂಗಾಬಾಯಿ—ಸುಭದ್ರೆ ! ನೀನು ಸ್ವಲ್ಪವೂ ಹೆದರಬೇಡ.
ಆ ಭೂತನಿಗೆ ನಿನ್ನನ್ನು ಕೊಡದಹಾಗೆ ಮಾಡುವ
ಭಾರ ನನ್ನದು.

ಸುಭದ್ರೆ—ಅಮ್ಮಾ ನೀವೇ ನನ್ನನ್ನು ಕಾಪಾಡಬೇಕು.
ನಮ್ಮ ತಂದೆ ತಾಯಿಗಳೇನೊ ನನ್ನನ್ನು ಹಣದ ಆಶೆಗೆ
ಮಾರಿ ಬಿಡುತ್ತಾರೆ.

ಹೀಗೆ ಮಾತನಾಡುತ್ತಲಿರುವ ಹೊತ್ತಿಗೆ ಸರಿಯಾಗಿ ಒಬ್ಬ ತರುಣನು ಮನೆಯೊಳಕ್ಕೆ ಪ್ರವೇಶಮಾಡಿದನು. ಸುಭದ್ರೆಗೆ ಒಂದು ತೇಜೋಮಯವಾದ ರೂಪವು ಬಂದು ಎದುರಲ್ಲಿ ನಿಂತಂತಾಯಿತು. ತರುಣನು ಸುಭದ್ರೆಯನ್ನು ನೋಡಿದಕೂಡಲೆ ಸಂಭ್ರಾಂತನಾಗಿ ಸುಮ್ಮನೆ ದೃಷ್ಟಿಸುತ್ತಾ ನಿಂತುಬಿಟ್ಟನು. ಇವರ ಮನೋಭಿಪ್ರಾಯಗಳನ್ನು ತಿಳಿದ ಗಂಗೆಯು ಸ್ವಲ್ಪ ಹೊತ್ತು ಸುಮ್ಮನಿದ್ದು ಅನಂತರ— "ಮಾಧವಾ !ಯಾವಾಗಬಂದೆಯಪ್ಪ? ಸೌಖ್ಯವಾಗಿದ್ದೀಯಾ ?" ಎಂದು ಕೇಳಿದಳು. ಮಾಧವನಿಗೆ ಜ್ಞಾನೋದಯವಾಯಿತು. ತನ್ನ ಚಿಕ್ಕಮ್ಮನಿರುವುದು ಆಗ ಗೊತ್ತಾಯಿತು. ಮನಸ್ಸಿನಲ್ಲಿ ತನ್ನನ್ನು

ತಾನೆ ಬೈದುಕೊಂಡು "ಈಗ ತಾನೆ ಟಪಾಲುಗಾಡಿಯಲ್ಲಿ ಬಂದೆ" ಎಂದನು. ಗಂಗೆಯು—"ಬಾ ಕೂತುಕೊ." ಎಂದು ಹತ್ತಿರ ಕುಳ್ಳಿರಿಸಿಕೊಂಡಳು. ಸುಭದ್ರೆಯು ಅಲ್ಲಿಂದೆದ್ದು "ನಾನು ಮನೆಗೆ ಹೋಗುತ್ತೇನಮ್ಮ" ಎಂದಳು. ಗಂಗೆಯು "ಹೋಗಿ ಬಾ ನಾನು ಹೇಳಿದುದನ್ನು ಮರೆಯಬೇಡ" ಎಂದು ಹೇಳಿ ಕಳುಹಿಸಿಕೊಟ್ಟಳು.

ಸುಭದ್ರೆಗೆ ಮನೆಗೆ ಹೋಗಲು ಕಾಲೇ ಬಾರದು. ಆಗ ತಾನೆ ಕಂಡ ತರುಣನ ರೂಪವೂ ಹಿಂದಿನರಾತ್ರಿ ಕಂಡ ಮುದುಕನರೂಪವೂ ಕಣ್ಣೆದುರಿಗೆ ನಿಂತುಕೊಂಡಿದ್ದುವು. ಆ ತರುಣನನ್ನು ಕಂಡಕೂಡಲೆ ಏನೊ ಒಂದು ವಿಧವಾದ ಭಾವನೆಯುಂಟಾಯಿತು. ಅದು ಇಂತಹು ದೆಂಬುದು ಸುಭದ್ರೆಗೆ ತಿಳಿಯಲಿಲ್ಲ. ಆದರೆ ಆ ವಿಧವಾದ ಭಾವನೆಯು ಮೊದಲೆಂದಿಗೂ ಆಗಿರಲಿಲ್ಲವೆಂಬುದುಮಾತ್ರ ಗೊತ್ತಾಗಿದ್ದಿತು. ಸುಭದ್ರೆಗೆ ಯಾವಾಗಲೂ ಆತನಧ್ವನಿಯನ್ನೇ ಕೇಳುತ್ತಾ ಆತನ ಬಳಿಯಲ್ಲೇ ಇರಬೇಕೆನ್ನಿಸುತ್ತಿದ್ದಿತು.

——o——

## — ಮೂರನೆಯ ಅಧ್ಯಾಯ —

ರಾತ್ರೆ ಮಾಧವನಿಗಾದರೊ ಮನಸ್ಸಿ ವಿರೂಪವನ್ನು ಹೊಂದಿದುದರಿಂದ ಅವನು ಚಿಕ್ಕತಾಯಿ ಕೇಳುತ್ತಿದ್ದ ಪ್ರಶ್ನೆಗಳಿಗೆಲ್ಲಾ ಏನೋ ಒಂದು ವಿಧವಾದ ಉತ್ತರಗಳನ್ನು ಕೊಡಲಾರಂಭಿಸಿದನು. ಇದನ್ನು ಅವಳು ತಿಳಿದು—"ಮಗು ! ನಿನ್ನೆರಾತ್ರೆ ನಿನಗೆ ನಿದ್ದೆ ಸಾಲಲಿಲ್ಲವೆಂದು ತೋರುತ್ತದೆ, ಸ್ವಲ್ಪ ಹೊತ್ತು ಮಲಗು, ನಾನು ಅಡಿಗೆಮಾಡಿ ಎಬ್ಬಿಸುತ್ತೇನೆ" ಎಂದಳು.

ಮಾಧವ—ಅಮ್ಮಾ! ಅದೆಲ್ಲಾ ಇರಲಿ, ಒಂದು ಮಾತು ಕೇಳಲು ನಾಚಿಕೆಯಾಗುತ್ತದೆ, ಕೇಳಲೋ ಬೇಡವೋ?

ಗಂಗಾ—ನೀನು ಕೇಳುವುದಕ್ಕೆ ಮುಂಚೆ ನಾನೇ ಹೇಳುತ್ತೇನೆ ಕೇಳು, ಆ ಹುಡುಗಿಯು—

ಮಾಧವ—ಛೆ! ಛೆ! ಅದಲ್ಲವಮ್ಮ, ನಾನು ಬೇರೆ—

ಗಂಗಾ—ಓಹೊ ! ಮಗು ! ಹೇಗಾದರೂ ಆಗಲಿ, ಗುರುವಿಗೇ ತಿರುಮಂತ್ರ ಹೇಳುತ್ತೀಯಲ್ಲ! ನಮ್ಮ ದೇವರ ಸತ್ಯ ನಾನರಿಯೆನೆ ?

ಮಾಧವನಿಗೆ ನಾಚಿಕೆಯಿಂದ ಮುಖವು ಕೆಂಪೇರಿತು. "ನಿನ್ನ ಇಷ್ಟ, ನಾನೇನು ಹೇಳಲಿ" ಎಂದನು.

ಗಂಗಾ—ಆ ಹುಡುಗಿಯ ಹೆಸರು ಸುಭದ್ರೆ, ಬಹಳ ದೊಡ್ಡ ಮನೆತನಕ್ಕೆ ಸೇರಿದವಳು. ಅವಳ ತಂದೆಯು ಪೂರ್ವಿಕರ ಆಸ್ತಿಯನ್ನೆಲ್ಲಾ ಕಳೆದು ಅನ್ನವಸ್ತ್ರಕ್ಕೂ ಗತಿಯಿಲ್ಲದಂತೆ ಆಗಿದ್ದಾನೆ, ಆದುದರಿಂದ ಅವಳು ಹೀಗಿದ್ದಾಳೆ. ಆದರೆ ವಿದ್ಯದಲ್ಲಿಯೂ, ಗುಣದಲ್ಲಿಯೂ ಈ ಹುಡುಗಿಗೆ ಸಮಾನರಾದವರನ್ನೇ ಕಾಣೆ.

ಮಾಧವ—ನಾನು ಬಂದಾಗ್ಗೆ ಆಕೆ ಅಳುತ್ತಿದ್ದುದು ಏತಕ್ಕೆ ?

ಗಂಗಾ—ಅಪ್ಪಾ! ಏನು ಹೇಳಲಿ. ಆ ಹುಡುಗಿಯ ತಂದೆ ತಾಯಿಗಳು ಹಣದ ಆಸೆಗೆ ಆಕೆಯನ್ನು ಒಬ್ಬ ಮುದುಕನಿಗೆ ಕೊಟ್ಟು ಮದುವೆಮಾಡಬೇಕೆಂದಿದ್ದಾರೆ.

ಮಾಧವ—ಅಯ್ಯೋ ಪಾಪ! ಏನು ಅನ್ಯಾಯ! ಲೋಕದಲ್ಲಿ ಇಂತಹ ಕಟಿಗರೂ ಉಂಟೆ ?

ಗಂಗೆಯು ಒಳಗೆ ಹೋದಳು. ಮಾಧವನು ಉಯ್ಯಾಲೆ ಮಣೆಯಮೇಲೆ ಏನನ್ನೋ ಯೋಚಿಸುತ್ತಾ ಕುಳಿತಿದ್ದನು.

ಮಾಧವರಾಯನಿಗೆ ಈಗ ೨೦ ವರುಷ ವಯಸ್ಸು. ಅವನ ತಂದೆಯ ಹೆಸರು ಶಂಕರರಾಯ. ಆತನು ಪುನಹೆಯಲ್ಲಿ ಭಾರಿ ಜವಿಾಕ್‌ದಾರನಾಗಿ ಹೆಸರುವಾಸಿಯಾಗಿದ್ದನು. ಮಾಧವನು ಹುಡುಗನಾಗಿದ್ದಾಗಲೆ ಅವನ ತಾಯಿ ಸತ್ತುಹೋಗಿದ್ದಳು. ಅವನಿಗೆ ಗಂಗಾಬಾಯಿ ಹೊರತು ತಾಯಿಯ ಕಡೆಯ ಬಂಧುಗಳೇ ಇರಲಿಲ್ಲ. ಅವಳನ್ನು ನೋಡಿಕೊಂಡು ಬರುವುದಕ್ಕೋಸ್ಕರ ತಂದೆಯ ಅಪ್ಪಣೆ ಪಡೆದು ರಾಮಪುರಕ್ಕೆ ಬಂದಿದ್ದನು.

ಮಾಧವನು ಶ್ರೀಮಂತನ ಮಗನಾಗಿದ್ದರೂ ಸ್ವಲ್ಪವಾದರೂ ದಂಭವಾಗಲಿ, ಅಹಂಕಾರವಾಗಲಿ ಅವನಲ್ಲಿರಲಿಲ್ಲ. ಎಲ್ಲರಲ್ಲಿಯೂ ಕೇವಲ ವಿನಯದೊಡನೆ ಮಾತನಾಡುವನು. ಮನೆಯ ಆಳುಗಳೊಡನೆಯೂ ಅವನು ಕಠಿಣವಾಗಿ ಮಾತನಾಡಿದವನೇಅಲ್ಲ. ಯಾರಾದರೂ ತಮ್ಮ ಕಷ್ಟಗಳನ್ನು ಹೇಳಿಕೊಂಡರೆ ಅವುಗಳನ್ನು ಕೇಳಿದಮಾತ್ರಕ್ಕೇ ಅವನ ಕಣ್ಣಿನಲ್ಲಿ ನೀರು ಬಂದು ಬಿಡುವುದು. ಸರ್ವಪ್ರಯತ್ನದಿಂದಲೂ ಇತರರ ಕಷ್ಟವನ್ನು ನಿವಾರಣೆಮಾಡುವನು. ತಂದೆಯನ್ನು ಪರಮ ಗುರುವೆಂದು ಭಾವಿಸಿದ್ದನು. ಶಂಕರರಾಯನಿಗೆ ಇವನಲ್ಲಿದ್ದ ವಾತ್ಸಲ್ಯವು ಅಷ್ಟಿಷ್ಟೆಂದು ಹೇಳಬೇಕಾದುದೆ ಇಲ್ಲ. ಆತನು ಯಾವ ಕೆಲಸ ಮಾಡಬೇಕಾದರೂ ಮಗನ ಆಲೋಚನೆಯನ್ನು ಕೇಳದೆ ಮಾಡುತ್ತಿರಲಿಲ್ಲ.

ಇಂತಹ ಮಾಧವನಿಗೆ ಸುಭದ್ರೆಯ ವೃತ್ತಾಂತವನ್ನು ಕೇಳಿದ ಕೂಡಲೆ ಮನಸ್ಸಿನಲ್ಲಿ ಬಹು ಸಂಕಟವುಂಟಾಗಿ ಹೇಗಾದರೂ ಆಕೆಯ ಕಷ್ಟವನ್ನು ನಿವಾರಣೆಮಾಡಬೇಕೆಂಬ ಕುತೂಹಲವು ಹುಟ್ಟಿತು. ನಾನಾ ಮಾರ್ಗಗಳನ್ನು ಯೋಚಿಸುತ್ತಾ ಉಯ್ಯಾಲೆಯ ಸರಪಳಿಗಳನ್ನೊರಗಿಕೊಂಡು ಕುಳಿತಿದ್ದ ಹಾಗೆಯೆ ತೂಕಡಿಕೆ ಬರಲು ಮಲಗಿಕೊಂಡನು. ನಿದ್ರೆ ಬಂದಿತು. ಕನಸಿನಲ್ಲಿಯೂ ಸುಭದ್ರೆಯ ಮನೋಹರ

ವಾದ ರೂಪವೆ ಇವನೆದುರಿಗೆ ನಿಂತು ನಲಿದಾಡುತ್ತಿತ್ತು. ಹೀಗಿರು ವಾಗ್ಗೆ ಉಯ್ಯಾಲೆ ಸರಪಣಿಯು ಕಿರಕಿರ ಎಂದು ಶಬ್ದ ಮಾಡಲು ಥಟ್ಟನೆ ಎಚ್ಚರವಾಯಿತು, ಮನಸ್ಸಿನ ಆನಂದವೆಲ್ಲಾ ಭಗ್ನವಾಯಿತು. ಅಷ್ಟು ಹೊತ್ತಿಗೆ ಚಿಕ್ಕಮ್ಮನು ಬಂದು ಊಟಕ್ಕೆ ಎಬ್ಬಿಸಿದಳು, ಮಧ್ಯಾ ಹ್ನವಾಗಿತ್ತು. ಊಟವಾದನಂತರ ಚಿಕ್ಕಮ್ಮನೊಡನೆ ಊರಿನ ಯೋಗ ಕ್ಷೇಮಗಳನ್ನು ಮಾತನಾಡುತ್ತಾ ಆ ದಿನವನ್ನು ಕಳೆದನು.

———o———

## — ನಾಲ್ಕನೆಯ ಅಧ್ಯಾಯ —

ರಾಮರಾಯನು ರಾಮಪುರದಲ್ಲಿ ಅಗ್ರಗಣ್ಯನಾದ ಮನುಷ್ಯ; ದೊಡ್ಡ ಮನೆತನಕ್ಕೆ ಸೇರಿದವನು. ತನ್ನ ಮಗಳನ್ನು ಅನುರೂಪನಾದ ವರನಿಗೆ ಕೊಟ್ಟು ಮದುವೆ ಮಾಡಬೇಕೆಂಬ ಆಶೆ ಯಿದ್ದಿತು. ಶಂಕರರಾಯನಿಗೂ ರಾಮರಾಯನಿಗೂ ಪೂರ್ವದಿಂದ ಲೂ ಸ್ನೇಹ. ಅಲ್ಲದೆ ಸ್ವಲ್ಪ ಬಂಧುತ್ವವೂ ಇದ್ದಿತು. ಆದುದರಿಂದ ಕಮಲೆಯನ್ನು ಮಾಧವನಿಗೆ ತಂದುಕೊಳ್ಳಬೇಕೆಂದು ೩-೪ ವರ್ಷಗಳ ಹಿಂದೆಯೆ ಶಂಕರರಾಯನಿಗೆ ಕಾಗದ ಬರೆದಿರಲಾಗಿ ಆತನು, ನಮ್ಮ ಹುಡುಗನಿಗೆ ೨೦ ವರ್ಷ ತುಂಬಿದಲ್ಲದೆ ಮದುವೆಮಾಡುವುದಿಲ್ಲ ವೆಂದು ಉತ್ತರಕೊಟ್ಟಿದ್ದನು. ಆಗ್ಗೆ ರಾಮರಾಯನು ಸುಮ್ಮನಿದ್ದು ಬಿಟ್ಟನು. ಹುಡುಗಿಗೆ ೧೫ ವರ್ಷವಾಗಲು, ಇನ್ನು “ನಿಲ್ಲಿಸುವುದ ಕ್ಕಾಗುವುದಿಲ್ಲ, ಈ ವರ್ಷ ಖಂಡಿತವಾಗಿಯೂ ವಿವಾಹವನ್ನು ನೆರ ವೇರಿಸಲೇಬೇಕು” ಎಂದು ತಿರಿಗಿ ಬರೆದನು. ಶಂಕರರಾಯನಿಗೆ ಸಕಾ ಲವಾಗಿ ಕಂಡುದರಿಂದಲೂ, ರಾಮರಾಯನಿಗಿಂತ ಯೋಗ್ಯರೂ, ಕುಲೀನರೂ ಸಿಕ್ಕುವುದು ಕಷ್ಟವಾಗಿದ್ದುದರಿಂದಲೂ— “ನಮ್ಮ ಹುಡುಗನು ರಾಮಪುರಕ್ಕೆ ಬಂದಿದ್ದಾನೆ, ಅವನಿಗೆ ವಯಸ್ಸಾಗಿರು

ವುದರಿಂದ ಕನ್ಯೆಯನ್ನೊಪ್ಪುವ ಭಾರವು ಅವನದಾಗಿದೆ, ಅವನೊಪ್ಪಿದರೆ ನನ್ನ ಅಡ್ಡಿಯೇನೂ ಇಲ್ಲ. ನಕ್ಷತ್ರಾನುಕೂಲವಾದರೆ ಸರಿ'' ಎಂದು ಪ್ರತ್ಯುತ್ತರವನ್ನು ಬರೆದನು. ಅದು ಮಾಧವನು ರಾಮಪುರಕ್ಕೆ ಬಂದ ಮಾರಣೆಯದಿನ ರಾಮರಾಯನ ಕೈಸೇರಿತು. ಆಕಾಗದವನ್ನು ತೆಗೆದುಕೊಂಡು ರಾಮರಾಯನು ಮಾಧವನನ್ನು ನೋಡುವುದಕ್ಕೋಸ್ಕರ ಗಂಗಾಬಾಯಿಯ ಮನೆಗೆ ಹೋದನು. ಗಂಗಾಬಾಯಿಯು ಪಾಠಶಾಲೆಗೆ ಹೋಗಿದ್ದಳು. ಮಾಧವನೊಬ್ಬನೇ ಮನೆಯಲ್ಲಿದ್ದನು. ಮಾಧವನಿಗೂ ರಾಮರಾಯನಿಗೂ ಕುಶಲಪ್ರಶ್ನೆಗಳು ನಡೆದ ಬಳಿಕ ರಾಮರಾಯನು, ಶಂಕರರಾಯನ ಕಾಗದವನ್ನು ತೆಗೆದು ಮಾಧವನ ಕೈಯಲ್ಲಿಟ್ಟನು. ಅದನ್ನು ನೋಡಿದಕೂಡಲೆ ಮಾಧವನು ‹‹ಸ್ವಾಮಿ! ನಮ್ಮ ತಂದೆಗಳ ಮಾತಿಗೆ ನಾನು ಯಾವಾಗಲೂ ಪ್ರತಿ ಹೇಳಿದುದಿಲ್ಲ. ಇದರಲ್ಲಿ ನನಗೆ ಅಭಿಪ್ರಾಯವು ಅನ್ಯಥಾ ಇದ್ದಾಗ್ಯೂ ಅವರ ಅಪ್ಪಣೆಯಾದರೆ ನನ್ನ ಯತ್ನವೇನಿದೆ'' ಎಂದನು. ಅದಕ್ಕೆ ರಾಮರಾಯನು —‹‹ಹಾಗಲ್ಲ, ನಮ್ಮ ಮನೆಗೆ ಬಂದು ಕನ್ಯೆಯನ್ನು ನೋಡಿಕೊಂಡು ಹೋಗುವುದು ಈಗಿನ ಕಾಲದ ಪದ್ಧತಿ. ದಯವಿಟ್ಟು ಬಂದು ನೋಡಿಕೊಂಡು ಹೋಗಬೇಕು'' ಎಂದನು. ಮಾಧವನು ‹ಮಧ್ಯಾಹ್ನ ಬಂದು ತಮ್ಮ ದರ್ಶನ ತೆಗೆದುಕೊಳ್ಳುತ್ತೇನೆ'' ಎಂದು ಹೇಳಿ ರಾಮರಾಯನನ್ನು ಕಳುಹಿಸಿಕೊಟ್ಟನು.

ಗಂಗಾಬಾಯಿ ಪಾಠಶಾಲೆಯಿಂದ ಬಂದಕೂಡಲೆ ಮಾಧವನು ಆಕೆಗೆ ಈ ವೃತ್ತಾಂತವನ್ನು ತಿಳಿಸಿದನು. ಅವಳು—‹‹ಅಪ್ಪಾ! ಕಮಲೆಯು ಗರ್ವಿತಳು, ನಿನಗೆ ತಕ್ಕವಳಲ್ಲ. ನಿಮ್ಮ ತಂದೆಯು ರಾಮರಾಯನ ಭಾಗ್ಯಕ್ಕೆ ಬೆರಗಾಗಿ ಬಂಧುತ್ವ ಬಳೆಸಬೇಕೆಂದು ಇಷ್ಟಪಟ್ಟಿರಬಹುದು, ಮಧ್ಯಾಹ್ನ ಹೋಗಿ ನೋಡಿಕೊಂಡು ಬಾ, ಮುಂದಿನ ಕೆಲಸ ನೋಡೋಣ'' ಎಂದಳು.

ಮಧ್ಯಾಹ್ನ ರಾಮರಾಯನು ಬಂದು ಮಾಧವನನ್ನು ಮನೆಗೆ ಕರೆದುಕೊಂಡು ಹೋಗಿ ಉಪ್ಪರಿಗೆಯಮೇಲೆ ''ಸೋಫಾ'' ದ ಮೇಲೆ ಕುಳ್ಳಿರಿಸಿದನು. ಅನಂತರ ಹೆಂಡತಿಯನ್ನು ಕರೆದು ''ನಿನ್ನ ಅಳಿಯನನ್ನು ನೋಡು ಬಾ'' ಎಂದನು. ಆಕೆಯು ಎಷ್ಟಾವೃತ್ತಿ ನೋಡಿದರೂ ತೃಪ್ತಿಯಾಗದೆ ನೆರೆಹೊರೆಯವರನ್ನು ಕರೆದುಕೊಂಡು ಬಂದಳು. ಹಾಗೆಯೆ ಕಮಲೆಯನ್ನು ಮಾಧವನ ಬಳಿ ನಿಲ್ಲಿಸಿ ಅನಂತರ ಸೋಫಾದ ಮೇಲೆ ಕುಳ್ಳಿರಿಸಿದರು. ಮಾಧವನಿಗೆ ಅವಳನ್ನು ನೋಡಿದೊಡನೆಯೆ ಜಿಗುಪ್ಸೆಯುಂಟಾಯಿತು. ಅವಳ ರೂಪಲಾವಣ್ಯವೆಲ್ಲವೂ ಉಡಿಗೆ ತೊಡಿಗೆಗಳನ್ನು ಸೇರಿದ್ದಿತೇ ಹೊರತು ಅವಳಲ್ಲಿ ನೈಜವಾದ ಸೊಬಗಾವುದೂ ಕಂಡುಬರಲಿಲ್ಲ, ಅಲ್ಲದೆ ಮುಖದಲ್ಲಿ ಗರ್ವವು ಉಕ್ಕಿಬರುವಂತಿದ್ದಿತು. ಕೂಡಲೆ ಮಾಧವನಿಗೆ ಸುಭದ್ರೆಯ ಜ್ಞಾಪಕವು ಬಂದಿತು. ಅವಳಿಗೂ ಇವಳಿಗೂ ಇರುವ ತಾರತಮ್ಯವನ್ನು ಮನಸ್ಸಿನಲ್ಲಿ ಗಣಿಸುತ್ತಿದ್ದನು.

ನೆರಹೊರೆಯ ಹೆಂಗಸರೆಲ್ಲರೂ ಬಂದು ನೋಡಿ ವರಸಾಮ್ಯವನ್ನು ಬಹಳ ಶ್ಲಾಘನೆಮಾಡಿದರು. ಕಮಲೆಯ ತಾಯಿಯ ಸಂತೋಷವೆಷ್ಟೆಂದು ಹೇಳಬೇಕಾದುದೇ ಇಲ್ಲ. ಬಂದಿದ್ದವರೆಲ್ಲರಿಗೂ ಯಥೋಚಿತವಾಗಿ ಸತ್ಕಾರಮಾಡಿ ಕಳುಹಿಸಿದಳು. ಮಾಧವನೂ ರಾಮರಾಯನ ಅಪ್ಪಣೆ ತೆಗೆದುಕೊಂಡು ಹೊರಟುಹೋದನು.

——o——

## — ಐದನೆಯ ಅಧ್ಯಾಯ —

ರಾಮರಾಯರ ಮಗಳನ್ನು ಜಹಗೀರ್ದಾರ ಶಂಕರರಾಯರ ಮಗನಿಗೆ ಕೊಡುತ್ತಾರಂತೆ—ಎಂಬ ವದಂತಿಯು ಊರಲ್ಲೆಲ್ಲಾ

ಹರಡಿಕೊಂಡಿತು. ರಾಮರಾಯನ ಮನೆಗೆಹೋಗಿ ಕನ್ಯೆಯನ್ನೂ ವರನನ್ನೂ ನೋಡಿಕೊಂಡು ಬಂದಿದ್ದ ಹೆಂಗಸರು ಅಲ್ಲಲ್ಲಿ ತಮ್ಮ ಪರಿಚಿತರೊಡನೆ ವರಸಾಮ್ಯವನ್ನು ವರ್ಣಿಸತೊಡಗಿದರು.

ಒಂದನೆಯವಳು—ಏನು ಪುಣ್ಯವಂತಳಮ್ಮಾ ಕಮಲೆ ! ಅಂತಹ ಗಂಡನನ್ನು ಪಡೆಯಬೇಕಾದರೆ ಪೂರ್ವಜನ್ಮದಲ್ಲಿ ಎಷ್ಟು ಒಳ್ಳೆಯ ಪೂಜೆಯನ್ನು ಮಾಡಿದ್ದಳೊ !

ಎರಡನೆಯವಳು—ಅಲ್ಲವೇನ್ರಮ್ಮ—ಮತ್ತೆ ! ಕಮಲೆ ಆ ಹುಡುಗನ ಉಂಗುಷ್ಟವನ್ನೂ ಹೋಲಲಾರಳು.

ಮೂರನೆಯವಳು—ಹಾಗುಂಟೆ ? ಕಮಲೆಯು ಸೌಂದರ್ಯದಲ್ಲೇನು ಕಡಿಮೆ ? ಆ ಜರತಾರಿ ಸೀರೆಯನ್ನುಟ್ಟುಕೊಂಡು ಸೋಫಾದ ಮೇಲೆ ಕೂತಿದ್ದರೆ ಸುಮ್ಮನೆ ವರಲಕ್ಷ್ಮಿಯಹಾಗೆ ಕಾಣುತ್ತಿದ್ದಳಲ್ಲ ! ಅವಳ ವಜ್ರದ ಬುಲಾಕೊಂದೇ ಸಾಲದೆ ?

ನಾಲ್ಕನೆಯವಳು—ಸರಿ ! ಸರಿ ! ನೀವು ಹೇಳಿದ್ದು ನಿಜವೆ; ಕಲಾಬತ್ತಿನ ಪೀತಾಂಬರ, ವಜ್ರದ ಬುಲಾಕು, ಕೆಂಪಿ ನೋಲೆ, ಅಡ್ಡಿಕೆ, ವಂಕಿ ಇವುಗಳೆಲ್ಲವೂ ಬಹು ಚೆನ್ನಾಗಿದ್ದುವು

ಐದನೆಯವಳು—ನೀವೇನುಬೇಕಾದರೂ ಹೇಳಿ. ಭಾಗ್ಯವೇ ಸೊಬಗು.

ಹೀಗೆಲ್ಲರೂ ಮಾತನಾಡುತ್ತಿರುವಾಗ್ಗೆ ರಮಾಬಾಯಿ ಅಲ್ಲಿಗೆ ಬಂದಳು. ಆಕೆಯ ಮನೆಯ ಎದುರುಮನೆಯಲ್ಲಿ ಈ ಮಾತುಗಳು ನಡೆಯುತ್ತಿದ್ದವು. ಅವಳು ಬರುವ ಹೊತ್ತಿಗೆ ಸರಿಯಾಗಿ ಕಮಲೆಯ ಸೌಂದರ್ಯ ಪ್ರಶಂಸೆಯಾಗುತ್ತಿತ್ತು. ಕಮಲೆಯ ಮಾತು ಬರಲು

ಕಾರಣವೇನೆಂದು ಕೇಳಲು ಪುನಹೆಯಲ್ಲಿರುವ ಜಹಗೀರ್ದಾರ ಶಂಕರ ರಾಯರ ಮಗನಿಗೆ ಆಕೆಯನ್ನು ಕೊಡುತ್ತಾರೆಂದು ತಿಳಿಯಬಂದಿತು.

"ಆ ಹುಡುಗನ ಹೆಸರೇನು ?'' ಎಂದು ರಮಾಬಾಯಿ ಕೇಳಿದಳು. "ಅದೇನೋಮ್ಮ ನಮಗೆ ತಿಳಿಯದು. ಗಂಗಾಬಾಯಿಯ ಅಕ್ಕನ ಮಗನಂತೆ. ಆಕೆಯ ಮನೆಯಲ್ಲಿ ಇಳಿದುಕೊಂಡಿದ್ದಾನಂತೆ. ಅದುಸರಿ, ರಮಾಬಾಯಿ! ನಾನು ಆ ಹುಡುಗನನ್ನು ಚನ್ನಾಗಿ ನೋಡಿದೆ. ಎಷ್ಟು ನೋಡಿದರೂ ತೃಪ್ತಿಯಾಗಲಿಲ್ಲ. ಕಮಲೆಯನ್ನೂ ನೋಡಿದೆ. ಆವನಿಗೂ ಅವಳಿಗೂ ಸಾಮ್ಯವೆ ಇರಲಿಲ್ಲ. ಹಾಗೆಯೆ ಅಲ್ಲಿ ನಿಮ್ಮ ಸುಭದ್ರೆಯನ್ನು ಯಾವ ಒಡವೆವಸ್ತು ಇಲ್ಲದೆ ಕುಳ್ಳಿರಿಸಿದ್ದರೂ ಎಷ್ಟೋ ಚೆನ್ನಾಗಿರುತ್ತಿತ್ತು ಎಂದಂದುಕೊಂಡೆ. ನೀವು ಏನೇ ಹೇಳಿ. ಆ ಹುಡುಗನಿಗೆ ಸುಭದ್ರೆಯನ್ನು ಬಿಟ್ಟರೆ.ಸರಿಯಾದ ಕನ್ನೆಯೇ ಇಲ್ಲ'',

ರಮಾಬಾಯಿ—ಹೌದ್ರಮ್ಮಾ ! ನೀವು ಹೇಳಿದುದೆಲ್ಲಾ ಸರಿಯೆ. ನಮ್ಮಂತಹ ಬಡವರನ್ನು ಅವರು ಕಣ್ಣೆತ್ತಿ ನೋಡುವರೆ ? ನೀವೇ ಹೇಳಿ.

ನಾಗೂಬಾಯಿ—ಅದೇನೋ ನಿಜ. ಹಲ್ಲಿದ್ದರೆ ಕಡಲೆಯಿಲ್ಲ, ಕಡಲೆಯಿದ್ದರೆ ಹಲ್ಲಿಲ್ಲ, ಎಂಬುವ ಗಾಥೆಗೆ ಸರಿಯಾಗಿದೆ. ಅದು ಹಾಗಿರಲಿ, ನಾನೊಂದು ವರ್ತಮಾನವನ್ನು ಕೇಳಿದೆನಲ್ಲಾ ?

ರಮಾ—ಏನದು ?

ನಾಗು—ಸುಭದ್ರೆಗೆ ಮದುವೆಯೆಂದು ಕೇಳಿದೆ, ಯಾರಿಗೆ ಕೊಡುತ್ತೀರಿ ?

ರಮಾ—ಆದಕಾಲಕ್ಕೆ ಹೇಳುತ್ತೇನಮ್ಮ. ಪ್ರತಿವರ್ಷವೂ ಪ್ರಯತ್ನ ಮಾಡುವುದು, ನಿಂತುಹೋಗುವುದು, ಹೀಗೆಯೆ ಆಗುತ್ತಿದೆ.

ನಾಗು—(ತಾನು ಕೇಳಿದ ಪ್ರಶ್ನೆಗೆ ಉತ್ತರ ಬಾರದಿರಲು) ಆದಕ್ಕಲ್ಲವಮ್ಮ, ನಿನ್ನೆ ಒಬ್ಬ ಮುದುಕನು ನಿಮ್ಮ ಮನೆಯನ್ನು ಹುಡುಕಿಕೊಂಡು ಬಂದಿದ್ದನು. ಅವನ ಪಟಾಟೋಪವನ್ನು ನೋಡಿ ಭಯವುಂಟಾಗಿದ್ದಿತು.

ರಮಾ—ಸರಿ! ಸರಿ! ಮುದುಕರೆ? ಯಾರೆಂದರು? ಅವರಿಗಿನ್ನೂ ನಲವತ್ತೊಂಬತ್ತು ವರ್ಷ ತುಂಬಿ ಐವತ್ತನೆಯ ವರ್ಷ ನಡೆಯುತ್ತಿದೆ.

ನಾಗು—ಓಹೊ ! ಹಾಗಾದರೆ ನನ್ನ ಊಹೆಯು ಸರಿಯಾಯಿತು. ರಮಾಬಾಯಿ ! ಆ ಮುದಿಗೃದ್ಧ್ರನಿಗೆ ಕೊಡುವುದಕ್ಕಿಂತ ಹುಡುಗಿಯನ್ನು ಮಡುವಿನಲ್ಲಾದರೂ ಹಾಕಿಬಿಡಬಾರದೆ ?

ರಮಾ—ಇದೇನ್ರಮ್ಮ ! ಹೀಗೆಹೇಳುತ್ತೀರಿ? ನಮ್ಮ ಮನೆಯ ಸುದ್ದಿಯನ್ನು ಕಟ್ಟಿಕೊಂಡು ನಿಮಗೇನು? ಸುಮ್ಮನಿರಿ.

ನಾಗು—(ಗಮನಕೊಡದೆ) ನಾನು ನಿಮಗೆ ಒಳ್ಳೇದಕ್ಕೋಸ್ಕರವೆ ಹೇಳುವುದು. ದಾರಿಯಲ್ಲಿ ಹೋಗುವ ಯಾವನಾದರೂ ಬ್ರಹ್ಮಚಾರಿಯನ್ನು ಕರೆದು ಕನ್ಯಾದಾನ ಮಾಡಿ. ನಿಮಗೆ ಪುಣ್ಯವುಂಟು. ಅನ್ಯಾಯವಾಗಿ ಆ ಹುಡುಗಿಯ ತಲೆಯಮೇಲೆ ಕಲ್ಲುಹಾಕಬೇಡಿ–ನನ್ನನ್ನು ನೋಡಿದರೆ ನಿಮಗೆ .....

ರಮಾಬಾಯಿಗೆ ರೇಗಿಹೋಯಿತು. "ಸಾಕಮ್ಮ–ನಿಮ್ಮ ಧರ್ಮ, ಏನಾದರೂ ನುಡಿಯಬೇಡಿ'' ಎಂದು ಬಹು ವೇಗವಾಗಿ ಹೋದಳು.

ನಾಗೂಬಾಯಿಯ ತಂದೆತಾಯಿಗಳು ಆಕೆಯನ್ನು ಹಣದ ಆಶೆಗೋಸ್ಕರ ಒಬ್ಬ ಮುದುಕನಿಗೆ ಕೊಟ್ಟು ಮದುವೆಮಾಡಿದ್ದರು.

ಮದುವೆಯಾದ ಮೂರುವರ್ಷಗಳೊಳಗೆ ಆಕೆ ವಿತಂತುವಾಗಿ ತಿನ್ನುವುದಕ್ಕೂ ಗತಿಯಿಲ್ಲದೆ ತಂದೆಯ ಮನೆಯಲ್ಲಿ ಸೇರಿಕೊಂಡಿದ್ದಳು. ಆದುದರಿಂದಲೇ ಆಕೆ ತನ್ನ ಸಾಮತಿಯನ್ನು ಹೇಳುವುದಕ್ಕೆ ಪ್ರಾರಂಭಿಸಿದೊಡನೆಯೆ ರಮಾಬಾಯಿಗೆ ಶಿಟ್ಟುಬಂದುದು.

ರಮಾಬಾಯಿ ಹೋಗುವುದನ್ನು ನೋಡುತ್ತಾ ನಾಗೂಬಾಯಿ ತನ್ನೊಳಗೆ ತಾನು, "ಕೆಟ್ಟಮೇಲೆ ಬುದ್ಧಿ ಬರಬೇಕಾದುದು ಲೋಕಧರ್ಮ. ನೀವೇನು ಮಾಡೀರಿ?" ಎಂದಂದುಕೊಂಡು ಮನೆಗೆ ಹೊರಟುಹೋದಳು.

—— ——()— ——

## — ಆರನೆಯ ಅಧ್ಯಾಯ —

ಮಾಧವನು ಕತ್ತಲೆಯಾಗುವುದಕ್ಕೆ ಮುಂಚೆಯೆ ಮನೆಗೆ ಬಂದನು. ಸುಭದ್ರೆಯು ಉಪಾಧ್ಯಾಯೆಯ ಮನೆಯಿಂದ ಆಗತಾನೆ ಹೊರಕ್ಕೆ ಬರುತ್ತಿದ್ದಳು. ಅವಳು ತಲೆಬಾಗಿಲ ಬಳಿ ಬರುವ ಹೊತ್ತಿಗೆ ಸರಿಯಾಗಿ ಮಾಧವನು ಎದುರಿಗೆ ಬಂದನು. ಇವರಿಬ್ಬರ ನೋಟಗಳೂ ಸಂಧಿಸಿದುವು. ಸುಭದ್ರೆ ಲಜ್ಜೆಯಿಂದ ಕೆಂಪೇರಿದಮುಖವುಳ್ಳವಳಾಗಿ ತಲೆಯನ್ನು ತಗ್ಗಿಸಿಕೊಂಡು ಹೊರಟು ಹೋದಳು. ಅವಳ ಹೃದಯವು ಅನಿರ್ವಚನೀಯವಾದ ಆನಂದದಿಂದ ಪರಿಪೂರ್ಣವಾಗಿದ್ದಿತು.

ಮಾಧವನೂ ಏನೋ ಯೋಚಿಸುತ್ತಾ ಮನೆಯೊಳಕ್ಕೆ ಹೋದನು. ಗಂಗಾಬಾಯಿ—"ಏನಪ್ಪಾ ಸಮಾಚಾರ? ಏನೇನು ಕಾರುಬಾರು ಮಾಡಿಕೊಂಡು ಬಂದೆ?" ಎಂದು ಕೇಳಿದಳು. ಮಾಧವನು ಅಲ್ಲಿ ನಡೆದ ವೃತ್ತಾಂತವನ್ನೆಲ್ಲಾ ಹೇಳಿದನು.

ಗಂಗಾಬಾಯಿ—ಈ ವಿಚಾರದಲ್ಲಿ ನಿನ್ನ ಅಭಿಪ್ರಾಯವೇನು?

ಮಾಧವ—ಅದು ಹಾಗಿರಲಿ. ನಿನ್ನೆಯ ದಿನ ನಿನ್ನ ಬಳಿ ಕುಳಿತುಕೊಂಡು ಅಳುತ್ತಿದ್ದ ಹುಡುಗಿಗೆ ಯಾವಾಗ ಮದುವೆಯಂತೆ ?

ಗಂಗಾ—ಇನ್ನೇನು ಹತ್ತಿರಕ್ಕೆ ಬಂದಿತು.

ಮಾಧವ—ಅದನ್ನು ತಪ್ಪಿಸುವುದಕ್ಕಾಗುವುದಿಲ್ಲವೆ?

ಗಂಗಾ—ತಪ್ಪಿಸಿ ಆಗುವುದೇನು? ಅವಳಿಗಂತೂ ಮದುವೆಯಾಗಲೇ ಬೇಕಷ್ಟೆ.

ಮಾಧವ—ಆದರೆ ಮುದುಕನಿಗೆ ಕೊಡುವುದೆ ?

ಗಂಗಾ—ಮಾಡುವುದೇನು ? ಬೇರೆ ವರನೆಲ್ಲಿ ಸಿಕ್ಕುವನು ?

ಮಾಧವ—ಅಷ್ಟು ಚೆಲುವೆಯಾದ ಹುಡುಗಿಗೆ ವರನು ಸಿಕ್ಕುವುದಿಲ್ಲವೆ?

ಗಂಗಾ—ಈಗಿನ ಕಾಲದಲ್ಲಿ ವರದಕ್ಷಿಣೆ ಮುಖ್ಯವಲ್ಲದೆ ರೂಪವಾಗಲಿ, ಗುಣವಾಗಲಿ, ಕುಲೀನತೆಯಾಗಲಿ ಗಣನೆಗೆ ಬರುವುದಿಲ್ಲ.

ಮಾಧವ—ಅವಳಿಗೆ ವರದಕ್ಷಿಣೆಯನ್ನು ಕೇಳದಂತಹ ವರನನ್ನು ಹುಡುಕಿಕೊಡಲಾರೆಯಾ ?

ಗಂಗಾ— (ಮಾಧವನ ಮುಖವನ್ನು ಚೆನ್ನಾಗಿ ನೋಡಿ ನಗುತ್ತ) ನೀನು ಮನಸ್ಸುಮಾಡಿದರಾಗುತ್ತದೆ.

ಮಾಧವ—ನಾನು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡೇ ಇದ್ದೇನೆ

ಗಂಗಾ—ಏನೆಂದು ?

ಮಾಧವ—ಆ ಹುಡುಗಿಗೆ ನಾನೇ ವರನಾಗುವೆನೆಂದು.

ಗಂಗಾ—ಇದು ಬರಿಯಮಾತು.

ಮಾಧವ—ಎಂದಿಗೂ ಅಲ್ಲ. ನೀನು ಮಾತ್ರ ಈ ಮದುವೆಯನ್ನು

ನಿಲ್ಲಿಸಿದರೆಈಶ್ವರಸಾಕ್ಷಿಯಾಗಿಯೂನಾನುಅವಳನ್ನಲ್ಲದೆಬೇರೊಬ್ಬರನ್ನೂ ಮದುವೆಮಾಡಿಕೊಳ್ಳುವುದಿಲ್ಲ.

ಗಂಗಾ—ಹಾಗೆಪ್ರತಿಜ್ಞೆ ಮಾಡಬೇಡ. ನಿನ್ನ ಅಂತಸ್ತಿಗೂ ಅವಳಅಂತಸ್ತಿಗೂ ಬಲು ದೂರವಿರುವದು, ಅಲ್ಲದೆ ನಿಮ್ಮ ತಂದೆಯವರ ಅಭಿಪ್ರಾಯವನ್ನು ಕೇಳಬೇಡವೆ

ಮಾಧವ—ಅವರು ನನಗೆ ಈವಿಚಾರದಲ್ಲಿ ಸ್ವಾತಂತ್ರ್ಯವನ್ನು ಕೊಟ್ಟಿರುವರಲ್ಲ !

ಗಂಗಾ—ಅವರು ನಿನಗೆ ಅಷ್ಟೊಂದು ಸ್ವಾತಂತ್ರ್ಯವನ್ನು ಕೊಟ್ಟಿಲ್ಲ. ಕುಲಗೋತ್ರ ಮುಂತಾದುವುಗಳನ್ನು ಅವರು ಒಪ್ಪಬೇಕು.

ಮಾಧವ—ನಾನಂತೂ ಪ್ರತಿಜ್ಞೆ ಮಾಡಿಬಿಟ್ಟೆ. ಇನ್ನು ನನ್ನ ಜೀವವಿರುವವರೆಗೂ ಅದಕ್ಕೆ ತಪ್ಪಲಾರೆ.

ಗಂಗಾಬಾಯಿಯು ಸುಮ್ಮನಾದಳು.

ಅತ್ತ ಸುಭದ್ರೆಯು ಮನೆಯನ್ನು ಸೇರಿದಮೇಲೆ ಪುಸ್ತಕವನ್ನು ತೆಗೆದುಕೊಂಡು ಓದುವುದಕ್ಕೆ ಕುಳಿತಳು. ಪುಸ್ತಕವನ್ನು ನೋಡಲಿ, ಆಕಾಶವನ್ನು ನೋಡಲಿ, ಗೋಡೆಯನ್ನು ನೋಡಲಿ, ಒಂದೇರೂಪವಾಗಿ ಕಾಣುತ್ತಿದ್ದಿತು. ಎಲ್ಲಿ ನೋಡಿದರೂ ಅಪರಮಸುಂದರವಾದ ಮುಖ!

ಅನಂತರ ಊಟಕ್ಕೆ ಕುಳಿತಾಗ್ಗೆ ರಮಾಬಾಯಿ ಗಂಡನೊಡನೆ "ರಾಮರಾಯರ ಮನೆಯಲ್ಲಿ ಮಗಳಿಗೆ ಮದುವೆಯಂತೆ, ಕೇಳಿದಿರಾ?" ಎಂದಳು.

ವಿಶ್ವನಾಥ—ನನಗೆ ತಿಳಿದಿರಲಿಲ್ಲ—ವರನು ಯಾರು ?

ರಮಾಬಾಯಿ—ಪುನಹೆ ಜಹಗೀರ್ದಾರ ಶಂಕರರಾಯರಮಗನಂತೆ, ಆ ಹುಡುಗನೂ ಇಲ್ಲೆ ಬಂದು ಗಂಗಾಬಾಯಮ್ಮನವರ ಮನೆಯಲ್ಲಿಳಿದಿದ್ದಾನಂತೆ.

ವಿಶ್ವ—ಗಂಗಾಬಾಯಿಯ ಅಕ್ಕನನ್ನೆ ಶಂಕರರಾಯರಿಗೆಕೊಟ್ಟಿದ್ದುದು. ಆದುದರಿಂದ ಅಲ್ಲಿಗೆ ಬಂದಿರಬಹುದು.

ಸುಭದ್ರೆಯು ಒಂದು ತುತ್ತನ್ನು ಬಾಯಿಹತ್ತಿರ ತೆಗೆದು ಕೊಂಡು ಹೋಗಿದ್ದವಳು ಈ ಮಾತು ಕೇಳುತ್ತಲೆ ಚಮಕಿತಳಾಗಿ ಕೆಳಕ್ಕೆ ಬಿಟ್ಟುಬಿಟ್ಟಳು.

ವಿಶ್ವ—ಲಗ್ನ ಯಾವಾಗಲೊ?

ರಮಾ—ಕೂಡಲೆ ಆಗಬಹುದು.

ಅಲ್ಲಿಗೆ ಮಾತು ನಿಂತಿತು. ಸುಭದ್ರೆಯಮನಸ್ಸು ವಿಕಾರವನ್ನು ಹೊಂದಿತು. ಅವಳು ತನ್ನೊಳಗೆತಾನೆ—"ಇದೇನಾಶ್ಚರ್ಯ? ಕಮಲೆಗೆ ಮದುವೆಯಾದರೆ ನನಗೇನು ಸಂಕಟ?" ಎಂದಂದುಕೊಂಡಳು. ಆದರೂ ಮನಸ್ಸಿನ ವಿಷಾದವು ಹೋಗಲಿಲ್ಲ.ಊಟವು ರುಚಿಸಲಿಲ್ಲ, ರಾತ್ರಿ ನಿದ್ರೆಯೂಬರಲಿಲ್ಲ. ಒಂದು ಸಲ, "ಅಯ್ಯೋ! ಹುಚ್ಚಳೆ! ನಿನಗೇತಕ್ಕೆ ಬರಿಯಾಸೆ? ತಿರುಕನು ಕನಸು ಕಂಡಹಾಗೆಯಾವುದೊ ಒಂದು ಉತ್ಕೃಷ್ಟ ಪದಾರ್ಥವನ್ನು ನೆನಸಿಕೊಂಡ ಮಾತ್ರಕ್ಕೆ ನಿನಗೆ ಸಿಕ್ಕಿಬಿಡುವುದೆ? ಏತಕ್ಕೆ ವೃಥಾಮನಃಕ್ಲೇಶ" ಎಂದು ತನ್ನನ್ನು ತಾನೆ ಬೈದುಕೊಳ್ಳುವಳು. ಉತ್ತರಕ್ಷಣದಲ್ಲಿಯೆ—"ಆ ಪ್ರೇಮಪೂರಿತವಾದ ವಿಶಾಲನೇತ್ರಗಳೊ ? ಆ ಮಂದಹಾಸಯುಕ್ತವಾದ ಮುಖವೊ? ಇವುಗಳನ್ನು ನಾನು ನೋಡಿದುದು ಸುಳ್ಳೆ?" ಎಂದು ಸಮಾಧಾನಮಾಡಿಕೊಳ್ಳುವಳು. ಹೀಗೆ ಒಂದು ರಾತ್ರಿಯನ್ನು ಒಂದು ಯುಗವಾಗಿ ಕಳೆದಳು.

——0——

## — ಏಳನೆಯ ಅಧ್ಯಾಯ —

ವಿಶ್ವನಾಥನ ಮನೆಯಲ್ಲಿ ಈದಿನ ದೇವರ ಸಮಾರಾಧನೆ. ನಾಳೆ ಧಾರಾಮುಹೂರ್ತ. ರಮಾಬಾಯಿಯ ಕಡೆ ಬಂಧುಬಳಗವೆಲ್ಲವೂ ಬಂದು ಸೇರಿದೆ. ವಿಶ್ವನಾಥನ ಕಡೆಯವರೂ ಕೆಲವು ಮಂದಿ ಬಂದಿದ್ದಾರೆ. ಮನೆಯು ಬಹಳ ಗದ್ದಲವಾಗಿದೆ.

ಮಧ್ಯಾಹ್ನ ಭೋಜನವಾಯಿತು. ರಾತ್ರಿ ವರನನ್ನು ಎದುರುಗೊಳ್ಳುವುದು, ವರಪೂಜೆ, ಮುಂತಾದ ಶಾಸ್ತ್ರಗಳು ನಡೆಯಬೇಕು ಎಲ್ಲರೂ ಅವರವರಿಗೆ ತಕ್ಕಷ್ಟು ಶೃಂಗಾರಗಳನ್ನು ಮಾಡಿಕೊಂಡರು. ಊರಹೊರಗಿನ ಸತ್ರದಲ್ಲಿ ವರನನ್ನಿಳಿಸಿದ್ದರು. ಅಲ್ಲಿಗೆ ಹೋಗಲು ಎಲ್ಲರೂ ಸಿದ್ಧರಾದರು. ರಾತ್ರಿ ೮ ಗಂಟೆಸಮಯ. ಶುಭವಾದ್ಯಗಳೊಡನೆ ಮೆರವಣಿಗೆಯು ಹೊರಟಿತು ಅಷ್ಟು ಹೊತ್ತಿಗೆ ಸರಿಯಾಗಿ ಇಬ್ಬರು ಕರೀ ನಿಲುವಂಗಿಗಳನ್ನು ಹಾಕಿಕೊಂಡು ಕೆಂಪು ಪಗಡಿಯನ್ನು ಸುತ್ತಿಕೊಂಡು, ಕೈಯಲ್ಲಿ ದೊಡ್ಡ ದೊಣ್ಣೆಗಳನ್ನು ಹಿಡಿದುಕೊಂಡು ಬಂದು ವಿಶ್ವನಾಥನ ಮನೆಯೆದುರಿಗೆ ನಿಂತರು. ಪೋಲೀಸಿನವರನ್ನು ನೋಡಿದ ಕೂಡಲೆ ಎಲ್ಲರಿಗೂ ದಿಗ್ಭ್ರಮೆಯುಂಟಾಯಿತು. ಪೋಲೀಸಿನವರು ಆ ಊರಿನವರಾಗಿರಲಿಲ್ಲ, ಅವರ ಭಾರವಾದ "ಬೂಟ್ಸು," ಕರೀನಿಲುವಂಗಿ, ಪಗಡಿಗಳನ್ನು ನೋಡಿದರೆ ಪಟ್ಟಣದ ಪೋಲೀಸು ಶಿಬ್ಬಂದಿಗೆ ಸೇರಿದವರಾಗಿರಬೇಕು. ಇವರ ಆಗಮನಕ್ಕೆ ಕಾರಣವೇನಿರಬಹುದು? ಗುಜಗುಜನೆ ಅಲ್ಲಿನವರೆಲ್ಲರೂ ಮಾತನಾಡತೊಡಗಿದರು. ಯಾರಿಗೂ ಪೋಲೀಸಿನವರನ್ನು ಕೇಳಲು ಧೈರ್ಯವಿಲ್ಲ. ಕೆಲವರು ಯಾವದೂ ಕೊಲೆಪಾತಕದ ಮೊಕದ್ದಮೆಯ ವಿಷಯವಿರಬಹುದು ಎಂದುಕೊಂಡರು. ಕೆಲವರು ಕಳುವು ದರೋಡೆ, ಸಮಾಚಾರವಿರಬಹುದು ಎಂದರು. "ಅಹುದು— ಅಹುದು, ಮೊನ್ನೆ ಪಂಡರಪುರದ ಜಾತ್ರೆಗೆ ಹೋಗುವ ಕೆಲವರನ್ನು ಯಾರೊ ದರೋಡೆ

ಮಾಡಿ ಕೊಳ್ಳೆ ಹೊಡೆದರಂತೆ'' ಎಂದು ಮತ್ತೆ ಕೆಲವರು ಹೇಳಿದರು. ‘‘ಯಾವದಿದ್ದರೂ ಗೊತ್ತಾಗುತ್ತದೆ, ಯಾತಕ್ಕೆ ಯೋಚನೆ'' ಎಂದು ಇನ್ನು ಕೆಲವರು ಅಂದುಕೊಂಡರು.

ಪೋಲೀಸಿನವರು ಒಂದುಕ್ಷಣ ಅಲ್ಲಿ ನಿಂತಿದ್ದವರು ಎಲ್ಲಿಯೊ ಹೊರಟುಹೋದರು. ಎದುರುಗೊಳ್ಳಲು ಹೊರಟಿದ್ದವರಿಗೆಲ್ಲಾ ಧೈರ್ಯ ಬಂದಿತು. ಮೆರವಣಿಗೆಯು ಮುಂದಕ್ಕೆ ನಡೆಯಿತು. ಸತ್ರದಬಳಿ ಬರುವ ಹೊತ್ತಿಗೆ ಸರಿಯಾಗಿ ಆ ಇಬ್ಬರು ಪೋಲೀಸಿನವರೂ ಮಧ್ಯೆ ಒಬ್ಬನನ್ನು ಹಿಡಿದುಕೊಂಡು ಬರುವುದು ಗೋಚರವಾಯಿತು. ಆ ಮೂರನೆ ವ್ಯಕ್ತಿಯು ಸ್ವಯಂ ಮದವಣಿಗನಾಗಿದ್ದನು. ಅವನ ಸೌಂದರ್ಯವನ್ನು ಬಣ್ಣಿಸಲು ಯಾರಿಗೆ ತಾನೆ ಶಕ್ಯ ! ಆ ಕೃಷ್ಣವರ್ಣದ ಮೂರ್ತಿಯು ಒಳ್ಳೆ ಬೆಲೆಯುಳ್ಳ ಪಾಗು ಉತ್ತರೀಯಗಳಿಂದಲೂ, ಕಿವಿಯಲ್ಲಿ ವಜ್ರದ ಕಡಕು, ಬೆರಳುಗಳಲ್ಲಿ ನಾನಾ ಜಾತಿಯ ಅಮೂಲ್ಯಗಳಾದ ಉಂಗುರಗಳು, ಇವುಗಳಿಂದಲೂ ಶೋಭಿಸುತ್ತಿದ್ದನು. ಬಂದಿದ್ದವರೆಲ್ಲರೂ ಬೆರಗಾಗಿ ಅಲ್ಲಲ್ಲಿಯೇ ನಿಂತುಬಿಟ್ಟರು. ಮದವಣಿಗನ ಮುಖವು ಕುಂದಿ ಬೆಳ್ಳಗಾಗಿ ಹೋಗಿತ್ತು. ಇದಕ್ಕೆಲ್ಲಾ ಕಾರಣವನ್ನು ವಿಚಾರಿಸಬೇಕೆಂದು ಎಲ್ಲರೂ ಗುಜುಗುಜುಗುಟ್ಟಿಕೊಂಡರು. ಅವರಲ್ಲೊಬ್ಬನು ಧೈರ್ಯಮಾಡಿ ಕಾನ್‌ಸ್ಟೇಬಿಲನನ್ನು ಕುರಿತು—‘‘ದಫೇದಾರರೆ, ಇದೇನು ಸಮಾಚಾರ, ನಮಗೂ ತಿಳಿಯಬಹುದೆ ?'' ಎಂದು ಕೇಳಿದನು.

೧ನೇ ಕಾನ್‌ಸ್ಟೇಬಿಲ್—‘‘ಎಲ್ಲರಿಗೂ ತಿಳಿಯದೆ ಎಲ್ಲಿಹೋಗುವುದು ? ಈ ಮಹಾನುಭಾವರ ನಿಜವಾದ ಹೆಸರೇನು ಕೇಳಿರಿ—ನಿಮಗೇ ಗೊತ್ತಾಗುವುದು.''

‘‘ಅವರಿಗೆ ನಿಜವಾದ ಹೆಸರೊಂದು, ಸುಳ್ಳಾದ ಹೆಸರೊಂದೆ? ಅದು ನಮಗೆ ತಿಳಿಯದು.''

೧ನೇ ಕಾರ್ — "ಅಡಿಗೆ ಪರಿಚಾರಕ ಆತ್ಮಾರಾಮರು
ಶ್ರೀಧರರಾಯರಾಗಿ ಬಂದಿದ್ದಾರೆ" (ಮದವಣಿಗನು
ಬೆಚ್ಚಿದನು. ಮೈಯೆಲ್ಲಾ ನಡುಗಲಾರಂಭಿಸಿತು.)

ಕಾರ್ — ಏನು ರಾಯರೆ? ನಾನು ಹೇಳಿದುದು ನಿಜವೆ?
(ಜನರಕಡೆಗೆ ತಿರಿಗಿ) ಇವರು ಈಗ ೧೫-೨೦ ವರು
ಷದಕೆಳಗೆ ಜಹಗೀರ್ದಾರ್ ಶಂಕರರಾಯರಮನೆಯಲ್ಲಿ
ಭಾರಿ ಕಳುವು ಮಾಡಿಕೊಂಡು ತಪ್ಪಿಸಿಕೊಂಡುಓಡಿ
ಹೋಗಿದ್ದರು. ಈಗ ಸಿಕ್ಕಿಕೊಂಡರು. ಧರ್ಮಸ್ಥಾನ
ದ ಮಾಹಾತ್ಮ್ಯವು ಎಂದಿಗೆ ಕಡಿಮೆಯಾದೀತು?
ಶಂಕರರಾಯರು ಮಾತ್ರ ಆಗಲೆ ಮಾನಸಿಕಮಾಡ
ದಿದ್ದರೆ ಇಷ್ಟು ದಿನಕ್ಕೆ ಇವರಿಗೆ ಜೈಲಿನಲ್ಲಿ ಬಹಳ
"ಸರ್ವಿಸ" ಆಗುತ್ತಿತ್ತು.

೨ನೇ ಕಾರ್ — "ಅಹಹ! ಒಳ್ಳೆಸಮಯದಲ್ಲಿ ಸಿಕ್ಕಿಬಿದ್ದನು. ನಾವಿ
ನ್ನೊಂದು ದಿನತಡಮಾಡಿದ್ದರೆ ಒಬ್ಬ ಮುದ್ದುಮಗಳ
ತಲೆಯಮೇಲೆ ಚಪ್ಪಡಿಯೆಳೆದು ಬಿಡುತ್ತಿದ್ದನು."
ಎಂದು ಹೇಳುತಾ ಮದವಣಿಗನನ್ನು ಕುರಿತು
"ರಾವ್‌ಜಿ — ದಯವಿಟ್ಟು ತಮ್ಮ ಚಿನ್ನದ ಬಳೆಯನ್ನು
ತೆಗೆಯಿರಿ — ಬೇರೆಬಳೆಯು ಸಿದ್ಧವಾಗಿದೆ" ಎಂದನು.

ವಿಶ್ವನಾಥನಿಗೂ ರಮಾಬಾಯಿಗೂ ಉಂಟಾದನಾಚಿಗೆಯು ಹೇಳಲಸಾಧ್ಯವಾಗಿತ್ತು. ಅವರು ಯಾರೊಡನೆಯೂ ಮಾತನಾಡದೆ ಮನೆಗೆ ಹೊರಟುಹೋದರು. ಅವರಿಗೆ ತಮ್ಮ ನೆಂಟರೆಲ್ಲರನ್ನೂ ಕರೆಸಿದಮೇಲೆ ನಾಚಿಗೆಗೇಡಾದುದಕ್ಕೆ ಬಹಳ ವ್ಯಥೆಯುಂಟಾಗಿದ್ದರೂ ಒಬ್ಬ ಪರಮನೀಚನಿಗೆ ತಮ್ಮ ಮಗಳನ್ನು ಕೊಟ್ಟು ಸಂಕಟಪಡುವುದನ್ನು ಭಗವಂತನು ತಪ್ಪಿಸಿದುದಕ್ಕಾಗಿ ಬಹಳಮಟ್ಟಿಗೆ ಸಮಾಧಾನ

ವುಂಟಾಗಿತ್ತು. ಸುಭದ್ರೆಗಾದರೂ ಮನಸ್ಸಿನಲ್ಲುಂಟಾದ ಸಂತೋಷಕ್ಕೆ ಪಾರವೇ ಇರಲಿಲ್ಲ.

ಇತ್ತಲಾಗಿ ಪೋಲೀಸಿನವರು ಅಲ್ಲಿ ನೆರೆದಿದ್ದ ಜನರಲ್ಲಿ ಕೆಲವರನ್ನು ನಿಲ್ಲಿಸಿಕೊಂಡು ಒಡವೆ ಮುಂತಾದುವುಗಳ ವಿಷಯದಲ್ಲಿ ಪಂಚಾಯಿತರಿಂದ "ಮಹಜರು" ಮಾಡಿಸಿಕೊಂಡು ಆತ್ಮಾರಾಮನನ್ನು ಕರೆದುಕೊಂಡು ಹೊರಟುಹೋದರು ಬಂದಿದ್ದ ಬಂಧುಬಳಗವೆಲ್ಲವೂ ಮಾರಣೆದಿನ ಯಥಾ ಯಥಾ ಹೊರಟುಹೋಯಿತು. ಮದುವೆಯ ಸಂಭ್ರಮವೆಲ್ಲವೂ ಈ ರೀತಿಯಲ್ಲಿ ಪರಿಣಮಿಸಿತು.

ಇದಕ್ಕೆ ಕಾರಣವೇನು? ಸಕಾಲದಲ್ಲಿ ಸಹಾಯ ಒದಗಿದುದು ಹೇಗೆ? ಗಂಗಾಬಾಯಿಯು ಮೊದಲು ಶ್ರೀಧರರಾಯನನ್ನು ನೋಡಿದೊಡನೆಯೆ ಅವನನ್ನು ಹಿಂದೆ ಎಲ್ಲಿಯೊ ನೋಡಿದ್ದಂತೆ ಸ್ಮೃತಿಗೆ ಬಂದಿತ್ತು. ಇಂತಹ ಸ್ಥಳವೆಂಬುದು ಮಾತ್ರ ನೆನಪಿಗೆಬರಲಿಲ್ಲ; ಹಾಗೆಯೆ ಯೋಚಿಸುತ್ತ ಯೋಚಿಸುತ್ತ ತನ್ನ ಅಕ್ಕನ ಮನೆಯಲ್ಲಿ ೧೫-೨೦ ವರುಷಗಳಹಿಂದೆ ಆತ್ಮಾರಾಮನೆಂಬೊಬ್ಬ ಪರಿಚಾರಕನು ನಾಲ್ಕೈದು ಸಾವಿರ ರೂಪಾಯಿನ ರೊಕ್ಕವನ್ನೂ ನಗಗಳನ್ನೂ ಕಳವುಮಾಡಿಕೊಂಡು, ಶಂಕರರಾಯನ ಸೇವಕರಲ್ಲೊಬ್ಬನನ್ನು ಕೊಲೆಮಾಡಿ ಓಡಿಹೋಗಿದ್ದುದು ಜ್ಞಾಪಕಕ್ಕೆ ಬಂದಿತು. "ಆತ್ಮಾರಾಮನೇ ಇವನಾಗಿರಬಹುದೆ? ಇವನ ನಡಿಗೆ, ಮುಖದ ಹೋಲಿಕೆಯನ್ನು ನೋಡಿದರೆ ಅವನಿಗೂ ಇವನಿಗೂ ಏನೂ ಭೇದ ತೋರುವುದಿಲ್ಲ. ಆದರೆ ಇವನ ಆಡಂಬರವನ್ನು ನೋಡಿದರೆ ಧನವಂತನಾಗಿ ಕಾಣುತ್ತಾನೆ. ಅಲ್ಲದೆ ಆತ್ಮಾರಾಮನು ಧೈರ್ಯವಾಗಿ ಪುನಹ ಹತ್ತಿರ ಹೇಗೆಬಂದಾನು? ಅಥವಾ ಬಹಳಕಾಲವುಕಳೆದುಹೋಗಿರುವುದರಿಂದ ಯಾರಿಗೂ ತನ್ನ ಗುರುತು ಸಿಕ್ಕಲಾರದೆಂಬ ಧೈರ್ಯದಮೇಲೆ ಬಂದಿರಬಹುದು. ಆದರೆ ಇವನುವಿಶ್ವನಾಥನಮನೆಯನ್ನು ಯಾತಕ್ಕೋಸ್ಕರವಿಚಾರಿಸುತಾನೊ

ತಿಳಿಯದು. ಇವನ ಅಟ್ಟಹಾಸವನ್ನು ನೋಡಿದರೆ ಭಯವಾಗುತ್ತದೆ. ಕನ್ಯಾರ್ಥಿಯಾಗಿ ಬಂದಿರಬಹುದೆ ? ಎಂದು ಮುಂತಾಗಿ ಯೋಚಿಸಿಕೊಂಡಳು. ಮಾರಣೆಯ ದಿನ ಸುಭದ್ರೆಯು ತನ್ನ ವೃತ್ತಾಂತವನ್ನು ಹೇಳಲಾಗಿ, ಗಂಗಾಬಾಯಿಯು ಹೀಗೆಂದುಯೋಚಿಸಿದಳು. " ಇವನನ್ನು ಕಳ್ಳನೆಂಬ ಸಂಶಯದಮೇಲೆ ಹಿಡಿಸಿಬಿಡುವುದು ಒಳ್ಳೆಯದು. ಆತ್ಮರಾಮನೆ ಇವನಾದರೆ ಸರಿಯೆಸರಿ. ಇಲ್ಲದಿದ್ದರೆ ನ್ಯಾಯಸ್ಥಾನದಲ್ಲಿ ರುಜುವಾತಿಲ್ಲವೆಂದು ಬಿಟ್ಟುಬಿಡಲಿ ಬಾಧಕವಿಲ್ಲ. ಸದ್ಯಃ ಮದುವೆಯೊಂದು ತಪ್ಪಿದರೆ ಸಾಕು. "

ಮಾಧವನು ರಾಮಪುರದಲ್ಲಿ ಒಂದೆರಡು ದಿನವಿದ್ದು ಪುನಹೆಗೆ ಹಿಂದಿರುಗಿಹೋದನು. ಗಂಗಾಬಾಯಿಯೂಅವನೊಡನೆ ಹೋದಳು. ಕೂಡಲೆ ಆತ್ಮಾರಾಮನವೃತ್ತಾಂತವನ್ನೆಲ್ಲಾ ಶಂಕರರಾಯನಿಗೆತಿಳಿಸಿ ಮದುವೆಗೆ ಗೊತ್ತಾಗಿದ್ದ ದಿನಕ್ಕೆ ಮುಂದಿನ ದಿನವೇ ರಾಮಪುರಕ್ಕೆ ಹೋಗಿಆತ್ಮಾರಾಮನನ್ನು ಹಿಡಿತರುವಂತೆಏರ್ಪಾಟುಮಾಡಿಪೋಲೀಸಿನವರನ್ನು ಕಳುಹಿಸಿಕೊಟ್ಟರು. ಅನಂತರ ನಡೆದುದು ತಿಳಿದೇ ಇದೆ. ಪೋಲೀಸಿನವರು ಆತ್ಮಾರಾಮನನ್ನು ಮ್ಯಾಜಿಸ್ಟ್ರೇಟರ ಮುಂದೆ ಹಾಜರ್ಮಾಡಿದರು. ಅಲ್ಲಿ ವಿಚಾರಣೆ ನಡೆದು ಮ್ಯಾಜಿಸ್ಟ್ರೇಟರು ಸೆಷನ್ ಕೋರ್ಟಿಗೆ ಮೊಕದ್ದಮೆಯನ್ನು " ಕಮಿಟ್ " ಮಾಡಿದರು. ಆತ್ಮಾರಾಮನು ಪುನಹೆ ಜೈಲಿನಲ್ಲಿ ದಾಖಲಾಗಿ ಅಲ್ಲಿನ ಸುಖಗಳನ್ನೆಲ್ಲಾ ಅನುಭವಿಸುತ್ತಾ ಸೆಷನ್ ಕೋರ್ಟಿನಲ್ಲಿ ತನ್ನ ಗತಿಯೇನಾಗುವುದೋ ಎಂದು ಹಂಬಲಿಸುತ್ತಿದ್ದನು.

———0———

## —ಎಂಟನೆಯ ಅಧ್ಯಾಯ—

ವಿಶ್ವನಾಥನಿಗೂ ರಮಾಬಾಯಿಗೂ ಬಹು ಯೋಚನೆಗಿಟ್ಟಿತು. ಸುಭದ್ರೆಗಾದರೂ ವಯಸ್ಸು ಮೀರುತ್ತಾಬಂದಿತು. ಇದು

ವರೆಗೆ ವಿವಾಹವು ಸಾವಕಾಶವಾದುದೇ ಊರಿನವರಿಗೆಲ್ಲರೂ ನಾನಾ ವಿಧವಾಗಿ ಆಡಿಕೊಳ್ಳಲು ಮಾರ್ಗವನ್ನುಂಟುಮಾಡಿದ್ದಿತು. ಇನ್ನೂ ಸಾವಕಾಶವಮಾಡಿದ ಪಕ್ಷದಲ್ಲಿ ಪ್ರಮಾದಕ್ಕೇ ಬರಬಹುದು.

ಈಗಿನ ಸಮಾಜದಸ್ಥಿತಿಯಲ್ಲಿ ಹೆಣ್ಣುಮಕ್ಕಳನ್ನು ಪಡೆದವರ ಕಷ್ಟವನ್ನು ಬಣ್ಣಿಸುವುದುಅಸಾಧ್ಯ. ಸರಿಯಾದ ವರನು ಬೇಕಾದರೆ ಮಿತಿಮೀರಿ ವರದಕ್ಷಿಣೆಯನ್ನು ಕೊಡಬೇಕು. ಹೊಟ್ಟೆಯನ್ನು ಹೊರೆಯುವುದೇ ಕಷ್ಟವಾಗಿರುವವರು ವರದಕ್ಷಿಣೆಯನ್ನೆಲ್ಲಿಂದ ತರಬೇಕು? ಆದುದರಿಂದಲೇ ವಿಶ್ವನಾಥನ ಪ್ರಯತ್ನಗಳೆಲ್ಲವೂ ನಿಷ್ಫಲವಾದವು. ಕೊನೆಗೆ ಅವನಿಗೆ ಜುಗುಪ್ಸೆಹುಟ್ಟಿ, ವರನನ್ನು ಕೊಂಡುಕೊಳ್ಳುವುದಕ್ಕೆ ಬದಲಾಗಿ ಮಗಳನ್ನು ಮಾರಲು ಸಿದ್ಧಮಾಡಿಕೊಂಡಿದ್ದನು; ಅದೂ ನೆರವೇರಲಿಲ್ಲ. ಈಗ ಬೇರೆ ಯಾವಮಾರ್ಗವೂ ತೋರದೆ ತನ್ನ ತಂಗಿಯ ಮಗನಾದ ರಘುರಾಮನೆಂಬವನಿಗಾದರೂ ಕೊಟ್ಟು ಲಗ್ನಬಳೆಯಿಸಬೇಕೆಂದು ನಿಶ್ಚಯಿಸಿಕೊಂಡನು. ರಘುರಾಮನು ಪುಸಹೆಯಲ್ಲಿ ಪ್ರವೇಶಪರೀಕ್ಷೆಯ (ಮೆಟ್ರಿಕ್ಯುಲೇಷನ್) ತರಗತಿಯಲ್ಲಿ ಓದುತ್ತಿದ್ದನು. ಅವನಿಗೆ ತಂದೆತಾಯಿ ಯಾರೂ ಇಲ್ಲ, ಆಸ್ತಿ ಮೊದಲೇ ಇಲ್ಲ. ಕೆಲವರು ಉದಾರರಾದ ದೊಡ್ಡಮನುಷ್ಯರ ಮನೆಗಳಲ್ಲಿ ವಾಸಮಾಡಿಕೊಂಡು ವಿದ್ಯಾಕಾಲಕ್ಷೇಪ ಮಾಡುತ್ತಿದ್ದನು. ಅವನಿಗಿನ್ನೂ ೧೬ ವರುಷ ವಯಸ್ಸು. ಶುದ್ಧಕುರೂಪಿ. ಸುಭದ್ರೆಗೂ ಅವನಿಗೂ ವರಸಾಮ್ಯ ಸರಿಯಾಗಿರಲಿಲ್ಲ. ಈ ಕಾರಣಗಳಿಂದಲೇ ಮೊದಲಿನಿಂದಲೂ ಅವನ ವಿಷಯವನ್ನೇ ಯೋಚಿಸಿರಲಿಲ್ಲ. ಈಗ ಯತ್ನವಿಲ್ಲದೇ ಹೋಯಿತು.

ವಿಶ್ವನಾಥನಿಗೆ ತಂಗಿಯಮಗನು ಎಂದಿಗೂ ತನ್ನ ಮಾತನ್ನು ತೆಗೆದುಹಾಕುವುದಿಲ್ಲವೆಂಬ ಭರವಸೆಯಿದ್ದಿತ್ತು. ಮನೆಯಲ್ಲಿ ಅಣಿಮಾಡಿದ ಸಾಮಗ್ರಿಯೆಲ್ಲವೂ ಹಾಗೆಯೆ ಇದ್ದುದರಿಂದ ಒಂದು ವಾರದಲ್ಲೆ ಮದುವೆಯನ್ನು ಆಗಮಾಡಿಸುವುದಾಗಿ ನಿಶ್ಚಯಿಸಿಕೊಂಡು,

ರಘುರಾಮನಿಗೆ ಕೂಡಲೆ ಹೊರಟು ಬರುವಂತೆ ಕಾಗದವನ್ನು ಬರೆದನು. ಮೂರು ದಿನದಲ್ಲೆ ಪ್ರತ್ಯುತ್ತರವು ಬಂದಿತು. ಬಿ. ಎ. ಪರೀಕ್ಷೆಯಾದ ಹೊರತು ತನಗೆ ಮದುವೆಮಾಡಿಕೊಳ್ಳಲು ಇಷ್ಟವಿಲ್ಲವೆಂತಲೂ, ಹಾಗೆ ಬಲವಂತಮಾಡುವ ಪಕ್ಷಕ್ಕೆ ತನ್ನ ಮುಂದಿನ ವಿದ್ಯಾಭ್ಯಾಸಕ್ಕೆ ತಕ್ಕ ಸಹಾಯವನ್ನು ಮಾಡುವುದಾಗಿ ಕಾಗದ ಬರೆದುಕೊಟ್ಟು, ೧೦೦೦ ರೂಪಾಯಿಗಳು ವರದಕ್ಷಿಣೆಯನ್ನು ಕೊಡುವುದಾದರೆ ಒಪ್ಪುವುದಾಗಿಯೂ ರಘುರಾಮನು ಬರೆದನು. ಅವನ ಕಾಗದವನ್ನು ನೋಡಿ ವಿಶ್ವನಾಥನಿಗುಂಟಾದ ಆಶ್ಚರ್ಯವನ್ನು ವಿವರಿಸಲು ಸಾಧ್ಯವಿಲ್ಲ. "ನಾನು ಸಾಕಿ ದೊಡ್ಡವನನ್ನಾಗಿಮಾಡಿದ ಹುಡುಗನೇ ನನಗೆ ಈ ರೀತಿಯಾಗಿ ಉತ್ತರವನ್ನು ಕೊಟ್ಟ ಬಳಿಕ, ನನ್ನ ಯಾವ ಪ್ರಯತ್ನ ತಾನೆ ಫಲಕಾರಿಯಾಗುವುದು ? ದೈವಚಿತ್ತಹೇಗಿದೆಯೊ ? ಜಾತಿಕೆಡಬೇಕೆಂದೇ ನಮ್ಮ ಹಣೆಯಲ್ಲಿ ಬರೆದಿದೆಯೋ? ವೃಥಾ ಚಿಂತಿಸಿ ಫಲವಿಲ್ಲ, ಮಿತಿ ಮೀರಿದರೆ ಕಾಶೀಯಾತ್ರೆ ಇದ್ದೇ ಇದೆ" ಎಂದಂದುಕೊಂಡು ಸುಮ್ಮನಾದನು ಮನಸ್ಸಿನ ಕೊರತೆಮಾತ್ರ ತಪ್ಪಲಿಲ್ಲ.

ಅತ್ತ ಪುನಹೆಯಲ್ಲಿ ಆತ್ಮಾರಾಮನ ಮೊಕದ್ದಮೆಯು "ಸೆಷನ್ಸ್ ಕೋರ್ಟ್" ನಲ್ಲಿ ವಿಚಾರಣೆಗೆ ಪ್ರಾರಂಭವಾಯಿತು. ಸರಕಾರದಪಕ್ಷದಲ್ಲಿ ಮುಖ್ಯಸಾಕ್ಷಿಯಾದ ಶಂಕರರಾಯನ ವಿಚಾರಣೆಯು ಒಂದು ಮಧ್ಯಾಹ್ನವೆಲ್ಲಾ ಹಿಡಿಯಿತು. ಆದಿನ ಶಂಕರರಾಯನು ಸರಕಾರದ ಪಕ್ಷದ ವಕೀಲನ "ಸವಾಲು" ಗಳಿಂದಲೂ ಎದುರು ಪಕ್ಷದ ವಕೀಲನ ಪಾಟೀಸವಾಲು"ಗಳಿಂದಲೂ ತಾಡಿಸಲ್ಪಟ್ಟವನಾಗಿ ಜೀವದೊಂದಿಗೆ ಕೋರ್ಟಿನಿಂದ ಹೊರಗೆ ಹೋದರೆ ಸಾಕೆಂದಂದುಕೊಂಡು ಕೊನೆಗೆ ಬಿಡುಗಡೆ ಮಾಡಲ್ಪಟ್ಟವನಾಗಿ ಮನೆಗೆ ಬಂದನು. ರಾಮರಾಯನಿಂದ ಆಗತಾನೆ ಒಂದು ಕಾಗದವು ಬಂದಿತ್ತು. ಅದನ್ನು ನೋಡಿದ ಕೂಡಲೆ ಗಂಗಾಬಾಯಿ ಇದ್ದಲ್ಲಿಗೆ ಬಂದು "ಗಂಗೂ! ನಾವು ಮೊಕದ್ದಮೆಯ

ಅವಾಂತರದಲ್ಲಿ ಮಾಧವನ ಮದುವೆಯ ವಿಚಾರವನ್ನೆ ಮರೆತು ಬಿಟ್ಟೆವು. ಇಗೊ! ರಾಮರಾಯರು ತಿರಿಗಿ ಕಾಗದ ಬರೆದಿದ್ದಾರೆ, ಅವರಿಗೇನು ಉತ್ತರವನ್ನು ಕೊಡೋಣ?'' ಎಂದನು.

ಗಂಗಾಬಾಯಿ—ಬಾವ! ಆ ಸ್ಥಳವನ್ನು ಬಿಟ್ಟು ಬೇರೆಕಡೆ ಸಂಬಂಧ ಬಳೆಯಬಾರದೆ.

ಶಂಕರರಾಯ—ಏತಕ್ಕೆ ? ಏನುಸಮಾಚಾರ ?

ಗಂ—ಏನೂ ಇಲ್ಲ. ಹುಡುಗಿಯ ವಿಷಯ.

ಶಂ—ಹುಡುಗಿ ಹೇಗಿದ್ದಾಳೆ ?

ಗಂ—ಭಾಗ್ಯವಂತರ ಮನೆಗೆ ತಕ್ಕವಳಾಗಿದ್ದಾಳೆ.

ಶಂ—ಸರಿ. ಹಾಗಾದರೆ ಅಲಂಕಾರದ ಗೊಂಬೆಯೊ ?

ಗಂ—ಹೌದು. ಉಡಿಗೆ ತೊಡಿಗೆಯಲ್ಲಿದ್ದಾಗ.

ಶಂ—ಇಲ್ಲದಿದ್ದರೆ ?

ಗಂ—ಚಂದನದಗೊಂಬೆ! ಅಷ್ಟು ಮಾತ್ರವೇಅಲ್ಲ ಅ, ವಳಂತಹಮೂರ್ಖಳನ್ನು ನೋಡಲೇ ಇಲ್ಲ. ಅವಳಗುಣಕ್ಕೂ ನಮ್ಮ ಮಾಧವನಗುಣಕ್ಕೂ ಏನೇನೂ ಸಂಬಂಧವಿಲ್ಲ.

ಶಂ—ಮಾಧವನೇ ನೋಡಿದ್ದಾನಷ್ಟೆ. ಅವನ ಅಭಿಪ್ರಾಯ ವೇನಾದರೂ ನಿನಗೆ ತಿಳಿಯುವುದೊ ?

ಗಂ—ನನ್ನ ಅಭಿಪ್ರಾಯವೇ ಅವನ ಅಭಿಪ್ರಾಯ. ನೀವಾಗಿಯೆ ಈ ವಿಷಯದಲ್ಲಿ ಅವನಿಗೆ ಸ್ವಾತಂತ್ರ್ಯವನ್ನು ಕೊಟ್ಟಿರುವುದರಿಂದ ಅವನಿಗೆ ಮನಸ್ಸು ಬಂದಕಡೆ ಕನ್ಯೆಯನ್ನು ನೋಡಿಕೊಳ್ಳಬಹುದಷ್ಟೆ ?

ಶಂ—ಆಗಬಹುದು, ಆದರೆ ಜಾತಿ, ಕುಲ, ಗೋತ್ರ ಮುಂತಾದ ವಿಷಯಗಳಲ್ಲಿ ಮಾತ್ರ —

ಗಂ—ನಿಮ್ಮ ಅಭಿಪ್ರಾಯವನ್ನು ಬಿಟ್ಟು ಬೇರೆ ಉಂಟೆ? ಆದೂ ಅಲ್ಲದೆ ನಾನೊಪ್ಪುವೆನೆ?

ಶಂ—ಸರಿ, ನೀನೂ ಮಾಧವನೂ ಒಪ್ಪಿದಮೇಲೆ ನನ್ನದೇನೂ ಅಡ್ಡಿ ಇಲ್ಲ.

ಗಂ—ನಿಮ್ಮ ಸಮಾನಸ್ಕಂಧರಲ್ಲದವರಲ್ಲಿ ಸಂಬಂಧ ಬಳೆಸುವುದರಲ್ಲಿ ಅಡ್ಡಿಯಿಲ್ಲವೆ?

ಶಂ—ಇದೇನು ಗಂಗೂ, ನನ್ನ ಪ್ರಕೃತಿಯನ್ನು ತಿಳಿಯದವಳಂತೆ ಮಾತನ್ನಾಡುವೆ? ನಾನು ಯಾವಾಗಲಾದರೂ ಯಾರಲ್ಲಿಯಾದರೂ ಅಂತಹ ಭೇದವನ್ನೆಣಿಸಿರುವುದನ್ನು ನೋಡಿರುವಿಯಾ?

ಗಂ—ಇಲ್ಲ, ನಮ್ಮ ಮನೆಯಲ್ಲಿ ನೀವು ಹೆಣ್ಣುತಂದುಕೊಂಡದ್ದೇ ಸಾಕ್ಷಿಯಲ್ಲವೆ? ನಮ್ಮ ಮಾಧವನು ಒಬ್ಬ ಬಡ ವೈದಿಕಬ್ರಾಹ್ಮಣನ ಮಗಳನ್ನು ನೋಡಿಕೊಂಡು ಬಂದಿದ್ದಾನೆ.

ಶಂ—ನಷ್ಟವೇನು? ಹುಡುಗಿಯು ಗುಣವಂತಳು ತಾನೆ?

ಗಂ—ಆಹಾ! ಗುಣದಲ್ಲಿ, ವಿದ್ಯೆಯಲ್ಲಿ, ರೂಪದಲ್ಲಿ, ಅವಳ ಸಮಾನಳಾದ ಕನ್ಯೆಯನ್ನೇ ನಾನು ನೋಡಲಿಲ್ಲ. ಮಾಧವನು ಅವಳನ್ನಲ್ಲದೆ ಬೇರೆಯಾರನ್ನೂ ವರಿಸಲಾರನೆಂದು ನನಗೆ ತೋರುವುದು.

ಶಂ—ಹುಡುಗಿಗೆ ತಂದೆ ತಾಯಿಗಳಿದ್ದಾರಷ್ಟೆ? ಸ್ಥಳವಾವುದು?

ಗಂ—ಸ್ಥಳ ರಾಂಪುರ, ನನ್ನ ಪಾಠಶಾಲೆಯಲ್ಲೇ ಚಿಕ್ಕ ಮಗುವಾಗಿದ್ದಾಗಿನಿಂದ ನಾನೆ ವಿದ್ಯಾಬುದ್ಧಿ ಕಲಿಸಿದ್ದೇನೆ. ನನಗೆ ಮಗಳಿಗಿಂತ ಹೆಚ್ಚು, ಆದುದರಿಂದಲೇ ಸೊಸೆಯನ್ನು ಮಾಡಿಕೊಳ್ಳಬೇಕೆಂದು ಅಭಿಲಾಷೆ.

ಶಂ—ಹಾಗಾದರೆ ಜಾಗ್ರತೆಮಾಡಬೇಕು. ರಾಮರಾಯನು ಅಸಾಧಾರಣನಾದ ಮನುಷ್ಯ. ನಮ್ಮ ಅಭಿಪ್ರಾಯವು ಅವನಿಗೆ ತಿಳಿಯುವುದಕ್ಕೆ ಮುಂಚೆಯೆ ಕನ್ಯೆಯನ್ನು ಕರೆದುಕೊಂಡು ಅವರು ಇಲ್ಲಿಗೆ ಬಂದುಬಿಡಲಿ, ಈಗಲೆ ಅವರಿಗೆ ಕಾಗದ ಬರೆದುಬಿಡೋಣ. ಹುಡುಗಿಯ ಹೆಸರೇನು ?

ಗಂ—ಸುಭದ್ರೆ.

ಶಂ—ತಂದೆಯ ಹೆಸರು ?

ಗಂ—ವಿಶ್ವನಾಥ ಪಂತರು.

ಶಂ—ವಿಶ್ವನಾಥಪಂತರೆ ? ಯಾವ ವಿಶ್ವನಾಥಪಂತರು ?

ಗಂ—ಪೇಷ್ವೆಯರ ಕುಲಪುರೋಹಿತರಾಗಿದ್ದ ಕೃಷ್ಣಪಂತರ ವಂಶೀಯರು, ಒಳ್ಳೆ ದೊಡ್ಡ ಮನೆತನ, ಈಗ—

ಶಂ—ಸಾಕು ! ಸಾಕು ! ಅಲ್ಲಿಗೆ ನಿಲ್ಲಿಸು. ಆ ಸರ್ಪವಂಶವು ಇನ್ನೂ ಇದೆಯೆ ? ಈ ಮಾತನ್ನು ಇಲ್ಲಿಗೆ ಬಿಡು. ಅವರ ಪೂರ್ವಿಕರು ನಮ್ಮವರ ಪ್ರಧಾನತ್ವವನ್ನು ಕಿತ್ತುಕೊಳ್ಳಲು ಮಾಡಿದ ತಂತ್ರಗಳನ್ನೂ ದೈವಕೃಪೆಯಿಲ್ಲದಿದ್ದರೆ ನಾವು ಯಾವಗತಿಗಿಳಿಯುತ್ತಿದ್ದೆವೆಂಬುದನ್ನೂ ಯೋಚಿಸಿಕೊಂಡರೆ ಅವರ ವಂಶೀಯರ ಮುಖದರ್ಶನವನ್ನೆ ಮಾಡಕೂಡದು, ಇಂತಹುದರಲ್ಲಿ ಸಂಬಂಧ ಬಳೆಸುವುದೆ ? ಎಂದಿಗೂ ಆಗಲಾರದು.

ಗಂ—ಬಾವ ! ನೀವು ಇಷ್ಟುತಿಳಿವಳಿಕೆಯುಳ್ಳವರಾಗಿಯೂ ಈ ರೀತಿ ಮಾತನ್ನಾಡುವಿರೆಂದು ನಾನೆಣಿಸಿರಲಿಲ್ಲ.

ಶಂ—ಗಂಗೂ ! ಎಲ್ಲಾ ವಿಷಯದಲ್ಲಿಯೂ ನೀನು ಹೇಳಿದಂತೆ ಕೇಳುತ್ತೇನೆ, ಇದೊಂದರಲ್ಲಿ ಮಾತ್ರ—

ಗಂ—ನಿಮಗೆ ವಿಶ್ವನಾಥನೇನೂ ದ್ರೋಹಮಾಡಲಿಲ್ಲವಷ್ಟೆ?

ಶಂ—ಆದರೇನು ? ಅವನ ಪೂರ್ವಿಕರು ಮಾಡಿದುದು ಸಾಲದೆ? ಅವರಿಗೂ ನಮಗೂ ವಂಶಪಾರಂಪರ್ಯವಾಗಿ ದ್ವೇಷವಿದ್ದೇಯಿರುವುದು.

ಗಂ—ಸರಿ, ಹಾಗಾದರೆ—ನೀವುಂಟು ನಿಮ್ಮ ಮಗನುಂಟು, ಮಧ್ಯೆ ನನ್ನದೇನು ?

ಶಂಕರರಾಯನು ಮಗನನ್ನು ಏಕಾಂತವಾಗಿ ಕರೆಸಿಕೊಂಡು. ಅವನೊಡನೆ ವಿಶ್ವನಾಥನ ವಂಶೀಯರಿಗೂ ತಮ್ಮ ವಂಶೀಯರಿಗೂ ಪಾರಂಪರ್ಯವಾಗಿ ದ್ವೇಷ ಬಂದಿರುವುದನ್ನೂ ಅವರ ಮನೆಯಲ್ಲಿ ಸಂಬಂಧವನ್ನು ಒಳೆಯಿಸುವುದರಿಂದ ಸ್ವರ್ಗಸ್ಥರಾಗಿರುವ ತಮ್ಮ ಪಿತೃಪಿತಾಮಹ ಮುಂತಾದವರಿಗೆ ದ್ರೋಹಮಾಡಿದಂತಾಗಿ ಅವರು ಶ್ರಾದ್ಧದಲ್ಲಿ ಪಿಂಡವನ್ನು ಸಹಮುಟ್ಟದೆ ಹೋದಾರೆಂಬ ಶಂಕೆಯನ್ನೂ ತಿಳಿಸಿ ಈರೀತಿ ಮುಗಿಸಿದನು:—"ರಾಮರಾಯನ ಮಗಳನ್ನು ವಿವಾಹಮಾಡಿಕೊಳ್ಳಲು ಇಷ್ಟವಿಲ್ಲದಿದ್ದರೆ ಬೇಡ—ಅವನಿಗೆ ಆರೀತಿ ಉತ್ತರವನ್ನು ಬರೆದುಬಿಡೋಣ. ವಿಶ್ವನಾಥನ ಮಗಳೊಬ್ಬಳುವಿನಾ ನೀನು ಬೇರೆ ಯಾರನ್ನು ಬೇಕೆಂದರೂ ವಿವಾಹಮಾಡಿಕೊಡುತ್ತೇನೆ. ನೀನು ಅವಳೇಆಗಬೇಕೆಂದು ಮುಷ್ಕರ ಹಿಡಿದರೆ ನನ್ನ ಅಡ್ಡಿಯೇನೂ ಇಲ್ಲ. ಆದರೆ ಮದುವೆಯಾದ ಉತ್ತರಕ್ಷಣದಲ್ಲಿಯೆ ನೀನೂ ನನ್ನ ಶತ್ರುಪಕ್ಷಕ್ಕೆ ಸೇರಿದವನಾಗುವೆಯಾದುದರಿಂದ ನನ್ನ ಮನೆಯಲ್ಲಿ ನಿನಗೆ ನೆಳಲುದೊರಿಯಲಾರದು. ಯೋಚನೆಮಾಡಿ ಹೇಳು."

ಮಾಧವನು ತಂದೆಯ ಎದುರಿಗೆ ವಿಶೇಷವಾಗಿ ನಿಂತು ಮಾತನ್ನಾಡಿದವನೆ ಅಲ್ಲ. ಅವನ ಉಪನ್ಯಾಸವು ಪೂರೈಸುವವರೆಗೂ ಸುಮ್ಮನೆ ತಲೆ ಬಗ್ಗಿಸಿಕೊಂಡು ನಿಂತಿದ್ದು ಹೊರಟುಹೋದನು. ಇವನ ಮುಖವು ಬಾಡಿಹೋಗಿರುವುದು ಶಂಕರರಾಯನಿಗೆ ಗೋಚ

ರವಾಗಲಿಲ್ಲ. ತನ್ನ ಮಗನಂತಹ ವಿಧೇಯನಾದ ಮಗನನ್ನು ಯಾರೂ ಪಡೆಯಲಿಲ್ಲವೆಂದೂ ಆ ವಿಷಯದಲ್ಲಿ ತಾನು ತುಂಬಾ ಅದೃಷ್ಟಶಾಲಿ ಯೆಂದೂ ತನ್ನನ್ನು ತಾನೆ ಹೊಗಳಿಕೊಂಡನು.

———o———

## — ಒಂಬತ್ತನೆಯ ಅಧ್ಯಾಯ —

ಮಾಧವನು ಪ್ರತಿನಿತ್ಯವೂ ಬೆಳಗ್ಗೆ ಎದ್ದ ಕೂಡಲೆ ಮುಖಮಜ್ಜನವಾದ ಬಳಿಕ ತಂದೆಗೆ ನಮಸ್ಕಾರವನ್ನು ಮಾಡಿ ಆತನ ಆಶೀರ್ವಾದವನ್ನು ಪಡೆದು ಅನಂತರ ಇತರ ಕೆಲಸಗಳಿಗೆ ಗಮನ ಕೊಡುತ್ತಿದ್ದನು.

ಆದಿನ ಬೆಳಿಗ್ಗೆ ಏಳುಗಂಟೆಯಾದರೂ ಮಾಧವನು ಶಂಕರ ರಾಯನ ಕೊಠಡಿಗೆ ಬರಲಿಲ್ಲ. ಶಂಕರರಾಯನಿಗೆ ಮೊದಲು ಸ್ವಲ್ಪ ಆಶ್ಚರ್ಯವೂ ಅನಂತರ ಕೊಂಚ ಭಯವೂ ಉಂಟಾಯಿತು. ಏಕಂದರೆ, ಊರಲ್ಲಿಲ್ಲದಿರುವಾಗ ಮತ್ತು ಏಳಲಾರದಷ್ಟು ಅಸ್ವಸ್ಥನಾಗಿರುವಾಗ ಹೊರತು ಬೇರೆಯಾವಾಗಲೂ ಈ ಕರ್ತವ್ಯವನ್ನು ಮಾಧವನು ತಪ್ಪುತ್ತಿರಲಿಲ್ಲ. ಶಂಕರರಾಯನು ಮಗನಿಗೇನೋ ವ್ಯಾಧಿಯು ಸಂಭವಿಸಿರಬಹುದೆಂದು ಗಾಬರಿಗೊಂಡು ತಡಮಾಡದೆ ಮಾಧವನ ಕಿರುಮನೆಗೆ ಹೋದನು. ಬಾಗಿಲು ಮುಚ್ಚಿತ್ತು, ಅಗಳಿ ಹಾಕಿರಲಿಲ್ಲ. ಒಳಗೆಹೋಗಿ ನೋಡಲಾಗಿ ಹಾಸಿಗೆಯು ಹಾಸಿದಹಾಗೆಯೆ ಇತ್ತು. ಅದರ ಮೇಲೊಂದು ಕಾಗದದ ಲಕೋಟೆಯು ಬಿದ್ದಿತ್ತು. ಶಂಕರರಾಯನು ಅದನ್ನು ಕೈಗೆ ತೆಗೆದುಕೊಂಡು ನೋಡಿದನು. ಮೇಲ್ವಿಳಾಸವು ಮಾಧವನ ಕೈಯ ಅಕ್ಷರದಲ್ಲಿತ್ತು. ಶಂಕರನ ಕೈ ನಡುಗಲಾರಂಭಿಸಿತು. ನಿಲ್ಲಲಾರದೆ ನೆಲದಮೇಲೆ ಕೂತುಕೊಂಡು ಪಟಪಟನೆ ಸಿಡಿಯು

ತ್ತಿದ್ದ ತಲೆಯನ್ನು ಎಡಗೈಯಲ್ಲಿ ಭದ್ರವಾಗಿ ಹಿಡಿದುಕೊಂಡನು. ಮೈಯೆಲ್ಲಾ ಬೆವತುಹೋಗಿತ್ತು. ಇದನ್ನೆಲ್ಲಾ ನೋಡುತ್ತಿದ್ದ ಸೇವಕನೊಬ್ಬನು ಬೇಗನೆ ಗಂಗಾಬಾಯಿಯನ್ನು ಕರೆದುಕೊಂಡು ಬಂದನು. ಆಕೆ ಬಂದು "ಏನು ಬಾವ! ಏನು ಸಮಾಚಾರ?" ಎಂದುದಕ್ಕೆ ಶಂಕರರಾಯನು ಯಾವ ಮಾತನ್ನೂ ಆಡದೆ ಕಾಗದವನ್ನು ತೋರಿಸಿದನು. ಅವಳು ಲಕೋಟೆಯನ್ನು ತೆಗೆದುಕೊಂಡು ಬಿಚ್ಚಿನೋಡಿ, "ಹೆದರಬೇಡಿ, ಬಾವ! ಜೀವಕ್ಕೇನೂ ಭಯವಿಲ್ಲ, ನಿಧಾನಮಾಡಿಕೊಳ್ಳಿ" ಎಂದು ಹೇಳಿ ಶಂಕರರಾಯನನ್ನು ಸ್ವಲ್ಪ ಸಮಾಧಾನಗೊಳಿಸಿ ಕಾಗದವನ್ನೋದಿದಳು. ಅದರ ಅಭಿಪ್ರಾಯವೇನಂದರೆ:—

"ನಾನು ದೈವಸಾಕ್ಷಿಯಾಗಿ ಸುಭದ್ರೆಯನ್ನು ವರಿಸಿರುವುದರಿಂದ ತಮ್ಮ ಶತ್ರುಪಕ್ಷಕ್ಕೆ ಸೇರಿದವನಾದೆನು. ಆದುದರಿಂದ ತಮ್ಮ ಗೃಹದಲ್ಲಿ ಒಂದುಕ್ಷಣವೂ ನನಗೆ ನಿಲ್ಲುವುದಕ್ಕೆ ಬಾಧ್ಯತೆಯಿರುವುದಿಲ್ಲ. ಅಲ್ಲದೆ ತಮ್ಮ ಅನುಮತಿಯಿಲ್ಲದೆ ನಾನು ಸ್ವತಂತ್ರಿಸಿದ ತಪ್ಪಿತಕ್ಕೂ ಪ್ರಾಯಶ್ಚಿತ್ತವಾಗಲೇ ಬೇಕು. ಆದಕಾರಣ ನಾನು ಈಗ ಸದ್ಯಕ್ಕೆ ದೇಶಾಂತರದಲ್ಲಿ ಅಜ್ಞಾತವಾಸವನ್ನು ಮಾಡುವೆನು.

ತಮ್ಮ ಆಜ್ಞೆಯನ್ನು ಮೀರಿಮನಸ್ಸಿಗೆವ್ಯಥೆಯನ್ನುಂಟುಮಾಡಿದುದಕ್ಕೆ ಕ್ಷಮೆಯನ್ನು ಕೇಳಿಕೊಳ್ಳುತ್ತೇನೆ. ಆದರೆತಮ್ಮ ಆಜ್ಞೆಯಂತೆನಡೆದಿದ್ದರೆಸರ್ವಸಾಕ್ಷಿಯಾದಭಗವಂತನಿಗೆಉತ್ತರವಾದಿಯಾಗುತ್ತಿದ್ದೆನು. ಆದುದರಿಂದ ಕ್ಷಮಿಸಬೇಕೆಂದು ಪುನಃ ಪುನಃ ಬೇಡಿಕೊಳ್ಳುತ್ತೇನೆ."

ಈ ವಿನಯಪೂರ್ವಕವಾದ ಮತ್ತು ಮನೋನಿಶ್ಚಯಪ್ರದರ್ಶಕವಾದ ಒಕ್ಕಣೆಯನ್ನು ಕೇಳಿದಕೂಡಲೆ ಶಂಕರರಾಯನು ಗಟ್ಟಿಯಾಗಿ ಅಳುತ್ತಾ ನೆಲದಮೇಲೆ ಹೊರಳಾಡಲು ಪ್ರಾರಂಭಿಸಿದನು. ಗಂಗಾಬಾಯಿಗೂ ಕಣ್ಣಿನಲ್ಲಿ ನೀರುಸುರಿಯುತ್ತಿತ್ತು. ಆದರೂ ಸಮಾಧಾನ ಮಾಡಿಕೊಂಡು "ಬಾವ! ಇದೇನು ನಾಚಿಕೆಗೇಡು? ಅತ್ತುದರಿಂದ

ಪ್ರಯೋಜನವೇನು? ಸುಮ್ಮ ನೆಗಲಭೆಯಾಗುತ್ತದೆ.'' ಎಂದಳು. ಶಂಕರ ರಾಯನು«ಅಯ್ಯೋ! ಅಯ್ಯೋ! ನನ್ನ ಮಗನನ್ನು ಯಾವಾಗ ನೋಡುವೆ ನಪ್ಪಾ! ನನಗೇನು ದುರ್ಬುದ್ಧಿ ಬಂದಿತು? ಎಲ್ಲಿ ಅನ್ನವಿಲ್ಲದೆ ನಿಲ್ಲಲು ಸ್ಥಳವಿಲ್ಲದೆ ಅಲೆಯುತ್ತಾನೊ? ಏನುಮಾಡಲಿ? ನನ್ನ ದ್ವೇಷಾಸೂಯೆ ಗಳನ್ನು ಸುಡು! ನನ್ನ ಮಗನನ್ನು ಯಾರಾದರೂ ಕರೆದುಕೊಂಡು ಬನ್ನಿ. ನೀವು ಕೇಳಿದಷ್ಟು ಹಣವನ್ನು ಕೊಡುತ್ತೇನೆ. ಸುಭದ್ರೆಯನ್ನೂ ಮನೆಗೆ ಕರೆತನ್ನಿ. ಅವಳೇ ನನ್ನ ಮಗಳು. ನನಗಿನ್ನು ಯಾರೂ ದಿಕ್ಕಿಲ್ಲ. ನನ್ನ ಪ್ರಾಣವೆಲ್ಲಾ ಒಬ್ಬ ಮಗನಲ್ಲಿತ್ತು. ಅವನನ್ನು ನಾನಾಗಿಯೇ ಕಾಡುಪಾಲುಮಾಡಿದಹಾಗಾಯಿತು. ಇನ್ನು ನಾನೇಕೆಬದುಕಿರಲಿ '' ಎಂದು ಮುಂತಾಗಿ ಉನ್ಮತ್ತನಂತೆ ಹಲುಬಿದನು. ತಂದೆಗೆ ಸಚ್ಚರಿತ್ರ ನಾಗಿಯೂ, ವಿಧೇಯನಾಗಿಯೂ, ವಿದ್ಯಾವಂತನಾಗಿಯೂ ಇರುವ ಮಗನಿಗಿಂತಲೂ ಬೇರೆ ಭೂಷಣವೊಂದುಂಟೆ? ಶಂಕರರಾಯನಿಗೆ ಮಗನೆ ಸರ್ವಸ್ವವೂ ಆಗಿದ್ದನು. ಅವನ ಸೌಖ್ಯಕ್ಕೆ ಕುಂದು ಬಂದೀತೆಂಬ ಭೀತಿ ಯಿಂದ ಶಂಕರರಾಯನು ಎರಡನೆಯ ಮದುವೆಯನ್ನು ಸಹ ಮಾಡಿಕೊಳ್ಳ ಲಿಲ್ಲ. ಮಾಧವನಿಗೆ ಸ್ವಲ್ಪ ಮೈಯಲ್ಲಿ ಆಲಸ್ಯವುಂಟಾದರೂ ತಂದೆಗೆ ಈ ಲೋಕವೇ ಮುಳುಗಿಹೋದಂತಾಗುವುದು. ಹೀಗಿರುವಲ್ಲಿ ಅವನು ದೇಶಾಂತರಹೊರಟುಹೋದರೆ ಶಂಕರರಾಯನು ಜೀವಿಸುವಬಗೆಹೇಗೆ?

ಗಂಗಾಬಾಯಿಗೆ ಅವನನ್ನು ಸಮಾಧಾನಪಡಿಸುವುದು ಅತ್ಯಂತ ಶ್ರಮಸಾಧ್ಯವಾದ ಕೆಲಸವಾಯಿತು. ಕೊನೆಗೆ« ಬಾವಾಜಿ! ಮಾಧ ವನನ್ನು ಆಕರ್ಷಣೆ ಮಾಡುವ ಶಕ್ತಿಯೊಂದನ್ನು ನಾವು ಭದ್ರಪಡಿಸಿ ಕೊಂಡಿದ್ದರೆ ಅವನೆಲ್ಲಿದ್ದರೂ ಬರುವನು. ಯೋಚನೆಮಾಡಬೇಡಿ. ನಾನು ತಕ್ಕ ಸನ್ನಾಹವನ್ನು ಮಾಡುತ್ತೇನೆ'', ಎಂದಳು.

ಶಂಕರ—ಎಲ್ಲಿ! ಆಕಾಗದವನ್ನು ಕೊಡು. ಮದುವೆಯಾವಾಗ ಆಯಿತು? ಅದೇನು ಸಮಾಚಾರ ನಿನಗೆಗೊತ್ತೋ?

ಗಂಗಾ—ಮದುವೆಯಾಗಿಲ್ಲ. ಕಾಗದವನ್ನು ನೋಡಿ, 'ದೈವ ಸಾಕ್ಷಿಯಾಗಿ ಸುಭದ್ರೆಯನ್ನು ವರಿಸಿರುವುದರಿಂದ' ಎಂದಿದೆ.

ಗಂಗಾಬಾಯಿಯು ರಾಂಪುರಕ್ಕೆ ಮಾಧವನು ಬಂದಿದ್ದಾಗ್ಗೆ ನಡೆದ ಸಂಗತಿಯೆಲ್ಲವನ್ನೂ ಸವಿಸ್ತಾರವಾಗಿ ಹೇಳಿದಳು.

ಶಂಕರರಾಯನು, "ಆಹಾ! ಮೊದಲೇ ನನಗೆ ಈ ಸಂಗತಿಗಳೆಲ್ಲವೂ ತಿಳಿಯದೇಹೋದುವಲ್ಲ! ನನ್ನ ಮಗನು ಈಶ್ವರಸಾಕ್ಷಿಯಾಗಿ ಪ್ರತಿಜ್ಞೆಮಾಡಿಕೊಂಡಿರುವುದು ನನ್ನ ಹುಚ್ಚುತನಕ್ಕೋಸ್ಕರ ಬಿಡುವನೆ? ಶಹಬಾಸ್! ಮಗನೆ! ನೀನು ಹರಿಶ್ಚಂದ್ರನ ವಂಶದಲ್ಲಿ ಹುಟ್ಟಲು ತಕ್ಕವನು, ಅಂಥಾ ಮಗನನ್ನು ತಿರಿಗಿ ಕಾಣುವೆನೆ?" ಎಂದು ನಾನಾ ವಿಧವಾಗಿ ವರ್ಣಿಸಿ ಅಳತೊಡಗಿದನು.

ಗಂಗಾಬಾಯಿಯು "ಸಮಾಧಾನಹೇಳಿದಷ್ಟೂ ದುಃಖವು ಹೆಚ್ಚುವುದು. ತನ್ನೊಳಗೆ ತಾನೇ ಶಾಂತವಾಗಲಿ" ಎಂದಂದುಕೊಂಡು ಬೇರೆ ಕೆಲಸಕ್ಕೆ ಹೊರಟುಹೋದಳು.

ಆದಿನ ಭಾನುವಾರವಾದುದರಿಂದ ಕೋರ್ಟಿನಕೆಲಸವಿರಲಿಲ್ಲ. ಶಂಕರರಾಯನ ಸರಕಾರದಪಕ್ಷದವಕೀಲನನ್ನು ಮನೆಗೆಕರೆಸಿಕೊಂಡು ತನಗೆ ವ್ಯಾಜ್ಯವನ್ನು ಮುಂದಕ್ಕೆ ನಡೆಸುವುದರಲ್ಲಿ ಸಮ್ಮತಿಯಿಲ್ಲವೆಂದೂ ಹೇಗಾದರೂ ಮಾಡಿ ಅಪರಾಧಿಯನ್ನು ಬಿಡುಗಡೆ ಮಾಡುವ ಪ್ರಯತ್ನ ಮಾಡಬೇಕೆಂದೂ ಹೇಳಿದನು. ಅದಕ್ಕೆ ವಕೀಲನು ಆಶ್ಚರ್ಯಪಟ್ಟು "ಇದೇನು ಜಹಗೀರ್ದಾರರೆ, ಹೀಗೆ ಅಪ್ಪಣೆಕೊಡಿಸೋಣವಾಗುತ್ತದೆ? ಅಂತಹ ಘಾತುಕನನ್ನು ಬಿಡುವುದುಂಟೆ? " ಎಂದು ಕೇಳಿದನು. ಶಂಕರರಾಯರು, "ಸ್ವಾಮಿ! ಅವನ ಹೊಟ್ಟೆಯುರಿ ತಗಲಿದುದರಿಂದಲೆ ನನಗೆ ಮಗನ ವಿಯೋಗವುಂಟಾಗಿರಬಹುದು. ಆದುದರಿಂದ ಅವನಿಗೆ ಶಿಕ್ಷೆಮಾಡಿಸುವುದು ನನಗೆ ಇಷ್ಟವಿಲ್ಲ. ದಯಪಿಟ್ಟು ಹೇಗಾದರೂ

ವ್ಯಾಜ್ಯವನ್ನು ಸಾಕುಮಾಡೋಣವಾಗಲಿ'' ಎಂದನು. ವಕೀಲನು, ''ಸರಕಾರದವರು ವ್ಯಾಜ್ಯವನ್ನು ಪ್ರಾರಂಭಿಸಿದಮೇಲೆಅದನ್ನು ಬಿಡುವುದಕ್ಕೆಂದಿಗೂ ಆಗುವುದಿಲ್ಲ. ಸಾಕ್ಷಿಗಳ ಹೇಳಿಕೆಯಿಂದೇನಾದರೂ ಗುಣವಾದರೆಆಗಬಹುದು''ಎಂದುತಿಳಿಸಿ ಶಂಕರರಾಯನಿಗುಂಟಾದ ಮನೋವ್ಯಥೆಗೋಸ್ಕರ ಬಹಳ ಕನಿಕರಪಟ್ಟು ಹೊರಟುಹೋದನು.

———o———

## —ಹತ್ತನೆಯ ಅಧ್ಯಾಯ—

ರಾಮರಾಯನು ಪ್ರತಿನಿತ್ಯವೂ ಶಂಕರರಾಯನ ಕಾಗದವನ್ನೆ ನಿರೀಕ್ಷಿಸುತ್ತಿದ್ದನು. ಮಾಧವನು ರಾಂಪುರದಿಂದ ಪುನಹೆಗೆ ಹೋದಮೇಲೆ ೧೦-೧೨ ದಿನಗಳವರೆಗೂ ನೋಡಿದರೂ ಉತ್ತರ ಬರಲಿಲ್ಲ. ಅನಂತರ ಒಂದು ತಗಾದೆಯ ಕಾಗದವನ್ನು ಬರೆದು ಟಪ್ಪಾಲಿಗೆ ಹಾಕಿದಮೇಲೆ ಏನೋ ಒಂದು ಯೋಚನೆಯುತೋರಿತಾನೂ ಅದೇದಿನದ ಟಪ್ಪಾಲುಬಂಡಿಯಲ್ಲಿ ಕೂತುಕೊಂಡು ಪುನಹೆಗೆ ಬಂದನು. ಆದರೆ ಶಂಕರರಾಯನಮನೆಗೆ ಹೋಗಲಿಲ್ಲ. ಒಬ್ಬ ಸ್ನೇಹಿತನ ಮನೆಯಲ್ಲಿಳಿದುಕೊಂಡು ಸಮಾಚಾರವನ್ನು ಗುಟ್ಟಾಗಿ ಮೊದಲು ತಿಳಿದು ಅನಂತರ ಶಂಕರರಾಯನನ್ನು ಕಾಣಬೇಕೆಂದು ನಿಶ್ಚಯಿಸಿದನು. ಮಾರಣೆಯದಿನ ಶಂಕರರಾಯನ ಮನೆಯಲ್ಲಿ ನಡೆದ ಸಮಾಚಾರವೆಲ್ಲವೂ ಮನೆಯ ಆಳುಗಳಮೂಲಕ ಹೊರಗೆ ಬಂದುಬಿಟ್ಟಿತು. ರಾಮರಾಯನು ತನ್ನ ಕಿವಿಯನ್ನೆ ತಾನು ನಂಬಲಾರದೆ ಹೋದನು. ಅವನಿಗೆ ತನಗಿಂತಲೂ ಭಾಗ್ಯವಂತರಾರೂ ಇಲ್ಲದುದರಿಂದ ಶಂಕರರಾಯನು ತನ್ನನ್ನು ಬಿಟ್ಟು ಬೇರೆ ಎಲ್ಲಿಯೂ ಬಂಧುತ್ವ ಮಾಡಲಾರನೆಂದು ಚೆನ್ನಾಗಿ ನಂಬಿಕೆಯಿತ್ತು. ಈಗ ನೋಡಿದುದರಲ್ಲಿ ಆ ಅಯೋಗ್ಯ

ನಾದ ಹುಡುಗನಿಂದ ಎಲ್ಲವೂ ಕೆಟ್ಟುಹೋಯಿತು. "ಇಂಗ್ಲೀಷ್ ಕಾದಂಬರಿಗಳನ್ನು ಓದಿ ಹುಡುಗರೆಲ್ಲರೂ ಪೂರ್ವಾಚಾರ, ಘನತೆ, ಗಾಂಭೀರ್ಯ, ಇವುಗಳೆಲ್ಲವನ್ನೂ ಮರೆತುಬಿಟ್ಟರು. ಶ್ರೀಮಂತನ ಮಗಳನ್ನು ಬಿಟ್ಟು ಹುಟ್ಟುದರಿದ್ರನಾದ ಪುರೋಹಿತನ ಮಗಳನ್ನು ವರಿಸಿದನೆ? ಇದೇನು ಕಾಲಮಹಿಮೆಯೊ? ಇಲ್ಲವೆ ಆ ಹುಡುಗನಿಗೆ ಬುದ್ಧಿ ಸ್ತಿಮಿತವಿಲ್ಲವೊ? ಆ ತಿರುಕನಮಗಳ ರೂಪವನ್ನು ನೋಡಿ ಮರುಳಾದನೆ? ಆಹಾ! ಏನುರೂಪ! ಆ ಹರುಕುಸೀರೆಯನ್ನುಟ್ಟು ಒಂದು ಚಿನ್ನದ ಕರ್ಣಾಭರಣಕ್ಕೂ ಗತಿಯಿಲ್ಲದೆ ಇರುವ ಹುಡುಗಿಗೂ ನನ್ನ ಮಗಳಿಗೂಸಾಮ್ಯವೆ? ಅವನಿಗೆಯಾರೋ ಮರುಳಿಕ್ಕಿರಬೇಕು. ಇಲ್ಲದಿದ್ದರೆ ಅವನೆಂದಿಗೂ ನನ್ನ ಮಗಳನ್ನು ಬಿಟ್ಟು ಸುಭದ್ರೆಯನ್ನು ಒಪ್ಪುತ್ತಿರಲಿಲ್ಲ." ಎಂದು ರಾಮರಾಯನು ನಾನಾ ವಿಧವಾಗಿ ತರ್ಕವಿತರ್ಕಗಳನ್ನು ಮಾಡಿ ಕೊನೆಗೆ ಹೀಗೆಂದು ನಿಶ್ಚಯಿಸಿದನು:—"ಇದಕ್ಕೆಲ್ಲಾ ಕಾರಣವಾದವಳಾರು? ಆ ತಿರುಕನ ಮಗಳಲ್ಲವೆ? ಅವಳು ಕಣ್ಣಿಗೆ ಕಾಣಿಸದಿದ್ದರೆ ನನ್ನ ಮಗಳಿಗೆ ಜಹಗೀರ್ದಾರನ ಹೆಂಡತಿಯಾಗುವ ಅದೃಷ್ಟವು ತಪ್ಪುತ್ತಿತ್ತೆ? ಇಲ್ಲ. ಆದುದರಿಂದ ಆ ಗೋಮುಖವ್ಯಾಘ್ರಕ್ಕೆ ತಕ್ಕ ಪ್ರತೀಕಾರವನ್ನು ಮಾಡಬೇಕು. ಮಾಧವರಾಯನು ತಂದೆಯ ಮಾತನ್ನೂ ಉಲ್ಲಂಘಿಸಿ ಮನೆಬಿಟ್ಟು ಹೋದನಲ್ಲವೆ? ಯಾರಿಗೋಸ್ಕರ?–ಇರಲಿ! ಅವಳು ಅವನಿಗೆ ಎಂದೆಂದಿಗೂ ದೊರಕದಹಾಗೆಮಾಡದಿದ್ದರೆ ನನ್ನ ಹೆಸರು ರಾಮರಾಯನೇ ಅಲ್ಲ. ಈಕ್ಷಣವೆ ಅದಕ್ಕೆ ತಕ್ಕ ಸನ್ನಾಹವನ್ನು ನಡೆಸುವೆನು."

ರಾಮರಾಯನು ಕುವಿದ್ಯೆಯಲ್ಲಿ ಬಹುನಿಪುಣ. ಅವನ ತಂದೆಯು ಕೇವಲ ದರಿದ್ರನಾಗಿದ್ದನು. ರಾಮರಾಯನ ಐಶ್ವರ್ಯವೆಲ್ಲವೂ ಅವನೇ ಸ್ವಂತವಾಗಿ ಆರ್ಜಿಸಿದುದು. ಮೋಸ, ತಂತ್ರ, ಕಾಪಟ್ಯ, ಈ ಮೊದಲಾದ ಕುಮಾರ್ಗಗಳಲ್ಲಿ ಅವನಿಗೆ ತುಂಬಾ ಅನುಭವ.

ಇವುಗಳಿಂದಲೇ ಅವನು ದೊಡ್ಡ ಒಕ್ಕಲಾದವನೆಂದು ಜನಗಳೆಲ್ಲರೂ ಆಡಿಕೊಳ್ಳುತ್ತಿದ್ದರು. ಆದರೆ ದ್ರವ್ಯದಮುಂದೆ ಯಾರಮಾತು ತಾನೆ ಏನು ಪ್ರಯೋಜನಕ್ಕೆ ಬರುವುದು ? ರಾಮರಾಯನು ಸ್ವಭಾವತಃ ಬುದ್ಧಿಶಾಲಿ. ಆರ್ಜಿಸಿದುದನ್ನೆಲ್ಲಾ ಚೆನ್ನಾಗಿ ಕಾಪಾಡಿ ವೃದ್ಧಿಪಡಿಸುತ್ತಿದ್ದನು. ಅಲ್ಲದೆ ಹೊಸಹೊಸ ತಂತ್ರಗಳನ್ನು ಏರ್ಪಡಿಸಿ ಒಬ್ಬರಮೇಲೊಬ್ಬರಿಗೆ ವ್ಯಾಜ್ಯವನ್ನು ತಂದುಹಾಕಿ ತಾನುಮಾತ್ರ ಬೇರೆ ಇದ್ದುಕೊಂಡು ಉಭಯ ಪಕ್ಷದಿಂದಲೂ ಪ್ರಯೋಜನವನ್ನು ಹೊಂದುತ್ತಿದ್ದನು. ಇಂತಹ ರಾಮರಾಯನಿಗೆ ಈಗಿನ ಸಂದರ್ಭದಲ್ಲಿ ಹೇಗೆ ನಡೆಯಬೇಕೆಂದು ನಿರ್ಧರಿಸುವುದು ಸ್ವಲ್ಪವೂ ಕಷ್ಟವಾದ ಕಾರ್ಯವಾಗಿರಲಿಲ್ಲ. ಆತ್ಮಾರಾಮನಮೊಕದ್ದಮೆಯವಿಚಾರವುಅವನಿಗೆ ಚನ್ನಾಗಿ ತಿಳಿದಿತ್ತು. ಆ ದಿನವೆ ಜೈಲಿನಲ್ಲಿದ್ದ ಆತ್ಮಾರಾಮನನ್ನು ನೋಡಲು ಅಪ್ಪಣೆ ಚೀಟಿಯನ್ನು ಪಡೆದು ಅವನನ್ನು ಕಂಡು ಕಾರಣಾಂತರದಿಂದ ಅವನಿಗೆ ಸಹಾಯಮಾಡಲು ತಾನು ಬಂದಿರುವುದಾಗಿಯೂ ಅವನುಸ್ವಲ್ಪವೂಹೆದರಬೇಕಾದುದಿಲ್ಲವೆಂದೂ ತಿಳಿಸಿದನು. ತನಗೆನಿರಂತರಕಾರಾಗೃಹವಾಸವೇ ಹಣೆಯಲ್ಲಿಬರೆದಿರುವುದೆಂದುತಿಳಿದುಕೊಂಡಿದ್ದ ಆತ್ಮಾರಾಮನಿಗೆರಾಮರಾಯನವಾಗ್ದಾನವುಸಾಯುವರೋಗಿಗೆಅಮೃತವನ್ನು ಕುಡಿಸಿದಹಾಗಾಯಿತು. ಆತ್ಮಾರಾಮನಿಗೆ ವ್ಯಾಜ್ಯವನ್ನು ಗೆಲ್ಲುವೆನೆಂಬ ಆಶೆಯುಲೇಶಮಾತ್ರವೂಇರಲಿಲ್ಲ. ಅವನು "ಪಾಪರ್" ಆದುದರಿಂದ ಸರಕಾರದವರೇ ಅವನಿಗೋಸ್ಕರಬಬ್ಬ ವಕೀಲನನ್ನುಗೊತ್ತುಮಾಡಿಟ್ಟಿದ್ದರು. ಆ ವಕೀಲನಿಗೆ ವ್ಯಾಜ್ಯವು ಗೆದ್ದರೂ, ಸೋತರೂ, ಎರಡೂ ಒಂದೇ ! ಅವನ "ರುಸುಂ" ಮಾತ್ರ ಅವನಿಗೆ ತಪ್ಪುತ್ತಿರಲಿಲ್ಲ. ಎದುರುಕಕ್ಷಿಯಾದರೊಬಹುಬಲವತ್ತಾದುದು. ಶಂಕರರಾಯನ ಮಾತಿನಲ್ಲಿಗವರ್ನರ್ ಸಾಹೇಬರು, ಜಡ್ಜಿಗಳು, ಕಲೆಕ್ಟರು ಇವರೆಲ್ಲರಿಗೂ ಬಹಳಗಾರವ. ಆತನೆಮೊದಲನೆಯಸಾಕ್ಷಿ. ಅಪರಾಧಿ

ಸ್ಥಾನದಲ್ಲಿ ನಿಂತಿರುವ ಆತ್ಮಾರಾಮನನ್ನು ಶಂಕರರಾಯನು ವಿಚಾರಣೆಯ ಕಾಲದಲ್ಲಿ ಒಂದೆರಡಾವರ್ತಿಕ್ರೂರವಾಗಿ ನೋಡಿದಮಾತ್ರದಿಂದಲೆ ಆತ್ಮಾರಾಮನಿಗೆ ಕೈಕಾಲುನಡುಗಲಾರಂಭಿಸಿ ಮುಖವು ಬೆಳ್ಳಗಾಗಿಹೋಯಿತು.ಇದನ್ನು‘‘ಜಡ್ಜಿ’’ಯುನೋಡಿತನ್ನಷ್ಟಕ್ಕೆತಾನೆ ನಕ್ಕನು. ಇದರಿಂದ ಅವನಿಗೆ ಮತ್ತಷ್ಟು ಭಯವುಂಟಾಗಿ ನಿಲ್ಲಲಾರದೆ ಕೂತುಬಿಟ್ಟನು. ಹತ್ತಿರದಲ್ಲೆ ಇದ್ದ ಪೋಲೀಸಿನವನು ಕೂಡಲೆ ತೋಳನ್ನು ಹಿಡಿದು ಮೇಲಕ್ಕೆಬ್ಬಿಸಿದನು. ಪುನಃ ಅವನು ಕೂತುಕೊಳ್ಳಲು ಪ್ರಯತ್ನ ಮಾಡಿದುದಕ್ಕೆ ಪೋಲೀಸಿನವನು ಬಿಡಲಿಲ್ಲ. ಜಡ್ಜಿಯು ಕನಿಕರದಿಂದ ಕೈಯಾಡಿಸಿ ಪೋಲೀಸಿನವನನ್ನು ಸುಮ್ಮನಿರುವಂತೆ ಸೂಚಿಸಿದನು. ಕಾರ್ನ್ಸ್ಟೆಬಿಲನು ಸುಮ್ಮನಾದನು.

ಈ ಸಂಗತಿಗಳೆಲ್ಲವೂಆತ್ಮಾರಾಮನ ನೆನಪಿನಲ್ಲಿ ಹೊಸದಾಗಿದ್ದುದರಿಂದ ಅವನುತನಗೆಂದಿಗೂವಿಮೋಚನೆಯಿಲ್ಲವೆಂದು ದೃಢವಾಗಿ ತಿಳಿದಿದ್ದನು. ಇಂತಹಸ್ಥಿತಿಯಲ್ಲಿ ಅಪ್ರಾರ್ಥಿತನಾಗಿ ರಾಮರಾಯನು ಸಹಾಯಕ್ಕೆಬಂದುದರಿಂದ ಆತ್ಮಾರಾಮನಿಗೆಎಷ್ಟುಸಂತೋಷವುಂಟಾಗಿರಬಹುದೋ ವಾಚಕರೇ ಊಹಿಸಬಹುದು. ಅವನುರಾಮರಾಯನಿಗೆದಂಡಪ್ರಣಾಮವನ್ನು ಮಾಡಿ, “ನೀವೇ ನನ್ನ ಭಾಗದದೇವರು. ನಾನು ಪ್ರಾಣವಿರುವವರೆಗೂ ತಮ್ಮ ಉಪಕಾರವನ್ನು ಮರೆಯೆನು. ಆದರೆಜಹಗೀರ್ದಾರರುಎದುರುಕಕ್ಷಿಯಲ್ಲಿರುವಾಗ್ಗೆನಮ್ಮ ವ್ಯಾಜ್ಯವು ಹೇಗೆ ಗೆಲ್ಲುವುದೊ ತಿಳಿಯದು’’ ಎಂದನು. ಅದಕ್ಕೆ ರಾಮರಾಯನು, ‘‘ಆವಿಷಯದಲ್ಲಿ ಯೋಚನೆಬೇಡ. ಶಂಕರರಾಯರ ಮಗನು ನಿನ್ನೆರಾತ್ರೆ ದೇಶಾಂತರ ಹೊರಟುಹೋದನಂತೆ. ಅದರಿಂದ ಅವರಿಗೆ ಬಹಳ ವ್ಯಥೆಯುಂಟಾಗಿದೆ. ಪ್ರಾಯಶಃ ಈ ವ್ಯಾಜ್ಯಕ್ಕೆ ಗಮನ ಕೊಡಲಾರರು’’ ಎಂದು ಧೈರ್ಯಹೇಳಿ ಅಲ್ಲಿಂದ ಪುನಹೆಯಲ್ಲೆಲ್ಲಾ

ಪ್ರಸಿದ್ಧನಾಗಿದ್ದ ‹‹ಅಡ್ವೋಕೇಟ್'' ನನ್ನು ಈ ವ್ಯಾಜ್ಯವನ್ನು ನಡೆಸಲು ಗೊತ್ತುಮಾಡಿ, ತಾನೆ ಅದಕ್ಕೆ ಮುಖಂಡನಾಗಿ ನಿಂತನು.

—o—

## —ಹನ್ನೊಂದನೆಯ ಅಧ್ಯಾಯ—

ಶ್ರೀದೇದಿನ ರಾತ್ರಿ ಸುಮಾರು ೮ ಗಂಟೆಯ ಸಮಯದಲ್ಲಿ ವಿಶ್ವನಾಥನು ಹಜಾರದಮೇಲೆ ದೀಪದೆದುರಿಗೆ ಕುಳಿತುಕೊಂಡು ರಾಮಾಯಣದಪುಸ್ತಕದ ಪುಟಗಳನ್ನು ಮಗುಚಿ ಹಾಕುತ್ತಾ, ಮಧ್ಯೆ ಮಧ್ಯೆ ಕಿವಿಗೊಟ್ಟು ಕೇಳುತ್ತಾ ನಿಟ್ಟುಸಿರುಬಿಡುತ್ತಿದ್ದನು. ಹಾಗೆಯೇ ಏನನ್ನೋ ಯೋಚಿಸಿ ಪುಸ್ತಕವನ್ನು ಮುಚ್ಚಿಕೊಂಡು ಒಂದು ಪುಟವನ್ನು ತೆರೆದು ಪ್ರಶ್ನೆಯನ್ನು ನೋಡಿದನು. ಕೂಡಲೆ ಮುಖವು ವಿಕಾಸವಾಯಿತು. ‹‹ಸರಿಸರಿ ಈಗಲೆ ಬರಬೇಕು'' ಎಂದಂದುಕೊಂಡನು. ಆಗ್ಗೆ ಸರಿಯಾಗಿ ಬೀದಿಯಬಾಗಿಲನ್ನು ತಟ್ಟಿದ ಶಬ್ದವಾಯಿತು. ವಿಶ್ವನಾಥನು ಝುಗ್ಗನೆ ಎದ್ದು ‹‹ಅಗೋ! ಪ್ರಶ್ನೆ ಸುಳ್ಳಲ್ಲ. ಕನಸೂ ಸುಳ್ಳಲ್ಲ.'' ಎಂದಂದುಕೊಂಡು ಬಾಗಿಲುತೆರೆದು ‹‹ಒಳಗೆ ದಯಮಾಡಿ ಸ್ವಾಮಿ'' ಎಂದನು. ಕೂಡಲೆ ಒಬ್ಬ ಸುಂದರಾಕಾರನಾದ ಯುವಾಪುರುಷನು ಮನೆಯೊಳಗೆ ಪ್ರವೇಶಮಾಡಿದನು. ಅವನನ್ನು ಕರೆದುಕೊಂಡುಹೋಗಿ ಚಾಪೆಯಮೇಲೆ ಕುಳ್ಳಿರಿಸಿ, ‹‹ತಮ್ಮನ್ನು ಕಂಡು ನಾನು ಧನ್ಯನಾದೆನು. ನನಗೆ ನಿನ್ನೆಯರಾತ್ರಿ ಕನಸಿನಲ್ಲಿಯೆ ದೇವರ ಅಪ್ಪಣೆಯಾಗಿತ್ತು'' ಎಂದನು. ಆಗಂತುಕನು ವಿಶ್ವನಾಥನ ಮಾತಿಗೆ ಸ್ವಲ್ಪ ಆಶ್ಚರ್ಯಪಟ್ಟು 'ಸ್ವಾಮಿ, ನಾನು ಯಾರೆಂಬುದನ್ನು ನೀವು ಬಲ್ಲಿರೆಂದು ತೋರುತ್ತದೆ'' ಎಂದನು.

ವಿಶ್ವ—ಇಲ್ಲ. ಆದರೆ ತಾವು ಕನ್ಯಾರ್ಥಿಯಾಗಿ ಬಂದಿರುವಿರೆಂಬುದು ಮಾತ್ರ ತಿಳಿಯುವುದು.

ಆಗಂತುಕ—ಅದುಹೇಗೆ?

ವಿಶ್ವ—ಮೊದಲೇ ಹೇಳಿದೆನಷ್ಟೆ. ನಮ್ಮ ಕುಲದೈವವಾದ ಅಂಬಾಭವಾನಿಯು ಸ್ವಪ್ನದಲ್ಲಿ ಬಂದು “ನಾಳೆ ಸಾಯಂಕಾಲವಾದ ಎರಡುಗಳಿಗೆಗೆ ಸರಿಯಾಗಿನಿನ್ನ ಮಗಳಿಗನುರೂಪನಾದ ತರುಣನು ಕನ್ಯಾರ್ಥಿಯಾಗಿ ಬರುವನು. ನೀನು ಯೋಚನೆಮಾಡಬೇಡ” ಎಂದು ಹೇಳಿಹೋದಳು. ಸಾಯಂಕಾಲವಾದಾಗಿನಿಂದ ತಮ್ಮ ನಿರೀಕ್ಷಣೆಯಲ್ಲಿಯೆ ಕೂತಿದ್ದೇನೆ.

ಆಗಂ—ಹಾಗಾದರೆ ನನಗೆ ತಮ್ಮ ಮಗಳನ್ನು ಲಗ್ನಮಾಡಿಕೊಡುವಿರಾ? ನನ್ನ ಕುಲಗೋತ್ರ ತಿಳಿಯಬೇಕಾದುದಿಲ್ಲವೆ?

ವಿಶ್ವ—ತಮ್ಮ ಕುಲವನ್ನು ತಮ್ಮ ಮುಖವು ಹೇಳುವುದು. ತಾವು ಬೇರೆ ಗೋತ್ರದವರಾಗದಿದ್ದರೆ ಅಂಬಾಭವಾನಿಯು ಸೂಚನೆಯನ್ನೆ ಕೊಡುತ್ತಿರಲಿಲ್ಲ. ನಾನು ಲಗ್ನಮಾಡಿಕೊಡು —

(ಸುಭದ್ರೆಯುಯಾವುದೊಕೆಲಸದನಿಮಿತ್ತವಾಗಿಹಜಾರದ ಮೇಲಕ್ಕೆ ಬಂದವಳು ತರುಣನನ್ನು ನೋಡಿ ಚಮಕಿತಳಾಗಿ ಕೈಯಲ್ಲಿದ್ದ ಕಂಚಿನಪಂಚಪಾತ್ರೆಯನ್ನು ಕೆಳಗೆಹಾಕಿಬಿಟ್ಟಳು. ಅದು ಹಜಾರದಕಲ್ಲಿನ ಮೇಲೆಶಬ್ದಮಾಡಿಕೊಂಡುಬಿದ್ದು ಉರುಳಿಕೊಂಡುಹೋಯಿತು.)

ವಿಶ್ವ—ಏಕಮ್ಮಾ ! ಸುಭದ್ರೆ ! ನೆಲವನ್ನು ನೋಡಿಕೊಂಡು ನಡೆಯಬಾರದೆ? (ಸುಭದ್ರೆ, ಹೊರಟುಹೋದಳು.) ಇವಳೇಸ್ವಾಮಿ ನನ್ನಮಗಳು. ನಾನು ಲಗ್ನಮಾಡಿ

ಕೊಡುವೆನೊ ಇಲ್ಲವೊ ಎಂಬುದಕ್ಕೆ—ತಾವು ಬರುವುದಕ್ಕೆ ಮುಂಚೆಯೆ ಸಕಲ ಸಲಕರಣೆಯೊಂದಿಗೆ ಪಂಡರಾಪುರಕ್ಕೆ ಈ ರಾತ್ರಿಯೆ ಹೊರಡಲು ಗಾಡಿಗಳನ್ನೂ ಸಿದ್ಧಮಾಡಿದ್ದೇನೆ. ದೇವರ ದಯವಿದ್ದರೆ ನಾಳೆಯೆ ಶ್ರೀಪಾಂಡುರಂಗನ ಸನ್ನಿಧಿಯಲ್ಲಿ ವಿವಾಹವು ನಡೆಯುವುದು.

ಆಗಂತುಕ—ನಾನು ಇಷ್ಟುಸುಲಭವಾಗಿ ಕಾರ್ಯವು ನೆರವೇರುವುದೆಂದು ನೆನಸಿರಲಿಲ್ಲ. ದೇವರಸಹಾಯವಿದ್ದುದರಿಂದ ಆಯಿತು. "ಶುಭಸ್ಯ ಶೀಘ್ರಂ."

ಮಾತು ಅಲ್ಲಿಗೆ ನಿಂತಿತು. ಆಗಂತುಕನು ೨೦ ವರ್ಷಗಳಿಗೆ ಮೀರದ ವಯಸ್ಸುಳ್ಳವನಾಗಿಯೂ ಅತಿಶಯ ತೇಜಸ್ವಿಯಾಗಿಯೂ ಇದ್ದನು. "ಇಂತಹ ವರನು ತಾನಾಗಿಯೆ ಬಂದುದು ಹೇಗೆ? ಇವನನ್ನು ನೋಡಿದರೆ ಸಾಮಾನ್ಯಪುರುಷನಂತೆ ತೋರುವುದಿಲ್ಲ. ಇವನಿಗೆ ಇನ್ನೆಲ್ಲಿಯೂ ಕನ್ಯೆ ಸಿಕ್ಕಲಿಲ್ಲವೆ? ಅಲ್ಲದೆ ಇವನೇ ಏತಕ್ಕೆ ಕನ್ಯಾರ್ಥಿಯಾಗಿ ಬಂದನು? ತಂದೆ ಯಿಲ್ಲವೊ? ಅಥವಾ ಜಾತಿಯಲ್ಲೇನಾದರೂ ಕಡಿಮೆಯೊ? ಇಲ್ಲವೆ, ಅಂಬಾಭವಾನಿಯ ಅಪ್ಪಣೆಯು ಅವನಿಗೂ ಆದುದರಿಂದ ನೆಟ್ಟಗೆ ಇಲ್ಲಿಗೆ ಹೊರಟುಬಂದನೊ?" ಹೀಗೆ ನಾನಾ ವಿಧವಾಗಿ ಅನುಮಾನಗಳು ವಿಶ್ವನಾಥನಿಗೆ ತೋರಿ ಬಂದಾಗ್ಯೂ ಯಾವ ಪ್ರಶ್ನೆಯನ್ನಾದರೂ ಕೇಳಿದರೆ ತರುಣನಿಗೆ ಅಸಮಾಧಾನ ಉಂಟಾಗಿ "ನಿಮ್ಮ ಮಗಳೇ ಬೇಡ" ಎಂದು ಹೇಳಿ ಹೊರಟುಹೋದಾನೆಂಬ ಭೀತಿಯಿಂದ ಆ ಸಮಾಚಾರವನ್ನೆ ಎತ್ತದೆ ಸುಮ್ಮನಿದ್ದನು.

ಭೋಜನವಾದ ಅನಂತರದಲ್ಲಿ ಎಲ್ಲರೂ ರಾಂಪುರವನ್ನು ಬಿಟ್ಟು ಹೊರಟು ಪಂಡರಾಪುರವನ್ನು ಸೇರಿದರು. ಅಲ್ಲಿ ಯಥಾವಿಧಿಯಾಗಿ

ವಿವಾಹವು ನಡೆಯಿತು. ವರನು ತನ್ನ ಹೆಸರನ್ನು "ಲಕ್ಷ್ಮೀಪತಿ" ಯೆಂದೂ, ತಂದೆಯ ಹೆಸರನ್ನು 'ಮಹಾದೇವ'ನೆಂದೂ ಹೇಳಿದನು. ರಮಾಬಾಯಿಗೆ ದೂರುವುದಕ್ಕೆ ಬೀಗಿತಿಯರು ಇಲ್ಲದೆ ಇದ್ದುದರಿಂದಲೂ,ತನ್ನ ಕಡೆಯನೆಂಟರೊಬ್ಬರಾದರೂ ಬಾರದೆ ಲಗ್ನವುನೆರವೇರಿದುದರಿಂದಲೂ ಮನಸ್ಸಿನಲ್ಲಿ ಬಹಳ ಅಸಮಾಧಾನವಾಗಿತ್ತು. ಆದರೂ ಅದನ್ನು ಹೊರಗೆ ಹೇಳದೆ ಬಹಳಉಲ್ಲಾಸವನ್ನು ತೋರ್ಪಡಿಸುತ್ತಾ, ಆಊರಿನಮುತ್ತೈದೆಯರಲ್ಲಿನಾಲ್ಕಾರುಮಂದಿಯನ್ನು ಕರೆದು, ಆರತಿ ಉರಟಣೆ, ಬಾಗಿಲುತಡೆಯುವುದು, ಮುಂತಾದ ಹೆಂಗಸರ ಶಾಸ್ತ್ರಗಳನ್ನೊಂದನ್ನೂ ಬಿಡದಂತೆ ನಡೆಸಿದಳು. ಊಟದಕಾಲದಲ್ಲಿ ಅವರಲ್ಲಿಯೆ ಇಬ್ಬರನ್ನು ಎದುರುಪಕ್ಷದವರನ್ನಾಗಿ ಏರ್ಪಡಿಸಿ ತಾನು ಕಲಿತಿದ್ದ ಬೀಗರ ಹಾಡುಗಳನ್ನೆಲ್ಲಾ ಹೇಳಿ ಮುಗಿಸಿದಳು. ಹೀಗೆ, ವಿಶೇಷವಾಗಿ ಜನಗಳ ಕೂಟವಿಲ್ಲದಿದ್ದರೂ, ಮದುವೆಯು ಸಂಭ್ರಮವಾಗಿಯೆಜರುಗಿತು. ಇದೆಲ್ಲವೂ ಮುಗಿದಮೇಲೆಒಂದು ದಿನಲಕ್ಷ್ಮೀಪತಿಯು ತಾನು ಒಂದುಕಾರ್ಯಾರ್ಥವಾಗಿ ದೇಶಸಂಚಾರಮಾಡಬೇಕಾಗಿಧೆಯೆಂದೂ, ನಿಲ್ಲುವುದಕ್ಕೆ ಆಸರೆ ಸಿಕ್ಕಿದೊಡನೆಯೆ ಎಲ್ಲರನ್ನೂ ಕರೆಸಿಕೊಳ್ಳುವೆನೆಂದೂ ವಿಶ್ವನಾಥನಿಗೆ ತಿಳಿಸಿ, ಹೊರಡಲು ಅಪ್ಪಣೆಯನ್ನು ಕೇಳಿದನು. ವಿಶ್ವನಾಥನು, ಅಳಿಯನನ್ನು ಬಿಡಲಾರದೆ, "ಹೊರಡದಿದ್ದರಾಗುವುದಿಲ್ಲವೆ?" ಎಂದು ಕೇಳಿದನು.

ಲಕ್ಷ್ಮೀಪತಿ—ನನ್ನಿಂದಾಗಬೇಕಾದ ಕಾರ್ಯವೇನಾದರೂ ಇದೆಯೆ?

ವಿಶ್ವನಾಥ—ಏನೂ ಇಲ್ಲ. ನಮಗಿರುವವಳೊಬ್ಬಳೇ ಮಗಳು. ನಾವುಭಾಗ್ಯವಂತರಲ್ಲದಿದ್ದರೂ ತಿನ್ನುವುದಕ್ಕೆ ತಕ್ಕಷ್ಟು ಅನುಕೂಲತೆಯನ್ನು ದೇವರು ಉಂಟುಮಾಡಿ ಕೊಟ್ಟಿರುವನು. ಆದುದರಿಂದ ನೀವೂ—

ಲಕ್ಷ್ಮೀ—ತಮಗೆ ಈಗಿರುವ ಭಾರದಜತೆಗೆನಾನೂ ಒಬ್ಬನು ಸೇರಬೇಕೆ? ಎಂದಿಗೂ ಆಗಲಾರದು. ನಾನು ಈ ಚಿಕ್ಕ ವಯಸ್ಸಿನಲ್ಲಿಯೆಯಾವ ಉದ್ಯೋಗವೂ ಇಲ್ಲದೆ ತಿಂದುಕೊಂಡು ಕೂತಿರುವುದು ನ್ಯಾಯವಲ್ಲ. ನನಗೂ ದೇವರುಯಥೇಷ್ಟವಾಗಿ ಕೊಟ್ಟಿದ್ದಾನೆ. ಆದರೆ ಕಾರಣಾಂತರದಿಂದ ಅದನ್ನು ಅನುಭವಿಸಲುಮಾರ್ಗ ವಿಲ್ಲ. ನನ್ನ ಸ್ವಂತ ಕಷ್ಟದಿಂದ ಸಂಪಾದಿಸಿ ಹೆಂಡತಿಯನ್ನು ಸಾಕಬೇಕೆಂಬ ಉದ್ದೇಶವಿದೆ. ಆದುದರಿಂದ ದಯೆಯಿಟ್ಟು ಅಪ್ಪಣೆಕೊಡಬೇಕು.

ವಿಶ್ವ—ಹಾಗಿದ್ದಮೇಲೆ ನಾನು ತಡೆಯುವುದಿಲ್ಲ. ನಿಮಗೆ ದೇವರು ಮಂಗಳವನ್ನುಂಟುಮಾಡಲಿ.

ಲಕ್ಷ್ಮೀಪತಿಯು ಅತ್ತೆಮಾವಂದಿರನ್ನು ನಮಸ್ಕರಿಸಿ ಅವರ ಆಶೀರ್ವಾದವನ್ನು ಪಡೆದು ಪ್ರಯಾಣಮಾಡಿದನು. ಮಾರಣೆಯದಿನ ವಿಶ್ವನಾಥನೂ ಹೆಂಡತಿಮಗಳೊಂದಿಗೆ ರಾಮಪುರವನ್ನು ಸೇರಿದನು.

———o———

## —ಹನ್ನೆರಡನೆಯ ಅಧ್ಯಾಯ—

ಶ್ರೀಂಕರರಾಯನ ದೇಹಸ್ಥಿತಿಯು ದಿನೆ ದಿನೆ ಕೆಡುತ್ತಾ ಒಂದು ವಾರದೊಳಗೆ ಅವನನ್ನು ಹಾಸಿಗೆಹಿಡಿದು ಮಲಗುವಂತೆ ಮಾಡಿಬಿಟ್ಟಿತು. ಡಾಕ್ಟರುಗಳೆಲ್ಲರೂ ಬಂದುನೋಡಿ ಶಾರೀರಕಜಾಡ್ಯವಾವುದೂ ಗೋಚರವಾಗದಿದ್ದುದರಿಂದ ಏನುಮಾಡುವುದಕ್ಕೂ ತೋಚದೆ ಅವನು ಆಸ್ಥಳವನ್ನು ಬಿಟ್ಟು ಮನಸ್ಸಿಗೆ ಹರ್ಷವುಂಟಾಗುವಹಾಗೆ ಅಲ್ಲಲ್ಲಿ ಸಂಚಾರಮಾಡುವುದೊಳ್ಳೆಯದೆಂದು ಅಭಿಪ್ರಾಯಪಟ್ಟರು.

ಆದರೆ ಅವನ ಆಗಿನಸ್ಥಿತಿಯಲ್ಲಿ ಪುನಹೆಯನ್ನು ಬಿಟ್ಟು ಹೊರಡುವುದೇ ಕಷ್ಟವಾಗಿತ್ತು. ಆದುದರಿಂದ ಶರೀರದ ಬಲವು ಕುಗ್ಗದಂತೆ ಔಷಧ ಗಳನ್ನು ಕೊಟ್ಟು ಸ್ವಲ್ಪ ಗುಣಮುಖವಾದೊಡನೆಯೆ ಬೊಂಬಾಯಿಗೆ ಕಳುಹಿಸುವುದಾಗಿ ನಿಶ್ಚಯಿಸಿಕೊಂಡರು. ಆದರೆ ಶಂಕರರಾಯನಿಗೆ ಸ್ವಲ್ಪ ಮಾತ್ರವೂ ಗುಣವಾಗಲಿಲ್ಲ. ಅವನಿಗೆ ಬುದ್ಧಿಯೇ ವಿಕಲ್ಪವಾಗಿ ಹೋಗಿದ್ದ ಹಾಗಿತ್ತು. ಒಂದೊಂದು ಸಲ "ಹಾ ! ಮಾಧವಾ! ಬಂದೆಯಾ ಅಪ್ಪ ಬಾ ಕೂತುಕೊ" ಎನ್ನುವನು. ಒಂದೊಂದು ಸಲ "ಇವಳೇ ನಮ್ಮ ಸುಭದ್ರೆ, ನಮ್ಮ ಮಾಧವನ ಹೆಂಡತಿ ಸುಭದ್ರೆ, ಸುಭದ್ರೆ, ಸುಭದ್ರೆ" ಎಂದು ತನ್ನಷ್ಟಕ್ಕೆ ತಾನೆ ಗುಣಗುಟ್ಟಿಕೊಳ್ಳು ವನು ಗಂಗಾಬಾಯಿಯೊಬ್ಬಳನ್ನು ಮಾತ್ರ ಗುರ್ತಿಸುತ್ತಿದ್ದನು. ಅವಳು ಬಂದಾಗ "ಯಾಕೆ ಸುಭದ್ರೆಯನ್ನು ಕರತರಲಿಲ್ಲ" ಎಂದು ಕೇಳುವನು. ಗಂಗಾಬಾಯಿಗೆ ವಾಸ್ತವವಾಗಿ ಸುಭದ್ರೆಯು ಬಂದರೆ ಸ್ವಲ್ಪ ಗುಣಮುಖವಾದೀತೆಂಬ ಭರವಸೆಯು ಹುಟ್ಟಿತು. ತಾನು ಅವನನ್ನು ಬಿಟ್ಟುಹೋಗಿ ಸುಭದ್ರೆಯನ್ನು ಕರತರಲು ಧೈರ್ಯ ಸಾಲದೆ, ಒಬ್ಬ ಆಳಿನ ಕೈಯಲ್ಲಿ ಕಾಗದವನ್ನು ಕೊಟ್ಟು ರಾಂಪುರಕ್ಕೆ ಕಳುಹಿಸಿದಳು. ಆ ಆಳು ಅಲ್ಲಿಗೆ ಹೋಗಿ ಬಂದು ವಿಶ್ವನಾಥನ ಮನೆಗೆ ಬೀಗ ಹಾಕಿದ್ದಿತೆಂದೂ ನೆರೆಹೊರೆಯಲ್ಲಿ ವಿಚಾರಿಸಲಾಗಿ ಅವರೆಲ್ಲಿಯೊ ದೇಶಾಂತರ ಹೋದಂತೆ ತಿಳಿಯಿತೆಂದೂ, ಇಂತಹ ಕಡೆ ಹೋದ ರೆಂಬುದು ಯಾರಿಗೂ ಗೊತ್ತಿಲ್ಲವೆಂದೂ ಹೇಳಿದನು. ಗಂಗಾ ಬಾಯಿಗೆ ಮನಸ್ಸಿನಲ್ಲಿ ಸ್ವಲ್ಪ ಪೇಚಾಟಕ್ಕೆ ಬಂದಿತು. ಶಂಕರ ರಾಯನನ್ನು ಮಾತ್ರ ಎಡೆಬಿಡದೆ ಉಪಚರಿಸುತ್ತಿದ್ದಳು.

ಆತ್ಮಾರಾಮನ ಮೊಕದ್ದಮೆಯು ಸೆಷನ್ಸ್ ಕೋರ್ಟಿನಲ್ಲಿ ತೀರ್ಮಾನವಾಯಿತು. ಶಂಕರರಾಯನ ಔದಾಸೀನ್ಯದಿಂದಲೋ, ರಾಮರಾಯನ ದ್ರವ್ಯ ಬಲದಿಂದಲೊ, ಹೊಸ ಅಡ್ವೋಕೇಟನ ಶಕ್ತಿ

ಯಿಂದಲೊ,ಅಥವಾ ಇವೆಲ್ಲವೂ ಸೇರಿದುದರಿಂದಲೊ, ಆತ್ಮಾರಾಮ ನಿಗೆ ಬಿಡುಗಡೆಯಾಯಿತು. ಅವನಿಗೆ ರಾಮರಾಯನಲ್ಲಿ ಉಂಟಾದ ಭಕ್ತಿ ವಿಶ್ವಾಸಗಳನ್ನು ಅಷ್ಟಿಷ್ಟೆಂದು ಹೇಳುವ ಹಾಗಿರಲಿಲ್ಲ. ಅವನು ರಾಮರಾಯನನ್ನು ಬಹಳವಾಗಿ ವಂದಿಸಿ, ಯಾವಜ್ಜೀವವೂ ಅವನ ದಾಸಾನುದಾಸನಾಗಿರುವುದಾಗಿ ಹೇಳಿದನು. ರಾಮರಾಯನು, "ಇನ್ನೂ ನಮ್ಮ ಕೆಲಸವು ಮುಗಿಯಲಿಲ್ಲ. ನಿನ್ನಲ್ಲಿದ್ದ ಹಣವನ್ನೂ ನಗಗಳನ್ನೂ ಕಸುಕೊಂಡ ಆ ವಿಶ್ವನಾಥನನ್ನು ಸುಮ್ಮನೆಬಿಡುವುದೆ? ಅವನ ಮಗಳು ನಿನ್ನ ಮನೆಯ ತೊತ್ತಾದುದನ್ನು ನೋಡಿದ ಹೊರತು ನನಗೆ ನಿದ್ರೆಬರುವುದಿಲ್ಲ. ನೀನು ಸ್ವಲ್ಪವೂ ಶ್ರಮಪಡಬೇಕಾದುದಿಲ್ಲ. ನಾನು ಹೇಳಿದ ಹಾಗೆ ಕೇಳು'' ಎಂದನು. ಆತ್ಮಾರಾಮನು, "ಮಹಾ ಪ್ರಸಾದ. ತಮ್ಮಂತಹ ಪ್ರಭುವು ನನಗೆ ದೊರಕಿದುದು ನನ್ನ ಪೂರ್ವಜನ್ಮದ ಸುಕೃತಶೇಷದಿಂದಲ್ಲದೆ ಬೇರೆಯಿಲ್ಲ.'' ಎಂದು ಬಹಳ ವಾಗಿ ರಾಮರಾಯನನ್ನು ಕೊಂಡಾಡಿದನು.

ರಾಮರಾಯನು ಶ್ರೀಧರರಾಯನ ಹೆಸರಿನಲ್ಲಿ (ಇದೇ ಆತ್ಮಾ ರಾಮನ ಈಗಿನ ಹೆಸರಷ್ಟೆ) ವಿಶ್ವನಾಥನಿಗೆ "ಲಾಯರು ನೋಟೀ ಸ'' ನ್ನು ಕೊಡಿಸಿದನು. ವಿಶ್ವನಾಥನು ಕೂಡಲೆ ಮಗಳನ್ನು ಕರೆದು ಕೊಂಡು ಬಂದು ಮದುವೆಮಾಡಿಕೊಡಬೇಕೆಂದೂ ತಪ್ಪಿದರೆ ದಾವಾ ಮಾಡುವುದಾಗಿಯೂ ಅದರಲ್ಲಿ ಬರೆದಿತ್ತು. ವಿಶ್ವನಾಥನು ಪಂಡರ ಪುರದಿಂದ ಆ ದಿನವೆ ರಾಂಪುರಕ್ಕೆ ಬಂದಿದ್ದನು. ಅವನಿಗೆ ಆ "ನೋಟೀಸ''ನ್ನು ನೋಡಿ ಆಶ್ಚರ್ಯವಾಯಿತು. ತನ್ನ ತಪ್ಪಿತದಿಂದ ಮದುವೆ ನಿಂತುದಲ್ಲವೆಂದೂ, ಶ್ರೀಧರರಾಯನನ್ನು "ಕ್ರಿಮಿನಲ್ ಕೋರ್ಟಿ''ನಲ್ಲಿ ವಿಚಾರಣೆಗೆ ಗುರಿಮಾಡಿದಮೇಲೆ ತನ್ನ ಮಗಳಿಗೆ ಬೇರೆಕಡೆ ವಿವಾಹವಾಯಿತೆಂದೂ, ಆದುದರಿಂದ ಯಾವ ಪರಿಹಾರ ವನ್ನು ಕೊಡುವುದಕ್ಕಾಗಲಿ ಹುಡುಗಿಯನ್ನೊಪ್ಪಿಸುವುದಕ್ಕಾಗಲಿ

ಕಾರಣವಿಲ್ಲವೆಂದು ವಿಶ್ವನಾಥನು ಉತ್ತರಕೊಟ್ಟನು. ಅನಂತರ ಶ್ರೀಧರರಾಯನು ವಿಶ್ವನಾಥನಮೇಲೆ ಪುನಹೆ "ಡಿಸ್ಟ್ರಿಕ್ಟ್‌ಜಡ್ಜಿ" ಯವರ ಕೋರ್ಟಿನಲ್ಲಿ ವ್ಯವಹಾರ ನಡೆಸಲು ಅರ್ಜಿಯನ್ನು ಕೊಟ್ಟನು. ವಿಶ್ವನಾಥನೂ ಪುನಹೆಗೆ ಬಂದು ವಕೀಲನನ್ನಿಟ್ಟು ವಾದಿಸಿದನು. ಸಫಲವಾಗಲಿಲ್ಲ. ಅವನ ಕಡೆಯ ಸಾಕ್ಷಿಗಳಾದ ಪುರೋಹಿತ ಮತ್ತು ಇನ್ನೂ ಕೆಲವರು ಮದುವೆಯಲ್ಲಿ ಚೆನ್ನಾಗಿ ತಿಂದು ತೇಗಿದ್ದರೂ ರಾಮರಾಯನ ದ್ರವ್ಯಬಲದಿಂದ ಅಪಸಾಕ್ಷ್ಯವನ್ನು ನುಡಿದು ತಾವು ಯಾವ ಸಂಗತಿಯನ್ನೂ ಕಾಣೆವೆಂದು ಹೇಳಿ ಬಿಟ್ಟರು. ಇದರಿಂದ ಸುಭದ್ರೆಗೆ ವಿವಾಹವೇ ಆಗಿಲ್ಲವೆಂಬದಾಗಿ ಸ್ಥಾಪಿತವಾಯಿತು. ವಿಶ್ವನಾಥನು ಹುಡುಗಿಯನ್ನು ಶ್ರೀಧರರಾಯನವಶಕ್ಕೊಪ್ಪಿಸಬೇಕೆಂದೂ, ಅಥವಾಅದಕ್ಕೆ ಬದಲಾಗಿ ಶ್ರೀಧರರಾಯನೊಪ್ಪುವುದಾದರೆ೨೦೦೦ ರೂಪಾಯಿಗಳನ್ನು ಪರಿಹಾರ ರೂಪವಾಗಿ ಕೊಡುವುದಲ್ಲದೆ ಅವನು ಕೊಟ್ಟ ನಗಗಳನ್ನು ಹಿಂದಕ್ಕೆ ಕೊಟ್ಟು ಬಿಡಬೇಕೆಂದೂ "ಜಡ್ಜಿ" ಮಹಾಶಯರು ತೀರ್ಮಾನ ಮಾಡಿದರು. ಶ್ರೀಧರರಾಯನಿಗೆ ಹಣ, ನಗ, ಬಂದರೆ ಸಾಕೆಂದು ಮನಸ್ಸಿನಲ್ಲಿದ್ದರೂ ರಾಮರಾಯನ ಬಲುಮೆಯಿಂದ, ತನಗೆ ಹಣವೂ ನಗವೂ ಬೇಕಿಲ್ಲವೆಂದೂ, ಹುಡುಗಿಯನ್ನು ಸ್ವಾಧೀನಪಡಿಸಿಕೊಳ್ಳಲು "ಡಿಕ್ರಿ" ಯಾಗಬೇಕೆಂದೂ ಕೇಳಿಕೊಂಡನು. ಅದರಂತೆ "ಡಿಕ್ರಿ" ಯಾಯಿತು.

ಇಲ್ಲಿ ನಾವು ತಿಳಿಸಬೇಕಾದ ವಿಶೇಷ ವಿಷಯವೇನೆಂದರೆ, "ಸಿವಿಲ್‌ಕೋರ್ಟ್" ಗಳಲ್ಲಿ ವ್ಯಾಜ್ಯಗಳು ಅನೇಕ ವರ್ಷಗಳು-ಕೆಲವು ಸಾರಿ ಕಕ್ಷಿಗಾರರ ಜೀವಮಾನವಿರುವ ಪರ್ಯಂತ-ನಡೆದರೂ ತೀರ್ಮಾನಗುವುದಿಲ್ಲ. (ಕೆಲವು ಸಂದರ್ಭಗಳಲ್ಲಿ ವ್ಯವಹಾರಗಳು ಮಕ್ಕಳು,ಮುಮ್ಮಕ್ಕಳು, ಮರಿಮಕ್ಕಳ ಕಾಲದ ವರೆಗೂ ನಡೆದು ಅನೇಕ ನ್ಯಾಯಾಧಿಪತಿಗಳ ಕೈ ಮುಟ್ಟಿ, ಕೊನೆಗೆ ತೀರ್ಮಾನಗುವಾಗ್ಗೆ ಕಕ್ಷಿಗಾರರು

ಇಂಥವರೇ ಎಂಬುದು ಕೂಡ ಮರೆತು ಹೋಗಿರುವುದೂ ಉಂಟು.) ಹೀಗಿದ್ದಾಗ್ಯೂ ವಿಶ್ವನಾಥನ ಮೇಲಿನ ಮೊಕದ್ದಮೆಯು ಮಾತ್ರ ಎರಡೇ ತಿಂಗಳಕಾಲದಲ್ಲಿ ತೀರ್ಮಾನವಾಯಿತು. ಇದಕ್ಕೆ ಕಾರಣ ಬೇರೆಯಿಲ್ಲ. ರಾಮರಾಯನ ಸಾಹಸವೇ ಕಾರಣ.

ಪುನಹೆಯ ಕೋರ್ಟಿನತೀರ್ಮಾನವು ರಾಂಪುರದಲ್ಲಿ ತಿಳಿಯುವುದಕ್ಕೆ ಮುಂಚೆಯೆ ರಾಮರಾಯನೂ, ಶ್ರೀಧರರಾಯನೂ "ಅಮೀನ"ನನ್ನು ಕರೆದುಕೊಂಡು ಅಲ್ಲಿಗೆ ಬಂದು ಬಿಟ್ಟರು. ವಿಶ್ವನಾಥನೂ ಆದಿನವೇ ಬಂದು ಸೇರಿದನು. ಕೂಡಲೆ ಹುಡುಗಿಯನ್ನು ತನ್ನ ಸ್ವಾಧೀನಕ್ಕೆ ಕೊಡಬೇಕೆಂದು ಶ್ರೀಧರರಾಯನು ಕೇಳಿದನು. ಆ ದಿನ ವಿಶ್ವನಾಥನ ಮನೆಯಲ್ಲಿ ಉಂಟಾದ ಕೋಲಾಹಲವು ವರ್ಣನಾತೀತವಾಗಿದ್ದಿತು. ಒಂದುಕಡೆ ವಿಶ್ವನಾಥನೂ ಮತ್ತೊಂದು ಕಡೆ ರಮಾಬಾಯಿಯೂ ಅಳುತ್ತಾ ನೆಲದಮೇಲೆಬಿದ್ದು ಹೊರಳಾಡುತ್ತಿದ್ದರು. ಸುಭದ್ರೆ ಮಾತ್ರ ಮಂಕು ಹಿಡಿದವಳಂತೆ ಕುಳಿತುಕೊಂಡಿದ್ದಳು. ಆ ಊರಿನ ಜನರೆಲ್ಲರೂ ಬಂದು ವಿಶ್ವನಾಥನ ಮನೆ ಯೆದುರಿಗೆ ಸೇರಿ ಬಿಟ್ಟರು. ಅನೇಕ ಜನರು ಆ ತಂದೆ ತಾಯಿಗಳ ಗೋಳನ್ನು ನೋಡಲಾರದೆ ಕಣ್ಣಿನಲ್ಲಿ ನೀರುಸುರಿಸುತ್ತಿದ್ದರು. ಮತ್ತೆ ಕೆಲವರು ವಿಶ್ವನಾಥನಿಗೂ ರಮಾಬಾಯಿಗೂ ಸಮಾಧಾನ ಹೇಳುತ್ತಿದ್ದರು. ವಿಶ್ವನಾಥನು ಮಗಳ ಕಡೆಗೆ ಕೈನೀಡಿ "ಕರೆದುಕೊಂಡು ಹೋಗಿ" ಎಂಬಂತೆ ಸನ್ನೆಮಾಡಿ ಗಟ್ಟಿಯಾಗಿ ಅಳಲು ಪ್ರಾರಂಭಿಸಿದನು. ಶ್ರೀಧರರಾಯನು ಸುಭದ್ರೆಯನ್ನು ಬಾರೆಂದು ಕರೆದು, ಕೈ ಹಿಡಿದನೋ ಇಲ್ಲವೊ, ಅವಳು ಕಿಟ್ಟನೆ ಕಿರಿಚಿಕೊಂಡು ಸ್ಮೃತಿ ತಪ್ಪಿ ನೆಲದ ಮೇಲೆ ಬಿದ್ದು ಬಿಟ್ಟಳು. ಶ್ರೀಧರರಾಯನಂತಹನಿಗೂ ಕೂಡ ಕನಿಕರ ಹುಟ್ಟಿ ಹಿಂದೆ ಸರಿದನು. ಉಳಿದವರೆಲ್ಲರಿಗೂ ಕಣ್ಣೀರು ಕೋಡಿಗಳು ಹರಿಯುತ್ತಿದ್ದುವು ಆದರೆ ಆ ಪಾಷಾಣ ಹೃದಯನಾದ ರಾಮರಾಯನ

ಮನಸ್ಸು ಮಾತ್ರ ಕರಗಲಿಲ್ಲ. ಮೂರ್ಛೆ ಹೋಗಿರುವ ಹುಡುಗಿಯನ್ನೆ ಎತ್ತಿಕೊಂಡು ಹೋಗಿ ಗಾಡಿಯಲ್ಲಿ ಮಲಗಿಸುವಂತೆ ಶ್ರೀಧರರಾಯನಿಗೆ ಸೂಚಿಸಿದನು. ಅವನು ಆದರಂತೆಯೇ ಮಾಡಿದನು.

ಹೀಗೆ ವಿಶ್ವನಾಥನ ಯಾವ ಕುಟೀರವು ಸುಭದ್ರೆಯ ಮೃದುವಾದ ಮಾತಿನಿಂದಲೂ, ಮನೋಹ್ಲಾದಕರವಾದ ನಗುವಿನಿಂದಲೂ, ಇಂಪಾದ ಗಾನದಿಂದಲೂ, ಶೋಭಿಸುತಲಿದ್ದಿತೋ ಆದೇ ಕುಟೀರವು ಈಗ ಶೋಕಮಯವಾಗಿ ಸ್ಮಶಾನ ಸದೃಶವಾಯಿತು.

——o——

## —ಹದಿಮೂರನೆಯ ಅಧ್ಯಾಯ—

ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಧಾನರಾಜ್ಯವಾಗಿರುವ ನಿಜಾಮರಾಷ್ಟ್ರದ ರಾಜಧಾನಿಯಾದ ಹೈದರಾಬಾದಿನ ಒಂದಾನೊಂದು ರಾಜಬೀದಿಯಲ್ಲಿ ಒಂದಾನೊಂದು ಉಪ್ಪರಿಗೆಯ ಮನೆ. ಆ ಮನೆಯ ದಿವಾನ್‌ಖಾನೆಯಲ್ಲಿ ಒಬ್ಬ ತರುಣನು ಆದಿನದ ಅಂಚೆಯಲ್ಲಿ ಬಂದ ಕಾಗದವೊಂದನ್ನು ಕೈಯಲ್ಲಿ ಹಿಡಿದುಕೊಂಡು ಶತಪಥ ತಿರುಗುತ್ತಾ ತನ್ನಲ್ಲಿತಾನೆ, "ಇದೇನು ಆಶ್ಚರ್ಯ! ವಿಳಾಸದಾರರು ಊರುಬಿಟ್ಟುಹೋದುದಾಗಿ ತಿಳಿಯಬಂದುದರಿಂದ ವಾಪಸು ಎಂದು 'ಷರಾ' ಬರೆದಿದೆ. ಊರುಬಿಟ್ಟುಹೋದುದೆಲ್ಲಿಗೆ? ತೀರ್ಥಯಾತ್ರೆಗಳಿಗೋಸ್ಕರ ಹೋಗಿರಬಹುದೆ? ಇಲ್ಲವೆ ವಿಪತ್ತೇನಾದರೂ ಸಂಭವಿಸಿತೊ ? ತಿಳಿಯ ಹೇಳುವವರಾರು ? ಮನಸ್ಸಿನಲ್ಲೇನೋ ಒಂದು ಬಗೆಯ ಕಳವಳವುಂಟಾಗಿದೆಯಲ್ಲ ! ಏನುಮಾಡಲಿ ?" ಎಂದು ಹೇಳಿಕೊಳ್ಳುತ್ತಿದ್ದನು. ಹಾಗೆಯೆ ಸ್ವಲ್ಪ ಹೊತ್ತು ನಿಂತುಕೊಂಡು ಯೋಚಿಸಿ. "ಆಗಬೇಕಾದುದು ಆಗಲೇಬೇಕು. ವೃಥಾಚಿಂತಿಸಿ ಫಲವೇನು" ಎಂದಂದುಕೊಂಡು ಕುರ್ಚಿಯಮೇಲೆ ಕುಳಿತು, ಆದಿನದ

ವರ್ತಮಾನ ಪತ್ರಿಕೆಗಳನ್ನು ಕೈಗೆ ತೆಗೆದುಕೊಂಡನು. ಮೊದಲನೆಯ ಪತ್ರಿಕೆಯಲ್ಲಿಯೆ "ಎಡಿಟರ"ವರ ಲೇಖನದಮೇಲ್ಗಡೆ ಹೀಗೆಂದಿತ್ತು:-

"ಪುನಹೆಯಲ್ಲಿರುವ ಜಹಗೀರ್ದಾರ್ ಶಂಕರರಾಯರಿಗೆ ಅವಸಾನ ಕಾಲವು ಸಮೀಪಿಸಿದೆ. ಅವರು ತಮ್ಮ ಏಕಮಾತ್ರನಾದ ಪುತ್ರನನ್ನು ನೋಡಲು ಬಹಳವಾಗಿ ಅಪೇಕ್ಷಿಸುತ್ತಾರೆ. ಆತನಿಗೋಸ್ಕರ ಕಳೆದ ಎರಡುತಿಂಗಳಿಂದಲೂ ಕೊರಗುತ್ತಿದ್ದಾರೆ. ಅವರ ವ್ಯಾಧಿಗೆ ಪುತ್ರವಿಯೋಗವೇ ಮೂಲಕಾರಣವಾದುದರಿಂದ ಕೈಖುಂಚುವುದಕ್ಕೆ ಮುಂಚೆಯೆ ಪುತ್ರನಾದವನು ಬಂದು ನೋಡಿದುದೇ ಆದರೆ, ಅವರ ವ್ಯಾಧಿಯು ಬಹುಶಃ ಗುಣವಾಗಬಹುದು.

ಪೂನಾ
ತಾ|| – –189 } ಕೆಪ್ಟನ್ ಕಾಕ್ಸ್, ಎಮ್. ಡಿ., ಐ. ಎಮ್. ಎಸ್.
ಸಿವಿಲ್ ಸರ್ಜನ್."

ಯುವಕನ ಕೈಯಿಂದ ಪತ್ರಿಕೆಯು ಕೆಳಗೆಬಿದ್ದಿತು ಕಣ್ಣಿನಿಂದ ಧಾರೆಯಾಗಿ ನೀರು ಹರಿಯಲು ಪ್ರಾರಂಭವಾಯಿತು. ಎದುರಿಗಿದ್ದ ಗಡಿಯಾರವನ್ನು ನೋಡಿದನು, ೯|| ಗಂಟೆಯಾಗಿತ್ತು. ತಡಮಾಡದೆ ಎದ್ದು, ಉಡುಪನ್ನು ಹಾಕಿಕೊಂಡು ಆ "ನ್ಯೂಸ್ ಪೇಪರ"ನ್ನು ತೆಗೆದುಕೊಂಡು ಎಲ್ಲಿಯೋ ಹೋಗಿಬಂದನು. ಅನಂತರ ಸೇವಕನಿಗೆ ಪುನಹೆಗೆ ಹೊರಡಬೇಕೆಂದು ತಿಳಿಸಿ ಸಾಮಾನುಗಳನ್ನು ಕಟ್ಟಿ ಅರ್ಧಗಂಟೆಯಲ್ಲಿ ಸಿದ್ಧಮಾಡಿ ಗಾಡಿಯಲ್ಲಿಟ್ಟು ಕರೆಯಬೇಕೆಂದು ಹೇಳಿದನು. ಹಾಗೆಯೆ ಆ ಪತ್ರಿಕೆಯನ್ನು ಸ್ವಲ್ಪಹೊತ್ತು ನೋಡುತ್ತಿದ್ದರೂ ಅನ್ಯಮನಸ್ಕನಾಗಿದ್ದುದರಿಂದ ಯಾವುದೂ ಮನಸ್ಸಿಗೆ ಹಿಡಿಯಲಿಲ್ಲ. ಆದುದರಿಂದ "ರೈಲ್ ಗಾಡಿಯಲ್ಲಿ ನೋಡೋಣ" ವೆಂದಂದುಕೊಂಡು ಇಟ್ಟುಬಿಟ್ಟನು. ಅನಂತರ ಸ್ನಾನಸಂಧ್ಯಾವಂದನೆಗಳನ್ನು ಮಾಡಿ ಸ್ವಲ್ಪ ಆಹಾರವನ್ನು ತೆಗೆದುಕೊಂಡು ರೇಲ್ವೇಸ್ಟೇಷನ್ನಿಗೆ ಹೋಗಿ ಸೇರಿದನು. ಮನಸ್ಸಿನಲ್ಲಿ ವೃತ್ತಾಂತಪತ್ರಿಕೆಯ ವರ್ತಮಾ

ನದಿಂದುಂಟಾದ ವ್ಯಥೆಯ ಜತೆಗೆ ತಾನು ಬರೆದಿದ್ದ ಕಾಗದವು ಹಿಂದಿರುಗಿ ಬಂದುದರಿಂದುಂಟಾದ ವ್ಯಥೆಯೂ ಸೇರಿದ್ದಿತು. ಆದುದರಿಂದ ಆಹಾರವು ಆದಿನ ಅವನಿಗೆ ರುಚಿಸಲಿಲ್ಲ. ೧೧ ಗಂಟೆಗೆ ಸರಿಯಾಗಿ ರೇಲ್ ಗಾಡಿಯು ಸಿದ್ಧವಾಯಿತು. ಮೊದಲನೆಯ ತರಗತಿಯ ಗಾಡಿಯಲ್ಲಿ ಸಾಮಾನುಗಳು ಇಡಲ್ಪಟ್ಟುವು. ನಮ್ಮ ಯುವಕನು ಗಾಡಿಯಲ್ಲಿ ಕುಳಿತುಕೊಂಡು, ಸೇವಕನಿಗೆ ಮನೆಯನ್ನು ಎಚ್ಚರವಾಗಿ ನೋಡಿಕೊಂಡಿರಬೇಕೆಂದೂ ತಾನು ಬೇಗನೆ ಹಿಂದಿರುಗುವುದಾಗಿಯೂ ತಿಳಿಸಿದನು. ಗಾಡಿಯು ಮುಂದಕ್ಕೆ ಹೊರಟಿತು. ಯುವಕನು ವೃತ್ತಾಂತಪತ್ರಿಕೆಯನ್ನು ಪುನಹಾ ಕೈಗೆ ತೆಗೆದುಕೊಂಡು ಮೊದಲಿನಿಂದಲೂ ಕ್ರಮವಾಗಿ ಓದತೊಡಗಿದನು. ಓದುತ ಓದುತ ಒಂದು ಕಡೆ "ಒಂದು ವಿಚಿತ್ರವಾದ ಸಿವಿಲ್ ಮೊಕದ್ದಮೆ" ಎಂಬ ಅಭಿಧಾನವುಳ್ಳ ಒಂದು ಲೇಖನವನ್ನು ನೋಡಿದನು. ಅದನ್ನೋದುತ್ತಲೆ ಅವನ ಮುಖವೆಲ್ಲವೂ ಬೆಳ್ಳಗಾಗಿ ಹೋಗಿ ಕೂತಿದ್ದವನು ಹಾಗೆಯೆ ಮಲಗಿಕೊಂಡನು. ಮನಸ್ಸಿನ ಯಾತನೆಯು ಬಹಳವಾಗಿದ್ದಿತು. ಆ ಗಾಡಿಯಲ್ಲಿ ಅವನೊಬ್ಬನೆ ಪ್ರಯಾಣ ಮಾಡುತ್ತಿದ್ದುದರಿಂದ ಅಶ್ರುಧಾರೆಗಳು ನಿರ್ಭಯವಾಗಿ ಕಪೋಲಗಳನ್ನು ತೊಯಿಸುತ್ತಿದ್ದುವು. ಬಹಳ ಶ್ರಮದಿಂದ ಆ ಹಗಲನ್ನೂ ರಾತ್ರಿಯನ್ನೂ ಕಳೆದು ಮಾರಣೆಯದಿನ ಪುನಹೆ ಪಟ್ಟಣವನ್ನು ಸೇರಿದನು.

——o——

## — ಹದಿನಾಲ್ಕನೆಯ ಅಧ್ಯಾಯ. —

ಹಿಂದಿನ ಅಧ್ಯಾಯದಲ್ಲಿ ವರ್ಣಿತನಾಗಿರುವ ಯುವಕನು ನಮ್ಮ ಕಥಾನಾಯಕನಾದ ಮಾಧವನಲ್ಲದೆ ಬೇರೆಯಲ್ಲವೆಂಬುದನ್ನು ನಮ್ಮ ವಾಚಕಮಹಾಶಯರಿಗೆ ತಿಳಿಯಹೇಳಬೇಕಾದುದಿಲ್ಲ.

ಆದರೆ ತಂದೆಯ ಮನೆಯನ್ನು ಬಿಟ್ಟು ಏಕಾಂಗಿಯಾಗಿ ಹೊರಟು ಬಂದವನಿಗೆ ಹೈದರಾಬಾದಿನಲ್ಲಿ ಅಷ್ಟು ಶೀಘ್ರವಾಗಿ ಸುಖಸಂಪದಗಳು ಹೇಗೆ ದೊರೆತುವೆಂಬುದನ್ನು ಮಾತ್ರ ನಾವು ಇಲ್ಲಿ ತಿಳಿಸುವುದು ಅವಶ್ಯವಾಗಿರುವುದು.

ಆದಿನ ರಾತ್ರಿ ತಂದೆಯ ಕ್ರೂರವಾದ ಆಜ್ಞೆಯನ್ನು ಕೇಳಿ ಮಾಧವನಿಗೆ ಬಹಳ ಸಂಕಟವುಂಟಾಯಿತು. ತಮ್ಮ ವಂಶಕ್ಕೂ ವಿಶ್ವನಾಥನ ವಂಶಕ್ಕೂ ಪಾರಂಪರ್ಯವಾಗಿ ದ್ವೇಷಬಂದಿರುವುದು ಇವನಿಗೆ ತಿಳಿದಿದ್ದರೆ ಎಂದಿಗೂ ಸುಭದ್ರೆಯನ್ನು ವರಿಸುವುದಾಗಿ ಪ್ರತಿಜ್ಞೆ ಮಾಡುತ್ತಿರಲಿಲ್ಲ. ಈಗ ತಂದೆಯ ಅಭಿಪ್ರಾಯದಂತೆ ತನಗೆ ಒಂದು ಕ್ಷಣವೂ ಆ ಮನೆಯಲ್ಲಿ ನಿಲ್ಲಲು ಬಾಧ್ಯತೆಯಿಲ್ಲವೆಂಬುದು ವ್ಯಕ್ತವಾಯಿತು. ಮುಂದೆ ಮಾಡುವುದೇನು ? ತಂದೆಯ ಮಾತಿನಂತೆ ನಡೆದು ಪ್ರತಿಜ್ಞಾಭಂಗಮಾಡಿಕೊಳ್ಳುವುದೆ ? ಅಥವಾ ಪ್ರಾಯಶ್ಚಿತ್ತರೂಪವಾಗಿ ಮನೆಯನ್ನು ಬಿಟ್ಟು ಹೋಗುವುದೆ? ಅಥವಾ ಪ್ರಾಣತ್ಯಾಗ ಮಾಡಿಕೊಂಡು ಸಮಸ್ತ ಬಾಧೆಗಳನ್ನೂ ಪರಿಹರಿಸಿಕೊಳ್ಳುವುದೆ ? ಮೂರನೆಯ ಮಾರ್ಗವು ಪುರುಷನಿಗೆ ತಕ್ಕದಲ್ಲ. ಮೊದಲನೆಯ ಮಾರ್ಗವನ್ನನುಸರಿಸುವುದರಿಂದ ತಂದೆಯ ಪ್ರೀತಿಯು ಇದ್ದಂತೆಯೇ ಇರುವುದು. ಆದರೆ ಅದರಿಂದ ತಾನು ಮಿಥ್ಯಾವಾದಿಯಾಗುವನಲ್ಲದೆ ಒಬ್ಬ ಬ್ರಾಹ್ಮಣ ಕನ್ಯೆಯನ್ನು ದುರ್ಮರಣಕ್ಕೆ ಗುರಿಮಾಡುವ ಸಂಭವವೂ ಉಂಟು. "ಛಿ! ಛಿ! ಆತ್ಮಸುಖಕ್ಕೋಸ್ಕರಪ್ರತಿಜ್ಞಾಭಂಗಮಾಡಿಕೊಳ್ಳುವುದೆ? ತಪ್ಪು ತಪ್ಪು. ಈ ಕೂಡಲೆ ಈ ಮನೆಯನ್ನು ಬಿಟ್ಟು ಹೋಗುವೆನು, ಭಗವಂತನು ತೋರಿಸಿದಂತಾಗಲಿ." ಎಂದು ಯೋಚಿಸಿಕೊಂಡು ತಂದೆಗೆ ಕಾಗದವನ್ನು ಬರೆಯಲು ಕುಳಿತನು. ಬಾಗಿಲು ಕಿರ್ರೆಂದ ಶಬ್ದವಾಯಿತು. ತಿರುಗಿ ನೋಡಲಾಗಿ ಗಂಗಾಬಾಯಿಯು ಮೆತ್ತಗೆ ಒಳಗೆ ಬಂದು ಮಾಧವನನ್ನು "ಏನುಮಾಡುವೆ"

ಎಂದು ಕೇಳಿದಳು. ಮಾಧವನು ಅವಳನ್ನು ಕುರಿತು, "ಎಲ್ಲಾ ಸಂಗತಿಯೂ ನಿನಗೆ ತಿಳಿಯುವುದೆ?" ಎಂದು ಕೇಳಿದನು.

ಗಂ—ತಿಳಿಯುವುದು. ನಾನು ನಿಮ್ಮ ತಂದೆಯ ಬಾಯಿಂದಲೆ ಎಲ್ಲವನ್ನೂ ಕೇಳಿದೆ. ನಿನ್ನಂತಹ ವಿಧೇಯನಾದ ಮಗನೆ ಇಲ್ಲವೆಂದು ಅವರು ಶ್ಲಾಘನೆ ಮಾಡಿದರು.

ಮಾ—ಆಮೇಲೆ ?

ಗಂ—ಆದರೆ ನನಗೆ ಮಾತ್ರ ಏನೋ ಒಂದು ವಿಧವಾದ ಆತಂಕವು ಹುಟ್ಟಿದುದರಿಂದ ರಾತ್ರಿ ಸ್ವಲ್ಪವೂ ನಿದ್ದೆ ಹತ್ತದೆ ಈಗ ನಿನ್ನನ್ನು ನೋಡಲು ಬಂದೆ.

ಮಾ—ನಿನ್ನ ಆಜ್ಞೆ ಏನು ?

ಗಂ—ನಿನ್ನ ಅಭಿಪ್ರಾಯವೇನು ?

ಮಾ—ಇದೊ,ತಂದೆಯವರಿಗೆ ಕಾಗದವನ್ನು ಬರೆದಿಟ್ಟು ನಾನು ದೇಶಾಂತರ ಹೊರಟು ಹೋಗುತ್ತೇನೆ.

ಗಂ—ಹೊರಟು ಹೋಗಿ ?

ಮಾ—ಸ್ವತಂತ್ರವಾಗಿ ಸಂಪಾದಿಸಲು ಶಕ್ತಿಯುಂಟಾದೊಡನೆಯೆ ಸುಭದ್ರೆಯನ್ನು ಕರೆಸಿಕೊಂಡು ಮದುವೆಮಾಡಿಕೊಳ್ಳುತ್ತೇನೆ.

ಗಂ—ನೀನು ಕರೆಸಿಕೊಳ್ಳುವವರೆಗೂ ಸುಭದ್ರೆಯು ನಿನ್ನವಳೇ ಆಗಿರುವಳೆಂಬ ನಂಬಿಕೆಯೇನು ?

ಮಾ—ಅವಳ ತಂದೆಯೇನಾದರೂ ಬೇರೆಕಡೆ ವಿವಾಹಮಾಡಿಯಾರೆಂಬ ಭೀತಿತಾನೆ? ಅವರಿಗೂ ಒಂದು ಕಾಗದವನ್ನು ಬರೆದರಾಯಿತು.

ಗಂ—ಹಾಗಾಗುವುದಿಲ್ಲ. ಅವನು ನಿನ್ನ ಬರಿಯ ಕಾಗದದ ಮೇಲೆ ನಂಬಿಕೆಯಿಟ್ಟು ತನ್ನ ಪ್ರಯತ್ನವನ್ನು

ಬಿಡಲಾರನು. ನೀನು ಇಲ್ಲಿಂದ ಹೊರಟು ನೆಟ್ಟಗೆ ರಾಂಪುರಕ್ಕೆ ಹೋಗಿ ವಿಶ್ವನಾಥನನ್ನು ಕಂಡು ಕನ್ಯಾರ್ಥಿಯಾಗಿ ಬಂದಿರುವುದಾಗಿ ಹೇಳಿಕೊ. ಅವನು ನಿನ್ನನ್ನು ನೋಡಿದ ಕೂಡಲೆ ಸಂತೋಷದಿಂದ ಸುಭದ್ರೆ ಯನ್ನು ಮದುವೆ ಮಾಡಿಕೊಡುವನು. ಅಥವಾ ಅವ ನೇನಾದರೂ ಅನುಮಾನಪಟ್ಟರೆ ಇಗೋ ಈ ಕಾಗದ ವನ್ನು ಅವನಿಗೆ ಕೊಡು. ಅನಂತರ ಕೆಲವು ದಿನ ದೇಶ ಸಂಚಾರಮಾಡುತ್ತಿರು. ಅಷ್ಟರೊಳಗೆ ನಿಮ್ಮ ತಂದೆ ಯವರು ಸುಭದ್ರೆಯಮೇಲಿನ ದ್ವೇಷವನ್ನು ಬಿಟ್ಟು ಬಿಟ್ಟರೆ ಹಿಂದಿರುಗಿ ಬಂದು ಅವರ ಸೇವೆಯನ್ನು ಮಾಡ ಬಹುದು.

ಮಾಧವನು ಚಿಕ್ಕಮ್ಮನಿಗೆ ನಮಸ್ಕರಿಸಿ ಆಕೆಯನ್ನು ಕಳುಹಿಸಿ ಕೊಟ್ಟು ತಂದೆಗೆ ಕಾಗದವನ್ನು ಬರೆದಿಟ್ಟನು. ಅನಂತರ ತನ್ನ ಪ್ರೇಮ ಪಾತ್ರವಾದ "ಶ್ವೇತ" ನೆಂಬ ಕುದುರೆಯನ್ನೇರಿ ಮಧ್ಯ ರಾತ್ರಿಯಲ್ಲಿಯೆ ಪುನಹೆಯನ್ನು ಬಿಟ್ಟು ಹೊರಟನು. ಬೆಳಗಾಗುವುದರೊಳಗಾಗಿ ರಾಂ ಪುರಕ್ಕೆ ಅರ್ಧ ದಾರಿಯು ಸಾಗಿತು. ಮಾರ್ಗಕ್ಕೆ ಸ್ವಲ್ಪದೂರದಲ್ಲಿದ್ದ ಒಂದು ಅಗ್ರಹಾರದಲ್ಲಿ ಆ ದಿನ ಮಧ್ಯಾಹ್ನ ಭೋಜನಮಾಡಿಕೊಂಡು ಸ್ವಲ್ಪ ಹೊತ್ತುವಿಶ್ರಾಂತಿಯನ್ನು ಹೊಂದಿ ಸಾಯಂಕಾಲಕ್ಕೆ ಸರಿಯಾಗಿ ರಾಂಪುರವನ್ನು ಸೇರಿದನು. ಗಂಗಾಬಾಯಿಯ ಸೇವಕಳಾದ ಕಾಳಿ ಯೆಂಬವಳ ಮನೆಯಲ್ಲಿ ಕುದುರೆಯನ್ನು ಕಟ್ಟಿ ಹಾಕಿ, ತಾನು ಮಾತ್ರ ವಿಶ್ವನಾಥನ ಮನೆಗೆ ಸುಮಾರು ೮ ಗಂಟೆಯ ಸಮಯದಲ್ಲಿ ಬಂದನು. ಅಲ್ಲಿಂದಾಚೆಗೆ ನಡೆದುದು ತಿಳಿದೇ ಇದೆ ಮಾಧವನೆ ಲಕ್ಷ್ಮೀಪತಿ ಯೆಂಬ ಹೆಸರಿನಿಂದ ಸುಭದ್ರೆಯನ್ನು ವಿವಾಹಮಾಡಿಕೊಂಡವನು. ಪಂಡರಪುರದಿಂದ ಅತ್ತೆಮಾವಂದಿರ ಅನುಜ್ಞೆಯನ್ನು ಪಡೆದು

ಮಾಧವರಾಯನು ಹಿಂದಿರುಗಿ ರಾಂಪುರಕ್ಕೆ ಬಂದು ಕಾಳಿಗೆ ಕುದುರೆಯನ್ನು ಕಾಪಾಡಿಕೊಂಡಿದ್ದುದಕ್ಕಾಗಿ ಐದುರೂಪಾಯಿಗಳನ್ನು ಬಹುಮಾನವಾಗಿ ಕೊಟ್ಟು ಅಲ್ಲಿಂದ ಆದಿನ ರಾತ್ರಿಯೆ ಮುಂದಕ್ಕೆ ತೆರಳಿದನು. ಅವನಿಗೆ ಇಂತಹ ಕಡೆಯೇ ಹೋಗಬೇಕೆಂಬ ಉದ್ದೇಶವಾವುದೂ ಇರಲಿಲ್ಲ. ಆದುದರಿಂದ ಕುದುರೆಯನ್ನು ಅದರ ಮನಸ್ಸು ಬಂದಕಡೆ ಹೋಗುವುದಕ್ಕೆ ಬಿಟ್ಟನು. ಅದು ಬಂದಾನೊಂದು ಘಾಟಾಮಾರ್ಗವನ್ನನುಸರಿಸಿ ನಡೆಯಿತು. ಬೆಳಗಾದಮೇಲೆ ದಾರಿಯಲ್ಲಿ ಹೋಗುವವರನ್ನು ವಿಚಾರಿಸಿದುದರಲ್ಲಿ ಅದು ಹೈದರಾಬಾದಿಗೆ ಹೋಗುವ ಮಾರ್ಗವೆಂದೂ, ಆರಾಜ್ಯದ ಎಲ್ಲೆಯನ್ನು ಅವನು ಸಮೀಪಿಸಿರುವುದಾಗಿಯೂ ತಿಳಿಯಬಂದಿತು. ಮಾಧವನು, ನೀರು ಸಿಕ್ಕಿದಸ್ಥಳದಲ್ಲಿ ಸ್ನಾನ ಸಂಧ್ಯಾವಂದನೆಗಳನ್ನು ಮಾಡಿಕೊಂಡು ಕುದುರೆಗೆ ಸ್ವಲ್ಪ ವಿಶ್ರಾಂತಿ ಕೊಟ್ಟು ಮುಂದೆ ಹೊರಡುವುದಾಗಿ ಯೋಚಿಸಿ ಬಿಸಿಲು ಇನ್ನೂ ಕ್ರೂರವಾಗಿಲ್ಲದುದರಿಂದ ಸ್ವಲ್ಪ ಚುರುಕಾಗಿ ಕುದುರೆಯನ್ನು ನಡೆಯಿಸಿದನು. ಸ್ವಲ್ಪ ಹೊತ್ತಿನಲ್ಲಿಯೆ ಭೀಮಾನದಿಯ ಬಂದು ಸಣ್ಣ ಶಾಖೆಯ ಬಳಿಗೆ ಬಂದನು. ಅಲ್ಲಿ ಸ್ನಾನಕ್ಕೆ ಪ್ರಶಸ್ತವಾಗಿದ್ದುದರಿಂದ ಸೇತುವೆಯ ಮೇಲೆ ನದಿಯ ಆಚೆಯದಡಕ್ಕೆ ಹೋಗಿ, ಕುದುರೆಗೆ ನೀರು ಕುಡಿಸಿ ಅದನ್ನು ಹತ್ತಿರವಿದ್ದ ತೋಪಿನಲ್ಲಿ ಮೇಯುವುದಕ್ಕೆ ಬಿಟ್ಟನು. ಅಲ್ಲಿಂದ ನದಿಯ ಒಳಿಗೆ ಹೋಗಲು ಹಿಂದಿರುಗುವಾಗ್ಗೆ ರಸ್ತೆಯಿಂದ ಹೆಂಗಸರು ಮಕ್ಕಳು ಕೂಗಿಕೊಳ್ಳುವ ಶಬ್ದವೂ ಕುದುರೆಯ ಗಾಡಿಯೊಂದು ಬಹು ರಭಸದಿಂದ ಬರುವ ಶಬ್ದವೂ ಕೇಳಿಬಂದಿತು. ಮಾಧವನು ಅಂಜಿನವೇಗದಿಂದ ರಸ್ತೆಗೆ ಓಡಿದನು. ಎದುರಿಗೆ ಮಹಾವೇಗದಿಂದ ಸಾರಥಿಯಿಲ್ಲದ ಗಾಡಿಯನ್ನು ಬಹಳವಾಗಿ ಬೆದರಿ ಕಂಗೆಟ್ಟ ಕುದುರೆಯು ಎಳೆದುಕೊಂಡು ಬರುತ್ತಿದೆ. ಹಿಂದುಗಡೆ ಸೇತುವೆಯಿದೆ. ಸ್ವಲ್ಪ ಸಾವಕಾಶವಾದರೂ ಗಾಡಿ, ಕುದುರೆ, ಗಾಡಿಯೊಳಗಿದ್ದ ಜನಗಳು, ಎಲ್ಲರೂ ಬಂದೇ

ಅನಂತರ ನದಿಯೊಳಕ್ಕೆ ಉರುಳಿಹೋಗುವ ಸಂಭವವುಂಟು. ಮಾಧ ವನು ತನ್ನ ಜೀವದ ಆಶೆಯನ್ನೂ ಮರೆತನು. ಧೈರ್ಯವಾಗಿ ರಸ್ತೆಯ ನಡುವೆ ನಿಂತು ರಭಸದಿಂದ ಓರುತ್ತಿರುವ ಕುದುರೆಯ ಕಡಿವಾಣವನ್ನು ಹಿಡಿದು ತನ್ನ ಶಕ್ತಿಯನ್ನೆಲ್ಲಾ ಪ್ರಯೋಗಿಸಿ ನಿಲ್ಲಿಸಿದನು. ಅನಂತರ ಆ ಗಾಡಿಯೊಳಗಿದ್ದವರನ್ನೆಲ್ಲಾ ಒಬ್ಬೊಬ್ಬರನ್ನಾಗಿ ಕೆಳಗೆ ಇಳಿಸಿ ಬಂದು ಮರದ ನೆರಳಿನಲ್ಲಿ ಮಲಗಿಸಿದನು. ಅದರಲ್ಲಿ ಒಬ್ಬ ವೃದ್ಧ ಮುಸಲ್ಮಾನನು, ಒಬ್ಬ ಹೆಂಗಸು, ಇಬ್ಬರು ಮಕ್ಕಳೂ ಇದ್ದರು. ಯಾರಿಗೂ ಮೈಮೇಲೆ ಪ್ರಜ್ಞೆಯಿರಲಿಲ್ಲ. ಮಾಧವನು ನದಿಗೆ ಹೋಗಿ ತನ್ನ ಹೊದಿಯುವ ಕಂಬಳಿಯನ್ನು ನೆನಸಿಕೊಂಡು ಬಂದು ಎಲ್ಲರ ತಲೆಯ ಮೇಲೂ ಹಾಕಿ ದನು. ಅವರೆಲ್ಲರೂ ಚೇತರಿಸಿಕೊಳ್ಳುವ ಸ್ಥಿತಿಯು ಕಂಡುಬಂದೊಡ ನೆಯೆ ಮುಸಲ್ಮಾನರ ಹೆಂಗಸಿನ "ಘೋಷಾ"ಕ್ಕೆ ಭಂಗ ಬರಬಾರದೆಂ ದುಕೊಂಡು ತಾನು ಮರೆಯಾಗಿ ನಿಂತನು. ಮೊದಲು ಮಕ್ಕಳಿಬ್ಬರೂ ಎಚ್ಚೆತ್ತರು. ಅನಂತರ ಹೆಂಗಸು, ಆಮೇಲೆ ವೃದ್ಧನೂ ಎದ್ದು ಕುಳಿ ತರು. ಆ ವೃದ್ಧನಿಗೆ "ಪರಲೋಕದಲ್ಲಿರುವೆನೊ ಈ ಭೂಮಿಯ ಮೇ ಲೆಯೇ ಇರುವೆನೊ" ಎಂಬ ಭ್ರಾಂತಿಯುಂಟಾಯಿತು. ಹಾಗೆಯೆ ಸುತ್ತಲೂ ನೋಡಿದುದರಲ್ಲಿ ಭೂಲೋಕದ ಗಿಡಮರಗಳೂ ಕಲ್ಲುಗು ಡ್ಡಗಳೂ ಕಂಡುಬಂದುವು. ಹತ್ತಿರದಲ್ಲಿ ನದಿಯ ಘರ್ಜನೆಯೂ, ಪಕ್ಷಿ ಗಳ ಕಲಕಲಧ್ವನಿಯೂ ಕೇಳಿಬಂದುವು. ಎದುರಿಗೆ ತನ್ನ ಜತೆಯಲ್ಲಿದ್ದ ಹೆಂಗಸುಮಕ್ಕಳು ಸೌಖ್ಯವಾಗಿ ಕುಳಿತುಕೊಂಡಿರುವುದನ್ನು ನೋಡಿ ಮನಸ್ಸಿಗೆ ಧೈರ್ಯವಾಯಿತು. "ಯಾ! ಅಲ್ಲಾ! ಏನು ಪುಣ್ಯಮಾಡಿ ದ್ದೆವೊ! ಈದಿನ ನಮ್ಮ ಪ್ರಾಣವುಳಿಯಿತು" ಎಂದು ಆನಂದಬಾಷ್ಪ ಗಳನ್ನು ಸುರಿಸಿದನು. ರಸ್ತೆಯಲ್ಲಿ ಗಾಡಿಯು ಬಿಟ್ಟಿರುವುದನ್ನೂ ಕುದು ರೆಯು ಮರಕ್ಕೆ ಕಟ್ಟಿಹಾಕಲ್ಪಟ್ಟಿರುವುದನ್ನೂ ನೋಡಿ, ಯಾವನೋ ಧೈರ್ಯಶಾಲಿಯು ಗಾಡಿಯನ್ನು ಹಿಡಿದೇ ನಿಲ್ಲಿಸಿರಬೇಕೆಂದು ತಿಳಿದು

ಕೊಂಡು, "ನಮ್ಮ ಪ್ರಾಣಗಳನ್ನು ಳಿಸಿದ ಮಹಾತ್ಮನು ನಮಗೆ ದರ್ಶನ ಕೊಡಬಾರದೆ'' ಎಂದು ಗಟ್ಟಿಯಾಗಿ ಕೂಗಿದನು ಉತ್ತರ ಬರಲಿಲ್ಲ. "ಇದೇನಾಶ್ಚರ್ಯ, ದೇವರೇ ಬಂದು ನಮ್ಮನ್ನು ಕಾಪಾಡಿದನೊ ? ಇಗೋ ಇಲ್ಲಿ ಪಂಜೆಯು ಬಿದ್ದಿದೆ. ಯಾರೋ ಹಿಂದೂ ಮಹಾನು ಭಾವನು ನಮ್ಮ ಪ್ರಾಣಗಳನ್ನು ಳಿಸಿರಬೇಕು' ಎಂದೆಂದುಕೊಂಡು ಅಲ್ಲಿಂದ ಎದ್ದು ಸ್ವಲ್ಪ ಮುಂದಕ್ಕೆ ಹೋಗುತ್ತಲೆ, ಮಾಧವನು ಕಂಡು ಬಂದನು. "ಏನು, ಮಹಾರಾಜ್ ! ಇಷ್ಟುಮಟ್ಟಿಗೆ ನಮ್ಮಲ್ಲಿ ದಯೆ ಯನ್ನು ತೋರಿಸಿಯೂ ನಿರ್ದಯರಾಗಬಹುದೆ ? ನಿನ್ನ ದರ್ಶನವ ನ್ನೇಕೆ ಕೊಡಲಿಲ್ಲ?'' ಎಂದು ವೃದ್ಧನು ಕೇಳಿದುದಕ್ಕೆ "ಫೋಪಾ'' ಹೆಂಗಸಿಗೋಸ್ಕರ ತಾನು ಮರೆಯಲ್ಲಿ ನಿಂತಿದ್ದುದಾಗಿಯೂ ತಾನು ಕರ್ತವ್ಯವನ್ನು ಮಾಡಿದನೆ ಹೊರತು ಬೇರೆ ಯಾವ ಮಹತ್ಕಾರ್ಯ ವನ್ನೂ ಮಾಡಿದಂತೆ ಎಣಿಸಕೂಡದೆಂದೂ ಮಾಧವನು ಉತ್ತರವನ್ನು ಹೇಳಿದನು. ಆ ವೃದ್ಧನಿಗೆ ಮಾಧವನ ಮಾತನ್ನು ಕೇಳಿದೊಡನೆಯೆ ಅಪರಿಮಿತವಾದ ವಿಶ್ವಾಸವು ಹುಟ್ಟಿ, "ಮಹಾನುಭಾವ, ನೀನೇ ನನ್ನ ಭಾಗಕ್ಕೆ ತಂದೆ, ತಾಯಿ, ಸಮಸ್ತ ಬಂಧುಬಳಗವು. ಒಂದಲ್ಲದೆ ನಾಲ್ಕು ಪ್ರಾಣಿಗಳನ್ನು ಸಂರಕ್ಷಣೆಮಾಡಿರುವೆ. ಆದುದರಿಂದ ನಾವು ನಮ್ಮ ಜೀವಾವಧಿ ನಿನ್ನ ಸೇವೆಯನ್ನು ಮಾಡಲು ಅನುಜ್ಞೆಯನ್ನು ಕೊಡು. ನನ್ನ ಸಮಸ್ತವಾದ ಐಶ್ವರ್ಯವೂ ನಿನ್ನದೇ. ನಮ್ಮ ಸಂಗಡ ಬಂದು ನಮ್ಮ ಕೃತಜ್ಞತೆಯನ್ನು ಪ್ರಕಾಶಮಾಡಿಕೊಳ್ಳಲು ಅವಕಾಶವನ್ನು ಕೊಡು'' ಎಂದನು. ಮಾಧವನಿಗೆ ಆತನ ಕೋರಿಕೆಯು ಮೀರಲಾರ ದಂತಹುದಾಗಿ ತೋರಿದುದರಿಂದ ಅವನ ಜತೆಯಲ್ಲಿ ಹೋಗಲು ಇಷ್ಟ ಪಟ್ಟನು. ಆ ವೃದ್ಧನು ನೈಜಾಮನ ಮುಖ್ಯಮಂತ್ರಿಗಳಲ್ಲೊಬ್ಬನಾ ಗಿದ್ದು ಕೆಲಸದಿಂದ ವಿಶ್ರಾಂತನಾದ ನವಾಜ್ ವಿಕಾರ್-ಉಲ್-ಮು ಲ್ಕನೆಂದೂ, ಆತನ ಜಹಗೀರಿಯು ಅಲ್ಲಿಗೆ ಎಮ್ಮೈಲಿಗಳ ದೂರದಲ್ಲಿರು

ವ್ರದಾಗಿಯೂ ತಿಳಿಯಬಂದಿತು. ಸ್ವಲ್ಪ ಹೊತ್ತಿನಲ್ಲಿ ನವಾಬನ ಕಡೆಯ ಅನುಚರರು ಪಲ್ಲಕ್ಕಿಗಳನ್ನೂ ಮೇನಾಗಳನ್ನೂ ಹೊರಸಿಕೊಂಡು ಅದೇ ಮಾರ್ಗದಲ್ಲಿ ಬರುತ್ತಾ ತೋಪಿನಲ್ಲಿ ಇವರು ಸ್ವಲ್ಪ ಮಾತ್ರವೂ ಗಾಯವಿಲ್ಲದೆ ಸುರಕ್ಷಿತರಾಗಿರುವುದನ್ನು ಕಂಡು ಪರಮಾನಂದಭರಿತರಾದರು. ಒಂದೆರಡು ಗಂಟೆಯೊಳಗೆ ನವಾಬನೂ ಅವನ ಹೆಂಡತಿ ಮಕ್ಕಳೂ ಮಾಧವನೂ ಜಹಗೀರಿಯ ಮುಖ್ಯಗ್ರಾಮವನ್ನು ಸೇರಿದರು. ಅಲ್ಲಿ ಒಂದು ವಾರವಿದ್ದು ಅನಂತರ ಎಲ್ಲರೂ ಹೈದರಾಬಾದಿಗೆ ಪ್ರಯಾಣಮಾಡಿದರು. ಅಲ್ಲಿ ನವಾಬನು ಮಾಧವನಿಗೆ ಸಕಲವಿಧವಾದ ಸೌಕರ್ಯವನ್ನೂ ಕಲ್ಪಿಸಿಕೊಟ್ಟು ಅವನ ಸೌಖ್ಯಕ್ಕೆ ಸ್ವಲ್ಪವೂ ಕುಂದಕಬಾರದಂತೆ ತಾನೆ ಸ್ವಂತವಾಗಿ ನೋಡಿಕೊಳ್ಳುತ್ತಿದ್ದನು. ಮಾಧವನು ತಾನು ಯಾವ ಉದ್ಯೋಗವೂ ಇಲ್ಲದೆ ಸುಮ್ಮನೆ ಉಂಡಾಡಿಭಟ್ಟನಂತಿರುವುದು ಸರಿಯಲ್ಲವೆಂದು ಸೂಚಿಸಿದುದರ ಮೇಲೆ ನವಾಬನು ತನ್ನ ಸಮಸ್ತವಾದ ಆಡಳಿತವನ್ನೂ ಅವನೇ ನೋಡಿಕೊಳ್ಳುವಂತೆ ಮೊಖ್ತೇಸರನನ್ನಾಗಿ ನೇಮಿಸಿದನು. ಹೀಗೆ ಒಂದೆರಡು ತಿಂಗಳು ಕಳೆಯಿತು. ಮಾಧವನ ಮೇಲೆ ನವಾಬನ ಪ್ರೀತಿಯು ದಿನೆದಿನೆ ಹೆಚ್ಚುತ್ತಲಿದ್ದಿತೆ ಹೊರತು ಕಡಿಮೆಯಾಗಲಿಲ್ಲ. ಮಾಧವನ ನಮ್ರತೆ, ಪ್ರಾಮಾಣಿಕತೆ, ಔದಾರ್ಯ, ಮುಂತಾದ ಗುಣಗಳು ಅನ್ಯಾದೃಶವಾದುವಾಗಿದ್ದುದರಿಂದ ಎಲ್ಲರೂ ಅವನನ್ನು ಪ್ರೀತಿಸುತ್ತಿದ್ದರು.

ಆ ದಿನ ವರ್ತಮಾನ ಪತ್ರಿಕೆಯಿಂದ ತಂದೆಯ ಕಾಯಿಲೆಯ ಸುದ್ದಿಯು ತಿಳಿಯಬರುತ್ತಲೆ ಮಾಧವನು ನವಾಬನಲ್ಲಿಗೆ ಹೋಗಿ ಆ ಪತ್ರಿಕೆಯನ್ನು ತೋರಿಸಿ ಪುನಹ ಹೊಗೆಹೋಗಲು ಅಪ್ಪಣೆಯನ್ನು ಕೇಳಿದನು. ಅದುವರೆಗೆ ನವಾಬನಿಗೆ ಮಾಧವನ ಪೂರ್ವೋತ್ತರವೃತ್ತಿ ತಿಳಿದಿರಲಿಲ್ಲ ಈಗ ಅವನು ಸಾಮಾನ್ಯ ಮನುಷ್ಯನಲ್ಲವೆಂದೂ, ತನ್ನಂತಹ ಶ್ರೀಮಂತನ ಮಗನೆಂದೂ ತಿಳಿಯಬಂದಿತು. ಅನಂತರ ಅವನಿಂದಲೇ ನಡೆದ ಸಂಗತಿಯೆಲ್ಲ

ವನ್ನೂ ವಿಚಾರಿಸಿ ಅವನು ಪ್ರತಿಜ್ಞೆಯನ್ನು ಳಿಸಿಕೊಳ್ಳಲು ಅಪರಿಮಿತವಾದ ಐಶ್ವರ್ಯವನ್ನೂ ಸಹ ಬಿಟ್ಟು ಒಂದುದಕ್ಕೆ ಬಹಳ ಆಶ್ಚರ್ಯಪಟ್ಟು ಅವನನ್ನು ಶ್ಲಾಘಿಸಿದನು. ತಾನು ಸರ್ವದಾ ಮಾಧವನ ಕ್ಷೇಮಚಿಂತಕನಾಗಿರುವುದಾಗಿಯೂ, ಯಾವುದಾದರೂ ಸಮಯವು ಒದಗಿದಾಗ ತನಗೆ ಕೃತಜ್ಞತೆಯನ್ನು ಪ್ರಕಾಶಪಡಿಸಲು ಅವಕಾಶ ಕೊಡದಿರಕೂಡದೆಂದೂ, ನವಾಬನು ಮಾಧವನಿಗೆ ತಿಳಿಸಿ ಅವನನ್ನು ಕಳುಹಿಸಿಕೊಟ್ಟನು. ಸುಭದ್ರೆಗೆ ಸಂಭವಿಸಿದ ವಿಪತ್ತು ಮಾಧವನಿಗೆ ಗೈಲಾಗಾಟಿಯಲ್ಲಿ ವೃತ್ತಾಂತಪತ್ರಿಕೆಯಿಂದ ತಿಳಿಯಬಂದಿತು. ತಾನು ವಿಶ್ವನಾಥನಿಗೆ ಬರೆದಿದ್ದ ಕಾಗದವು ಹಿಂದಿರುಗಿ ಬಂದುದಕ್ಕೆ ಅವರು ಪುತ್ರೀವಿಯೋಗವನ್ನು ತಡೆಯಲಾರದೆ ದೇಶಾಂತರ ಹೊರಟುಹೋಗಿರುವುದೆ ಕಾರಣವಿರಬಹುದೆಂದು ಊಹಿಸಿದನು. ಮಾಧವನ ಭವಿಷ್ಯವು ಕೇವಲ ಅಂಧಕಾರಮಯವಾಗಿ ತೋರಿತು.

—o—

## —ಹದಿನೈದನೆಯ ಅಧ್ಯಾಯ—

ಶಂಕರರಾಯನಿಗೆ ಪುಸಹೆಯ ಡಾಕ್ಟರುಗಳು ಮಾಡಿದ ಚಿಕಿತ್ಸೆಯಿಂದ ಸ್ವಲ್ಪವೂ ಗುಣವಾಗಲಿಲ್ಲವೆಂದು ಹಿಂದೆಯೇ ಹೇಳಿದ್ದೇವಷ್ಟೆ. ಆತನ ರೋಗದ ಸಮಾಚಾರವು ಗವರ್ನರ್ ಸಾಹೇಬನಿಗೆ ಮುಟ್ಟಿ ಆತನು ತನ್ನ ಸ್ವಂತ ವೈದ್ಯನಾದ ಕ್ಯಾಪ್ಟನ್ ಕಾಕ್ಸ್ ಎಂಬುವನನ್ನು ಕಳುಹಿಸಿಕೊಟ್ಟನು. ಕಾಕ್ಸ್ ಸಾಹೇಬನು ಶಂಕರರಾಯನ ಸ್ಥಿತಿಯನ್ನು ನೋಡಿ ಔಷಧವನ್ನು ಕೊಡುವುದರಿಂದ ಯಾವ ಉಪಯೋಗವೂ ಇಲ್ಲವೆಂದು ತಿಳಿಗು ಹಿಂದೆ ಹೇಳಿದ ರೀತಿಯಲ್ಲಿ ಎಲ್ಲಾ ವಾರ್ತಾಪತ್ರಿಕೆಗಳಲ್ಲಿಯೂ ಪ್ರಕಟಿಸಿ ಶಂಕರರಾಯನಿಗೆ ಮಗನು ಶೀಘ್ರದಲ್ಲಿಯೆ ಬರುವನೆಂಬ ಆಶೆ

ಯನ್ನು ಹುಟ್ಟಿಸಿ ಮಾಧವನ ಬರುವಿಕೆಯನ್ನೇ ನಿರೀಕ್ಷಿಸುತ್ತಿದ್ದನು. ಆವನ ಯುಕ್ತಿಯು ಕೈಗೂಡಿತು ಮಾಧವನು ಬಂದೇ ಬಂದನು.

ಮಾಧವನು ಮನೆಗೆಬಂದಾಗ್ಗೆ ಕಾಕ್ಸ್ ಸಾಹೇಬನು ಶಂಕರ ರಾಯನಕೊಠಡಿಯಲ್ಲಿ ಅವನೊಡನೆ ನಾನಾಮಾತುಗಳನ್ನಾಡುತ್ತಾ ಕುಳಿತಿದ್ದನು. "ನಿಮ್ಮ ಮಗನು ಕೂಡಲೆ ಬರುವನು. ಇವತ್ತಿನ ರೈಲಿ ನಲ್ಲಿಯೇ ಬಂದಿರಬಹುದು. ಮನಸ್ಸಿನ ಕೊರತೆಯನ್ನು ಬಿಡಿ; ಅವನನ್ನು ನೋಡಿದಕೂಡಲೆ ನಿಮ್ಮ ಕಾಯಿಲೆಯು ಗುಣವಾಗುವುದು." ಎಂದು ಹೇಳುತ್ತಿರುವಾಗಲೆ ಮಾಧವನು ಕೊಠಡಿಯೊಳಕ್ಕೆ ಬಂದನು. ಅವ ನನ್ನು ನೋಡಿದೊಡನೆಯೆ ಶಂಕರರಾಯನು ಕಣ್ಣುಗಳನ್ನು ಮುಚ್ಚಿ ಕೊಂಡು ನಿಶ್ಚೇಷ್ಟನಾಗಿ ಮಲಗಿಕೊಂಡನು. ಮಾಧವನು ಕೂಡಲೆ ಹೋಗಿ ತಂದೆಯ ಕಾಲುಗಳನ್ನು ಹಿಡಿದುಕೊಂಡನು. ಕಣ್ಣಿನಲ್ಲಿನೀರು ಸುರಿಯುತ್ತಿತ್ತು. ಡಾಕ್ಟರ ಸಾಹೇಬನು ಶಂಕರರಾಯನನಾಡಿಯನ್ನು ಹಿಡಿದು ನೋಡಿ "ಪ್ರಮಾದವೇನೂ ಇಲ್ಲ ಹೆದರಬೇಡಿ" ಎಂದು ಮಾಧವನಿಗೆ ತಿಳಿಸಿ ಶಂಕರರಾಯನ ಎದೆಯಮೇಲೂ ನೆತ್ತಿಯಮೇಲೂ ಒದ್ದೆಯಬಟ್ಟೆಯನ್ನು ಹಾಕಿದನು. ಸ್ವಲ್ಪಹೊತ್ತಿನಲ್ಲಿಯೆ ಶಂಕರರಾಯನು ಕಣ್ದೆರೆದು ಮಾಧವನನ್ನು ಚೆನ್ನಾಗಿನೋಡಿ "ನನ್ನನ್ನು ಮನ್ನಿಸಿರುವೆಯಾ" ಎಂದು ಕೇಳಿದನು. ಮಾಧವನು "ನಾನು ತಮ್ಮನ್ನು ಬಿಟ್ಟು ಹೋಗಿ ಇಷ್ಟರ ಹುಟ್ಟಿನ ಮನೋವ್ಯಥೆಗೂ ಶಾರೀರಕಜಾಡ್ಯಕ್ಕೂ ಗುರಿಮಾಡಿ ದುದಕ್ಕೆ ತಮ್ಮಲ್ಲಿ ಎಷ್ಟು ಕ್ಷಮೆಯನ್ನು ಬೇಡಿದರೂ ಸ್ವಲ್ಪವೆ ಇದೆ" ಎಂದನು. ಶಂಕರರಾಯನು, "ಖಂಡಿತವಾಗಿ ನಿನ್ನತಪ್ಪು ಎಳ್ಳಷ್ಟೂ ಇಲ್ಲ. ನೀನು ಈಶ್ವರಸಾಕ್ಷಿಯಾಗಿ ಪ್ರತಿಜ್ಞೆಮಾಡಿರುವುದು ನನಗೆ ತಿಳಿಯದೇ ಹೋದುದರಿಂದ ಇಷ್ಟು ಅನರ್ಥಕ್ಕೆ ಕಾರಣವಾಯಿತು. ನೀನು ಇಲ್ಲಿಂದ ಹೊರಟು ಹೋಗಿ ಎಷ್ಟೆಷ್ಟು ಕಷ್ಟಗಳನ್ನನುಭವಿಸಿ ದೆಯೊ" ಎಂದು ನಿಟ್ಟುಸಿರುಬಿಟ್ಟನು. ಮಾಧವನು ತಂದೆಯ ಪಾದಾ

ರವಿಂದದಪ್ರಭಾವದಿಂದ ತನಗೆಯಾವತೊಂದರೆಯೂ ಆಗಲಿಲ್ಲವೆಂದೂ, ಹೈದರಾಬಾದಿನಲ್ಲಿ ಒಬ್ಬ ಶ್ರೀಮಂತನ ಸಹಾಯವು ದೊರೆತಿರುವು ದೆಂದೂ ತಾನು ಹೊರಟಮೊದಲುನಡೆದಸಂಗತಿಯನ್ನೆಲ್ಲಾ ವಿಶದವಾಗಿ ತಿಳಿಸಿದನು. ಶಂಕರರಾಯನು "ಮಗು, ನೀನೂ ನಿನ್ನ ಹೆಂಡತಿಯೂ ಸುಖವಾಗಿರುವುದನ್ನು ನೋಡಬೇಕೆಂದು ಬಹುಕುತೂಹಲವಿದೆ. ಈ ಕ್ಷಣವೆ ಅವಳನ್ನು ಬರಮಾಡು" ಎಂದು ಹೇಳಿದುದಕ್ಕೆ ಮಾಧವನು "ನಮ್ಮ ಮಾವನವರು ಊರು ಬಿಟ್ಟು ಎಲ್ಲಿಯೋ ಹೋಗಿದ್ದಾರೆಂದು ವರ್ತಮಾನ. ಅವರು ಊರಿಗೆ ಬಂದಮೇಲೆ ಆಗಬಹುದು. ಈಗ ತಾವು ಸ್ವಸ್ಥಚಿತ್ತರಾಗಿ ಶರೀರಕ್ಕೆ ಆರೋಗ್ಯವನ್ನುಂಟುಮಾಡಿಕೊಳ್ಳ ಬೇಕೆಂದು ನನ್ನ ಪ್ರಾರ್ಥನೆ"ಎಂದನು.ಅಷ್ಟುಹೊತ್ತಿಗೆ ಗಂಗಾಬಾಯಿ ಯೂ ಅಲ್ಲಿಗೆ ಬಂದಳು. ಮಾಧವನು ಎದ್ದು ಆಕೆಗೆ ನಮಸ್ಕರಿಸಿದನು. ಅವಳು ಶಂಕರರಾಯನನ್ನು ಕುರಿತು "ಭಾವ! ಇನ್ನು ನಿಮ್ಮ ಕಾಯಿಲೆ ಹೋಯಿತು. ನಿಮ್ಮ ಮಗನು ಅನ್ನವಿಲ್ಲದೆ ಎಲ್ಲೆಲ್ಲಿ ಅಲೆಯುತ್ತಾನೊ ಎಂದು ಯೋಚನೆ ಮಾಡುತ್ತಿದ್ದಿರಿ. ಅವನ ಮುಖವನ್ನು ನೋಡಿ! ಇಲ್ಲಿದ್ದುದಕ್ಕಿಂತ ಎಷ್ಟೋ ಗೆಲುವಾಗಿದೆ. ದೇಶವನ್ನು ಸುತ್ತಿದುದ ರಿಂದ ಅವನಿಗೆ ಅನುಕೂಲವಾಯಿತೆ ಹೊರತುಪ್ರತಿಕೂಲವಿಲ್ಲ'' ಎಂ ದಳು. ಶಂಕರರಾಯನು "ಸುಭದ್ರೆಯನ್ನು ನೋಡಿದಮೇಲೆ ನನ್ನ ಕಾಯಿಲೆಯುಸಂಪೂರ್ಣವಾಗಿಗುಣವಾಗುವುದು"ಎಂದನು. ಕಾಕ್ಸ್ ಸಾಹೇಬನು"ಸ್ವಾಮಿ! ಇನ್ನು ನನಗೆಅಪ್ಪಣೆಕೊಟ್ಟರೆ ನಾನು ಹೋಗು ವೆನು. ವಾರಕ್ಕೊಂದಾವರ್ತಿ ತಮ್ಮನ್ನು ಬಂದು ನೋಡಿಕೊಂಡು ಹೋಗುತ್ತೇನೆ. ತಮ್ಮ ರೋಗವೇನೋ ಶೀಘ್ರದಲ್ಲಿಯೆ ಗುಣವಾಗು ವುದರಲ್ಲಿ ಸಂದೇಹವಿಲ್ಲ" ಎಂದನು. ಶಂಕರರಾಯನು ತನ್ನ ತಲೆದಿಂಬಿನ ಕೆಳಗಿನಿಂದ ನೂರು ಸವರನ್‌ಗಳನ್ನು ತೆಗೆದು ಕಾಕ್ಸ್ ಸಾಹೇಬನಿಗೆ ಕೊಡುವುದಕ್ಕೆ ಹೋದನು. ಅವನು ತಗೆದುಕೊಳ್ಳಲಿಲ್ಲ "ನಾನು

ಯಾವ ಚಿಕಿತ್ಸೆಯನ್ನೂ ಮಾಡದೆ ತೆಗೆದುಕೊಳ್ಳುವುದು ಸರಿಯಲ್ಲ." ವೆಂದು ಹೇಳಿ ಶಂಕರರಾಯನ ಅಪ್ಪಣೆಪಡೆದು, ಮಾಧವರಾಯನ ಕೈ ಕುಲಿಕಿ "ನೀವೇ ನಿಮ್ಮ ತಂದೆಗೆ ಔಷಧಿ" ಎಂದು ಹೇಳಿ ಹೊರಟು ಹೋದನು.

ಒಂದು ವಾರ ಕಳೆಯಿತು. ಕಾಕ್ಸ್ ಸಾಹೇಬನು ಬಂದುನೋಡಿ ಶಂಕರರಾಯನ ದೇಹಸ್ಥಿತಿಯು ಬಹಳ ಮಟ್ಟಿಗೆ ಗುಣಮುಖವಾಗಿರುವುದನ್ನು ಕಂಡು ಸಂತೋಷಪಟ್ಟನು. ಮಾಧವನಿಗೂ ಗಂಗಾಬಾಯಿಗೂ ಶಂಕರರಾಯನ ದೇಹಸ್ಥಿತಿಯ ವಿಷಯದಲ್ಲಿ ಉಂಟಾಗಿದ್ದ ಕೊರತೆಯು ಕಡಮೆಯಾಯಿತು. ಆದರೆ ಅದಕ್ಕೆ ಬದಲಾಗಿ ಸುಭದ್ರೆಯ ವಿಚಾರದಲ್ಲಿ ಬಹು ಯೋಜನೆಗೆ ಪ್ರಾರಂಭವಾಯಿತು. ಗಂಗಾಬಾಯಿಗೆ ಮಾಧವನು ವರ್ತಮಾನಪತ್ರಿಕೆಯಿಂದ ಸುಭದ್ರೆಯ ಸಮಾಚಾರವನ್ನು ಓದಿ ಹೇಳುವವರೆಗೆ ಅವಳಿಗೆ ಯಾವ ಸಂಗತಿಯೂ ತಿಳಿದಿರಲಿಲ್ಲ. ಈಗ ಏನುಮಾಡುವುದಕ್ಕೂ ತಿಳಿಯದು. ಶ್ರೀಧರರಾಯ (ಆತ್ಮಾರಾಮ) ನು ಸುಭದ್ರೆಯನ್ನು ಕರೆದುಕೊಂಡು ಹೋಗಿರುವ ಸ್ಥಳವು ಗೊತ್ತಾದರೆ ಅನಂತರ ಏನಾದರೂ ಪ್ರಯತ್ನವನ್ನು ಮಾಡಬಹುದು. ಅದು ತಿಳಿಯುವ ಬಗೆ ಹೇಗೆ? ಗಂಗಾಬಾಯಿಯುಗುಟ್ಟಾಗಿ ರಾಂಪುರಕ್ಕೆ ಹೋಗಿಅಲ್ಲಿನಸಮಾಚಾರಗಳನ್ನೆಲ್ಲಾ ತಿಳಿದುಕೊಂಡುಬರಬೇಕೆಂದುಯೋಚಿಸಿ ಏನೋ ಒಂದುನೆಪವನ್ನು ಹೇಳಿ ಶಂಕರರಾಯನ ಅನುಮತಿಯನ್ನು ಪಡೆದುಹೊರಟುಹೋದಳು. ಅಲ್ಲಿವಿಚಾರಿಸಿದುದರಲ್ಲಿ ರಾಮರಾಯನು ತನ್ನ ಮಗಳಿಗೆ ಪ್ರತಿಕಕ್ಷಿಯಾಗಿ ಸುಭದ್ರೆಯು ಬಂದಳೆಂಬ ಅಸೂಯೆಯಿಂದ ಹೇಗಾದರೂಮಾಡಿ ಅವಳು ಮಾಧವನಿಗೆ ದೊರೆಯದಂತೆ ಮಾಡಬೇಕೆಂದು ಉದ್ದೇಶಪಟ್ಟು ಶ್ರೀಧರರಾಯನಿಗೆ ಸಹಾಯಮಾಡಿಅವನಿಗೆಕಾರಾಗೃಹವಿಮೋಚನೆ ಮಾಡಿಸಿದುದಲ್ಲದೆ ಸಿವಿಲ್ ಕೋರ್ಟಿನಲ್ಲಿಯೂ ದಾವಾ ಹಾಕಿಸಿ ಗೆಲ್ಲಿಸಿದನೆಂತ ತಿಳಿಯು

ಬಂದಿತು. ಅನಂತರ ಗಂಗಾಬಾಯಿಯು ರಾಮರಾಯನ ಸೇವಕರಲ್ಲಿ ಮುಖ್ಯನಾದವನನ್ನು ಗೋಪ್ಯವಾಗಿ ಕರೆಯಿಸಿಕೊಂಡು .ಅವನ ಕೈಯಲ್ಲಿ ನೂರು ರೂಪಾಯಿಗಳ ಒಂದು ಚೀಲವನ್ನಿಟ್ಟು ಸುಭದ್ರೆಯ ಸಮಾಚಾರವನ್ನು ಕೇಳಲು, ಆವನು ಒಂದುಕಡೆ ಯಜಮಾನನಪ್ಪಣೆಯೂ ಮತ್ತೊಂದುಕಡೆ ಭಾರವಾದ ಹಣದಚೀಲವೂ ಬಾಧಿಸುತ್ತಿರಲು, ಕೊನೆಗೆ ಹಣವನ್ನು ಬಿಡಲಾರದೆ ಶ್ರೀಧರರಾಯನು ಸುಭದ್ರೆಯೊಡನೆ ಹೈದರಾಬಾದುರಾಜ್ಯಕ್ಕೆ ಸೇರಿದ 'ನಿರ್ಮಲ್' ಎಂಬಸ್ಥಳದಲ್ಲಿರುವನೆಂದೂ, ಅವನಿಗೆ ಯಾವುದಕ್ಕೂ ಯೋಚನೆಯಿಲ್ಲದಂತೆ ರಾಮರಾಯನುಯಥೇಷ್ಟವಾಗಿ ಹಣವನ್ನು ಕೊಟ್ಟು ಕಳುಹಿಸಿರುವನೆಂದೂ ಹೇಳಿದನು. ಗಂಗಾಬಾಯಿಯು ಮಾರಣೆಯದಿನವೇ ಪುನಹೆಗೆ ಹಿಂದಿರುಗಿದಳು. ಅವಳೂ ಮಾಧವನೂ ಬಹಳಹೊತ್ತು ಯೋಚನೆ ಮಾಡಿ ಏಕಾರ್-ಉಲ್-ಮುಲ್ಕನ ಸಹಾಯವನ್ನು ಪಡೆಯುವುದೇ ಒಳ್ಳೆಯದೆಂದು ನಿರ್ಧರಿಸಿದರು. ಮಾಧವನು ಅವನ ಸಹಾಯವನ್ನು ಬೇಡಿ, ಉಪಚಾರೋಕ್ತಿಗಳಿಂದ ಕೂಡಿದ ಒಂದು ಕಾಗದವನ್ನು ಸವಿಸ್ತಾರವಾಗಿ ಬರೆದನು.

———o———

## —ಹದಿನಾರನೆಯ ಅಧ್ಯಾಯ—

ಮಾಧವರಾಯನ ಕಾಗದವು ಮುಟ್ಟಿದಾಗ್ಗೆ ಏಕಾರ್-ಉಲ್-ಮುಲ್ಕನು ಬೊಂಬಾಯಿನಲ್ಲಿದ್ದನು. ಅವನು ಆ ಕಾಗದವನ್ನು ನೋಡಿದೊಡನೆಯೆ ತನ್ನ ಕೆಲಸವನ್ನೆಲ್ಲಾ ಆದಷ್ಟು ಬೇಗನೆ ಮುಗಿಸಿಕೊಂಡು ಹೈದರಾಬಾದಿಗೆ ಹಿಂದಿರುಗಿ ಅಲ್ಲಿನ ಪೋಲೀಸಿನವರೊಂದಿಗೆ ಮಾತಾಡಿ ಗಂಗಾರಾಮನೆಂಬೊಬ್ಬ ಪೋಲೀಸು ದರೋಗನನ್ನು ನಿರ್ಮಲಕ್ಕೆ ಕಳುಹಿಸಿಕೊಟ್ಟನು. ಗಂಗಾರಾಮನು ನಿರ್ಮಲವನ್ನು ಸೇರಿ,

ಭಿಕ್ಷುಕನವೇಷದಿಂದಊರನ್ನೆಲ್ಲಾ ಸುತ್ತುತ್ತಿದ್ದನು. ಹೀಗೆ ಎರಡುದಿನಗಳಾದುವು. ಅವನಿಗೆ ತಿಳಿಸಿದ್ದ ಕುರುಹುಗಳುಳ್ಳ ಮನುಷ್ಯನಾಗಲಿ ಹುಡುಗಿಯಾಗಲಿ ಎಲ್ಲಿಯೂ ಗೋಚರವಾಗಲಿಲ್ಲ. ಅನಂತರ ಬ್ರಾಹ್ಮಣರ ಮನೆಗಳಲ್ಲೆಲ್ಲಾ ವಿಚಾರಿಸಿನೋಡಿದನು. ಯಾರೂ ಶ್ರೀಧರರಾಯನೆಂಬ ಹೆಸರನ್ನು ಕೇಳಿದವರೇ ಇರಲಿಲ್ಲ. ಕೊನೆಗೆ ಬಹಳ ಬೇಸರಪಟ್ಟು ಒಂದು ಮುರುಕು ಮನೆಯ ಜಗುಲಿಯಮೇಲೆ ಕೂತುಕೊಂಡು ಮುಂದಿನ ಕರ್ತವ್ಯವನ್ನು ಯೋಚಿಸುತ್ತಿದ್ದನು. ಆಗ ರಾತ್ರಿ ೯ ಗಂಟೆಯ ಸಮಯ. ಆಕಸ್ಮಿಕವಾಗಿ ಆಮನೆಯೊಳಗಿನಿಂದ ನರಳುವ ಶಬ್ದವು ಕೇಳಿಬಂದಿತು. ಗಂಗಾರಾಮನು ಬೆಚ್ಚಿದನು. ಆ ಮನೆಯನ್ನು ನೋಡಿದರೆ ಯಾರೂ ವಾಸಮಾಡುವಂತೆ ತೋರಲಿಲ್ಲ. ಬೀದಿಯ ಬಾಗಲಿಗೆಬೀಗವನ್ನು ಹಾಕಿದ್ದಿತು. ಮತ್ತು ಬಾಗಿಲ ಬಳಿ ಸಾರಿಸಿ ರಂಗೋಲಿ ಹಾಕಿದ ಗುರುತೆ ಇರಲಿಲ್ಲ. ಗಂಗಾರಾಮನಿಗೆ ದೆವ್ವಭೂತಗಳ ಭಯವು ಲೇಶಮಾತ್ರವೂ ಇಲ್ಲದಿದ್ದರೂ ಆ ಸಮಯದಲ್ಲಿ ಸ್ವಲ್ಪ ಭಯವುಂಟಾಗದೆ ಬಿಡಲಿಲ್ಲ. ಆದರೂಧೈರ್ಯವನ್ನು ತಂದುಕೊಂಡು, ಎದ್ದು ಬಾಗಿಲ ರಂಧ್ರಕ್ಕೆ ಕಿವಿಯನ್ನಿಟ್ಟುಕೊಂಡು ನಿಂತನು. ನರಳುವಿಕೆಯ ಶಬ್ದವು ಚೆನ್ನಾಗಿ ಕೇಳಿಬಂದಿತು. ಅನಂತರ ಗಟ್ಟಿಯಾಗಿ ಮಾತನಾಡುವ ಶಬ್ದವು ಕೇಳಿಸಿತು. ಹಾಗೆಯೆ ಬೈಗಳಿಗೆ ಪ್ರಾರಂಭವಾಯಿತು. “ಅಯ್ಯೋ ! ನೀನು ಹಾಳಾಗ ! ಎಣ್ಣೆಯನ್ನು ಸರಿಯಾಗಿ ನೀವೆ ! ಅಯ್ಯೋ ! ಅಯ್ಯೋ ! ಹೋಯಿತಲ್ಲಪ್ಪ ? ಪ್ರಾಣವೇ ಹೋಯಿತು. ಇಂತಹ ಒರಟು ಹೆಣ್ಣನ್ನು ಕಟ್ಟಿಕೊಂಡುಬಂದೆನಲ್ಲಪ್ಪ. ಹಾ!ಹಾ ! ಅಲ್ಲಿ ಬೇಡವೆ ! ಈ ಕಡೆ ನೀವೆ ! ಅಯ್ಯೋ! ಈ ವಾಯು ಎಲ್ಲಿಂದ ಬಂದಿತಪ್ಪ. ನಾನು ಈ ಹೆಣ್ಣನ್ನು ಯಾವ ಘಳಿಗೆಯಲ್ಲಿ ಕರೆದುಕೊಂಡು ಬಂದೆನೊ! ಮಾರಿ ಬಂದಹಾಗೆ ಬಂದಳಲ್ಲ! ಪ್ರಾಣವೂ ಹೋಗುವುದಿಲ್ಲವಲ್ಲ!”ಎಂದು ಮುಂತಾಗಿ ನಾನಾಬಗೆಯ

ಮಾತುಗಳು ಕೇಳಿ ಬಂದುವು. ಗಂಗಾರಾಮನು ಆ ಮನೆಯೊಳಗೆ ವಾತರೋಗಪೀಡಿತನಾದ ಮನುಷ್ಯನೊಬ್ಬನೂ ಅವನ ಅನುಬಂಧಿಯಾದ ಹೆಂಗಸೊಬ್ಬಳೂ ಇರಬೇಕೆಂದು ಊಹಿಸಿದನು. ಆ ಹೆಂಗಸು ಹೊಸದಾಗಿ ಬಂದವಳಾಗಿರಬೇಕೆಂಬುದೂ ವ್ಯಕ್ತವಾಯಿತು. ಗಂಗಾರಾಮನು ಹುಡುಕುತ್ತಿದ್ದವರು ಇವರೇ ಆಗಿರಬಾರದೇತಕ್ಕೆ? "ಹೊರಬಾಗಲಿಗೆ ಬೀಗಹಾಕಿರುವುದನ್ನು ನೋಡಿದರೆ ಇವರಿಗೆ ಸಂಬಂಧಪಟ್ಟವರು ಇನ್ನೂ ಯಾರೋ ಇರಬೇಕೆಂದು ತೋರುತ್ತದೆ. ಈಮನೆಯ ಪೂರ್ವೋತ್ತರವನ್ನೆಲ್ಲಾ ಚೆನ್ನಾಗಿ ವಿಚಾರಿಸಿಬಿಡೋಣ" ಎಂದಂದುಕೊಂಡು ಎದುರುಮನೆಯ ಜಗುಲಿಮೇಲೆ ಒಂದು ಕಂಬಳಿಯನ್ನು ಹಾಸಿಕೊಂಡು ಎಚ್ಚರವಾಗಿ ಮಲಗಿದ್ದನು. ಎಷ್ಟುಹೊತ್ತಾದರೂ ಯಾರೂಬರಲೇ ಇಲ್ಲ. ಪುನಃ ಆ ಮುರುಕುಮನೆಯಬಾಗಿಲಿಗೆ ಕಿವಿಗೊಟ್ಟುಕೊಂಡು ನಿಂತನು. ಒಳಗೆ ನಿಶ್ಶಬ್ದವಾಗಿತ್ತು. ರೋಗಿಗೆ ಸ್ವಲ್ಪನಿದ್ದೆ ಹತ್ತಿರಬಹುದೆಂದಂದುಕೊಂಡುತನ್ನ ಬಿಡಾರಕ್ಕೆ ಹೋದನು.

ಮಾರಣೆಯದಿನ ಬೆಳಗಾಗುವುದರೊಳಗಾಗಿ ಆ ಮುರುಕುಮನೆಯು ಪೋಲೀಸಿನವರಿಂದ ಸುತ್ತುವರಿಯಲ್ಪಟ್ಟಿತು ನಿರ್ಮಲದ ಪೋಲೀಸುದರೋಗನೂ ಗಂಗಾರಾಮನೂ ಬೀದಿಯಬಾಗಿಲ ಬಳಿ ನಿಂತುಕೊಂಡು ಕಮ್ಮಾರನಕೈಯಿಂದ ಉಪಾಯವಾಗಿ ಬೀಗವನ್ನು ತೆರೆಸಿಮೆತ್ತಗೆ ಒಳಗೆಹೋದರು. ರೋಗಿಯು ಹಾಸಿಗೆಯಮೇಲೆಬಿದ್ದಿದ್ದನು. ಒಬ್ಬಹುಡುಗಿಯುಅವನಕಾಲುಗಳಿಗೆ ಶಾಖವನ್ನು ಕೊಡುತ್ತಾ ಕುಳಿತಿದ್ದಳು. ಮನೆಯೆಲ್ಲವೂ ಸ್ಮಶಾನಸದೃಶವಾಗಿದ್ದಿತು. ಎಲ್ಲಿನೋಡಿದರೂಕಶ್ಮಲ, ದುರ್ವಾಸನೆ. ಶಾಖವನ್ನು ಕೊಡುವಾಗ್ಗೆ ರೋಗಿಯು ಹಾ!ಹಾ! ಎಂದುಆನಂದಪಡುತ್ತಿದ್ದವನು ಬೀದಿಯಬಾಗಿಲುಕಿರುಗುಟ್ಟಿದ ಶಬ್ದವನ್ನು ಕೇಳಿದೊಡನೆಯೆ ಥಟ್ಟನೆಅತ್ತಕಡೆನೋಡಿದನು. ಯಮದೂತರಂತೆ ಇಬ್ಬರು ದೀರ್ಘಾಕಾರರಾದ ಪುರುಷರು ಗೋಚರ

ವಾಗಲು ‘‘ಈಗಲೀಗ ನಾನುಕೆಟ್ಟೆ’’ ಎಂದು ಎದೆಯನ್ನು ಒಡೆದು ಕೊಂಡು ಎದ್ದೋಡಲು ಪ್ರಯತ್ನಮಾಡಿದನು ಆದರೆ ಸಾಧ್ಯವಾಗದೆ ನಿಶ್ಶೇಷನಾಗಿ ಬಿದ್ದುಕೊಂಡನು. ಅಲ್ಲಿ ಕುಳಿತಿದ್ದ ಹುಡುಗಿಯೂ ಕಣ್ಣೀರು ಸುರಿಸುತ್ತಾ ಜ್ಞಾನತಪ್ಪಿದವಳಂತೆ ಬಿದ್ದುಕೊಂಡಳು. ಗಂಗಾ ರಾಮನು ಥಟ್ಟನೆ ಅವಳ ಕಡೆಗೆ ಓಡಿ ಅವಳನ್ನೆತ್ತಿಕೊಂಡು ಹೊರಗೆ ಸಿದ್ಧ ವಾಗಿದ್ದ ಗಾಡಿಯಲ್ಲಿ ಮಲಗಿಸಿ ಆಸ್ಪತ್ರೆಗೆ ಕಳುಹಿಸಿಕೊಟ್ಟನು. ಆ ರೋಗಿಯು ಮತ್ತೊಂದು ಗಾಡಿಯಲ್ಲಿ ಪೋಲೀಸು ಠಾಣೆಗೆ ಒಯ್ಯಲ್ಪ ಟ್ಟನು. ಅನಂತರ ಗಂಗಾರಾಮನೂ ನಿರ್ಮಲದ ದರೋಗನೂ ಪಂಚಾಯಿತರೆದುರಿಗೆ ಮನೆಗೆ ಬೀಗವನ್ನು ಹಾಕಿ ಮೊಹರುಮಾಡಿ, ಹು ಡುಗಿಯ ಸ್ಥಿತಿಯನ್ನು ವಿಚಾರಿಸಲು ಆಸ್ಪತ್ರೆಗೆ ಹೋದರು. ಅಲ್ಲಿ ಆಕೆಯನ್ನು ನೋಡಿ ಅವರಿಬ್ಬರಿಗೂ ಕಣ್ಣಿನಲ್ಲಿ ನೀರು ಸುರಿಯಲಾ ರಂಭಿಸಿತು. ‘‘ನಿನ್ನ ಹೆಸರೇನು ತಾಯಿ’’ ಎಂದು ಗಂಗಾರಾಮನು ಕೇಳಿದುದಕ್ಕೆ ಅವಳು ಕೊಟ್ಟ ಉತ್ತರವು ಹೊರಗೆ ಕೇಳಿಸಲೇ ಇಲ್ಲ. ಅಷ್ಟರಲ್ಲಿಯೇ ಆಸ್ಪತ್ರೆಯ ಮುಖ್ಯವೈದ್ಯನು ಅಲ್ಲಿಗೆ ಬಂದು, ಆ ಹುಡುಗಿಯ ದೇಹಸ್ಥಿತಿಯನ್ನು ನೋಡಿ, “ಈಕೆಯ ಪ್ರಾಣಕ್ಕೆ ಯಾರು ಬಾಧ್ಯರು?” ಎಂದು ಗಂಗಾರಾಮನ ಕಡೆಗೆ ತಿರುಗಿ ಶಿಟ್ಟಿ ನಿಂದ ಕೇಳಿದನು. ಅದಕ್ಕವನು ತಾನು ನಿರ್ಮಲಕ್ಕೆ ಬಂದಮೇಲೆ ನಡೆದ ಸಂಗತಿಯನ್ನೆಲ್ಲಾ ತಿಳಿಸಿದುದಕ್ಕೆ ವೈದ್ಯನು, ‘‘ಈಕೆಯನ್ನು ಅನ್ನಾಹಾರವಿಲ್ಲದೆ ಕೊಲ್ಲಬೇಕೆಂದು ಆ ನೀಚನು ಪ್ರಯತ್ನಪಟ್ಟಿರ ಬಹುದು. ಈಕೆಯು ಭೋಜನಮಾಡಿ ೪ ದಿನಗಳಮೇಲಾಗಿರಬೇಕು. ನಿದ್ರೆಯನ್ನು ಕಂಡು ಒಂದು ವಾರವಾಗಿರಬಹುದು. ಈಕೆಗೆ ಈಗ ಸರಿಯಾದ ಆಹಾರವೂ ಶುದ್ಧಾಂಗವಾಗಿ ವಿಶ್ರಾಂತಿಯೂ ಬೇಕಾ ಗಿದೆ. ಈಕೆ ಈ ರಾತ್ರಿಯವರೆಗೆ ಇದೇರೀತಿ ಆ ಮನೆಯಲ್ಲಿದ್ದಿದ್ದರೆ ಇನ್ನು ಆಶೆಯೇ ಇರುತ್ತಿರಲಿಲ್ಲ. ಈಗ ಜೀವಕ್ಕೇನೂ ಭಯವಿಲ್ಲ.

ಆ ನೀಚನನ್ನು ಮಾತ್ರ ಬಿಡಬೇಡಿರಿ. ಅವನ ಮೇಲೆ ನನ್ನದೇ ಮುಖ್ಯವಾದ ಫಿರ್ಯಾದನ್ನಾಗಿಟ್ಟುಕೊಳ್ಳಿ" ಎಂದು ಹೇಳಿ ಅವರನ್ನು ಕಳುಹಿಸಿಕೊಟ್ಟನು

ದರೋಗರಿಬ್ಬರೂ ಆಸ್ಪತ್ರೆಯಿಂದ ಠಾಣೆಗೆಹೋದರು. ಅಲ್ಲಿ ವಾತರೋಗಿಯು "ಲಾಕಪ್ಪಿ"ನ ಒಂದುಮೂಲೆಯಲ್ಲಿ ಕೂತು ಅಳುತ್ತಿದ್ದನು. ಇವರನ್ನು ಕಂಡೊಡನೆಯೆ ದಂಡಪ್ರಣಾಮವನ್ನು ಮಾಡಿ, "ಪ್ರಭೋ! ನಾನು ಕೆಟ್ಟಪಾಪಿ. ನನಗೆಸ್ವಲ್ಪಪೂಕನಿಕರವನ್ನು ತೋರಿಸಬೇಡಿರಿ. ಆ ದೇವತಾಸ್ವರೂಪಳಾದ, ಪಾತಿವ್ರತ್ಯಳಾದ ಕನ್ನಿಕೆಯನ್ನು ಬಹಳವಾಗಿ ಕಷ್ಟಪಡಿಸಿದ್ದೇನೆ. ಆಕೆಯ ಮುಖಸಂದರ್ಶನವನ್ನು ಮಾಡಿ, ಕ್ಷಮೆಯನ್ನು ಬೇಡುವುದಕ್ಕೆ ಒಂದಾವರ್ತಿ ಅವಕಾಶ ಕೊಟ್ಟರೆ ನಾನು ಯೋಚನೆಯಿಲ್ಲದೆ ಪ್ರಾಣವನ್ನು ಬಿಡುತ್ತೇನೆ. ಸಾಧ್ಯವಾದರೆ ನನ್ನ ಯಜಮಾನರಾದ ಶಂಕರರಾಯರನ್ನೂ ನೋಡಬೇಕೆಂದು ಕುತೂಹಲವಿದೆ. ಇಷ್ಟನ್ನು ಮಾತ್ರ ನೆರವೇರಿಸಿಕೊಡಬೇಕು" ಎಂದನು. ಅದಕ್ಕೆ ಗಂಗಾರಾಮನು, "ನೀನೇಆತ್ಮಾರಾಮನು ತಾನೆ ? ಈಚಿಗೆ ಶ್ರೀಧರರಾಯನಾದವನು?" ಎಂದನು.

ರೋಗಿ—ನೀವು ನನ್ನನ್ನು ಎಷ್ಟು ತುಚ್ಛೀಕರಿಸಿ ಮಾತನಾಡಿದರೂ ನನ್ನ ತಪ್ಪಿತಕ್ಕೆ ತಕ್ಕಷ್ಟಾಗಲಾರದು. ಆ ಪರಮನೀಚನು ನಾನೇ.

ಗಂಗಾ—ಆ ಹುಡುಗಿಯು ಸುಭದ್ರೆಯೊ?

ಆತ್ಮಾರಾಮ—ಹೌದು.

ಗಂಗಾ—ಆಕೆಗೆ ನೀನು ಕೊಟ್ಟಿರುವ ಕಷ್ಟದಿಂದುಂಟಾದ ರೋಗವು ಶಮನವಾಗಲು ಇನ್ನೂ ಒಂದು ತಿಂಗಳ ಕಾಲಹಿಡಿಯುವುದು. ಈಗ ಆಕೆಯನ್ನು ನೋಡಲಾರೆ.

ಆತ್ಮಾ—ಹಾಗಾದರೆ ಜಹಗೀರ್ದಾರ್ ಶಂಕರರಾಯರನ್ನಾದರೂ ದಯವಿಟ್ಟು ಬರಮಾಡಬೇಕು.

ಗಂಗಾ—ಆಗಲಿ ನೋಡೋಣ.

ಗಂಗಾರಾಮನು, ಸುಭದ್ರೆಯೂ ಆತ್ಮಾರಾಮನೂ ಸಿಕ್ಕಿದರೆಂದೂ, ನಿರ್ಮಲದಲ್ಲಿಯೇ ಇರುವರೆಂದೂ, ಅಪ್ಪಣೆಯಾದಂತೆ ಮುಂದೆ ನಡೆಯುವುದಾಗಿಯೂ, ಏಕಾರ್-ಉಲ್-ಮುಲ್ಕನಿಗೆ ತಂತೀವರ್ತಮಾನವನ್ನು ಕೊಟ್ಟನು.

—— o ——

## — ಹದಿನೇಳನೆಯ ಅಧ್ಯಾಯ. —

ಶಂಕರರಾಯನಿಗೆ ಕ್ರಮಕ್ರಮವಾಗಿ ಆರೋಗ್ಯಭಾಗ್ಯವು ಒದಗಿ ಬಂದಿತು. ಮಾಧವನನ್ನು ಬಂದ ಎರಡು ವಾರದೊಳಗಾಗಿಕೋಲೂರಿಕೊಂಡು ನಡೆಯುವಷ್ಟು ಶಕ್ತಿಯುಂಟಾಯಿತು. ಒಂದು ದಿನ ಅವನು ಮಾಧವನನ್ನು ಕುರಿತು "ಅಪ್ಪಾ! ಮಾಧವ! ವಿಶ್ವನಾಥಪಂತರಿಗೆ ಸುಭದ್ರೆಯನ್ನು ಕೂಡಲೆ ಕರೆದುಕೊಂಡು ಬರುವಂತೆ ನನ್ನ ಹೆಸರಿನಲ್ಲೊಂದು ಕಾಗದವನ್ನು ಬರೆ" ಎಂದನು. ಮಾಧವನು ಕಂಬನಿದುಂಬಿದವನಾಗಿ, "ಅಪ್ಪಾಜಿ! ನನ್ನ ವಿಷಯದಲ್ಲಿ ತಾವು ತೋರಿಸಿರುವ ಮಮತೆಯು ಅನನ್ಯಾದೃಶವಾದುದು. ಅದಕ್ಕೆ ನಾನು ಎಷ್ಟು ಕೃತಜ್ಞನಾಗಿದ್ದರೂ ಸ್ವಲ್ಪವೇ ಇದೆ. ಆದರೆ ನಾವು ಒಂದನ್ನು ಯೋಚಿಸಿದರೆ ದೈವವು ಬೇರೊಂದನ್ನು ಯೋಚಿಸುವುದು" ಎಂದನು. ಶಂಕರರಾಯನು ಗಾಬರಿಯಿಂದ, "ಏನು ಸಮಾಚಾರ? ನನಗೇತಕ್ಕೆ ಇದುವರೆಗೆ ತಿಳಿಸಲಿಲ್ಲ?" ಎಂದನು.

ಮಾಧವ—"ತಮ್ಮ ಶರೀರ ಸ್ಥಿತಿಯು ವ್ಯತ್ಯಾಸವಾದೀತೆಂಬ ಭಯದಿಂದ ಯಾವುದನ್ನೂ ಹೇಳಲಿಲ್ಲ."

ಅಷ್ಟುಹೊತ್ತಿಗೆ ಸರಿಯಾಗಿ ಸೇವಕನೊಬ್ಬನು ಒಂದು ಹಳದಿಯ ಲಕೋಟೆಯನ್ನು ತಂದು ಮಾಧವನ ಕೈಯಲ್ಲಿಟ್ಟನು. ಅವನದನ್ನು ಅತ್ಯಾತುರದಿಂದ ಒಡೆದುನೋಡಿ, "ಸಿಕ್ಕಿದಳು, ಸಿಕ್ಕಿದಳು" ಎಂದು ಕೂಗಿಕೊಂಡನು. ಶಂಕರರಾಯನು ಆ "ಟೆಲಿಗ್ರಾಮು"ನ್ನು ಕೈಗೆ ತೆಗೆದುಕೊಂಡು ನೋಡಿದನು. ಮಾಧವನು ಅದನ್ನು ತಂದ ಸೇವಕನಿಗೆ ತನ್ನ ತಲೆಯಮೇಲಿನ ಜರಿಯುಳ್ಳ ಪೇಟಾವನ್ನೆ ತೆಗೆದು ಕೊಟ್ಟುಕಳುಹಿಸಿದನು.

ಶಂಕರರಾಯನು, "ಮಗು! ಇದೇನು? ಸುಭದ್ರೆಯು ಹೈದರಾಬಾದಿಗೇತಕ್ಕೆ ಹೋದಳು?" ಎಂದನು ಮಾಧವನು ಆ ದಿನ ರಾತ್ರಿ ತಂದೆಯು ಆಜ್ಞೆಮಾಡಿದುದು ಮೊದಲ್ಗೊಂಡು ನಡೆದ ಸಮಸ್ತವನ್ನೂ ತಂದೆಗೆ ಅರಿಕೆಮಾಡಿದನು. ಶಂಕರರಾಯನು "ನನ್ನ ಅವಿವೇಕದಿಂದಲ್ಲವೆ ಇಷ್ಟು ಅನರ್ಥಕ್ಕೆ ಕಾರಣವಾಯಿತು!" ಎಂದು ನಿಟ್ಟುಸಿರುಬಿಟ್ಟನು.

ಮಧ್ಯಾಹ್ನ ಮಾಧವನೂ ಗಂಗಾಬಾಯಿಯೂ ಹೈದರಾಬಾದಿಗೆ ಹೋಗಿ ಸುಭದ್ರೆಯನ್ನು ಕರೆತರುವುದಾಗಿ ಶಂಕರರಾಯನಿಗೆ ಹೇಳಿದರು. ಅವನು ತಾನೂ ಬರುತ್ತೇನೆಂದನು. ಗಂಗಾಬಾಯಿಯು "ನಿಮಗೆ ಇನ್ನೂ ಸಂಪೂರ್ಣವಾಗಿ ಗುಣವಾಗಿಲ್ಲ. ಈಗ ಪ್ರಯಾಣಮಾಡಿದರೆ ತೊಂದರೆಯಾಗುವುದಿಲ್ಲವೆ!" ಎಂದಳು. ಅದಕ್ಕವನು "ಆದರಾಗಲಿ, ನಾನು ಬಂದೇತೀರಬೇಕು" ಎಂದು ಮುಷ್ಕರ ಹಿಡಿದನು.

ಆದಿನವೇ ಮೂವರೂ ಪುನಹೆಯಿಂದ ಹೊರಟು ಮಾರಣೆಯ ದಿನ ಸಾಯಂಕಾಲಕ್ಕೆ ಮುಂಚೆ ಹೈದರಾಬಾದನ್ನು ಸೇರಿದರು. ರೈಲ್ವೆಸ್ಟೇಷನ್‍ನಲ್ಲಿ ನವಾಬನು ಕಾದಿದ್ದನು. ಅವನೂ ನಿರ್ಮಲಕ್ಕೆ ಹೊರಡಲು ಸಿದ್ಧನಾಗಿಯೆ ಇದ್ದನು. ಮಾಧವನು

ನವಾಬನನ್ನು ಸ್ತೋತ್ರಮಾಡಿ, ತಂದೆಗೂ ಅವನಿಗೂ ಪರಿಚಯವನ್ನು ಮಾಡಿಸಿದನು. ಶಂಕರರಾಯನೂ ನವಾಬನನ್ನು ಶ್ಲಾಘಿಸಿ "ನೀವು ಮಾಡಿದ ಉಪಕಾರಕ್ಕೆ ಎಂದೆಂದಿಗೂ ನಾವು ಕೃತಜ್ಞರಾಗಿರಬೇಕು'' ಎಂದನು. ನವಾಬನು, "ಮಹರಾಜ್! ಇದರಲ್ಲಿ ನಾನು ಮಾಡಿದುದೇನೂ ಇಲ್ಲ. ತಮ್ಮ ಮಗನಿಂದ ನಾನು ಪಡೆದಿರುವ ಉಪಕಾರದಲ್ಲಿ ಇದು ಸಾವಿರದಲ್ಲೊಂದು ಪಾಲೂ ಆಗಲಾರದು. ತಮ್ಮ ಮಗನನ್ನು ನನ್ನ ಕುಟುಂಬದವರೆಲ್ಲರೂ ತಂದೆಯೆಂದೇ ಭಾವಿಸಿದ್ದೇವೆ" ಎಂದನು.

ಹೈದರಾಬಾದಿನಿಂದ ಅವರೆಲ್ಲರೂ ಆ ರಾತ್ರಿಯೆ ಮುಂದಕ್ಕೆ ಪ್ರಯಾಣಮಾಡಿ ನಿರ್ಮಲವನ್ನು ಸೇರಿದರು. ನವಾಬನು ಪೋಲೀಸು ಠಾಣೆಗೆ ಆಳನ್ನು ಕಳುಹಿಸಿ ಗಂಗಾರಾಮನನ್ನು ಬರಮಾಡಿಕೊಂಡನು. ಗಂಗಾರಾಮನು ನಡೆದ ಸಂಗತಿಯನ್ನೆಲ್ಲಾ ತಿಳಿಸಿದನು. ಅವನು ಸುಭದ್ರೆಯ ಸ್ಥಿತಿಯನ್ನು ವಿವರಿಸುತ್ತಿದ್ದಾಗ್ಗೆ ನವಾಬನು ಮೊದಲಾಗಿ ಎಲ್ಲರೂ ಕಣ್ಣೀರುಬಿಟ್ಟರು. ಗಂಗಾರಾಮನಿಗೆ ಗದ್ಗದಸ್ವರವುಂಟಾಯಿತು. ಅನಂತರ ಆಸ್ಪತ್ರೆಗೆ ಹೋಗಿ ಸುಭದ್ರೆಯನ್ನು ನೋಡಲು ಮುಖ್ಯವೈದ್ಯನ ಅಪ್ಪಣೆಯನ್ನು ಕೇಳಲಾಗಿ, ಅವನು ತಲೆಯನ್ನಲ್ಲಾಡಿಸಿ "ಈಗ ಆಕೆಗೆ ಶುದ್ಧಾಂಗವಾಗಿ ವಿಶ್ರಾಂತಿ ಬೇಕಾಗಿದೆ. ಒಂದು ವಾರದದಿನ ದಯವಿಟ್ಟು ವಿರಾಮವನ್ನು ಕೊಡಿ" ಎಂದನು. ಶಂಕರರಾಯನು, "ಆಕೆಯ ದೇಹಸ್ಥಿತಿ ಹೇಗಿದೆ? ತಿಳಿಯಬಹುದೆ?" ಎಂದು ಕೇಳಿದುದಕ್ಕೆ ವೈದ್ಯನು, "ಮೊದಲು ನಾನು ಬರೀ ಉಪವಾಸದಿಂದ ಬಂದ ವ್ಯಾಧಿಯೆಂದು ತಿಳಿದು ೨-೩ ದಿನದಲ್ಲಿಯೆ ಗುಣವಾಗುವುದಾಗಿ ತಿಳಿದಿದ್ದೆನು. ಈಗ ನೋಡುವಲ್ಲಿ ಆಕೆಗೆ ಯಾವುದೋ ಮನೋವ್ಯಥೆಯಿರುವಂತೆ ಕಾಣುವುದು. ಎಷ್ಟು ಉಲ್ಲಾಸವನ್ನುಂಟುಮಾಡುವ ಮಾತನಾಡಿದರೂ ಹಸನ್ಮುಖಿಯಾಗುವುದೇ ಇಲ್ಲ. ಅನ್ನಾಹಾರಗಳನ್ನೂ ತೆಗೆದುಕೊಳ್ಳುವುದಿಲ್ಲ. ನನಗೆ

ಯಾವುದೂ ಮುಂತೋಱುವುದೇ ಇಲ್ಲ" ಎಂದನು. ಶಂಕರರಾಯನು ಅವನೊಂದಿಗೆ ಏಕಾಂತವಾಗಿ ಕೆಲವು ಮಾತುಗಳನ್ನು ಹೇಳಿ ಮಾಧವನನ್ನು ಅವನ ಜತೆಯಲ್ಲಿ ಕಳುಹಿಸಿಕೊಟ್ಟನು ಶಂಕರರಾಯನೂ, ನವಾಬನೂ, ಗಂಗಾಬಾಯಿಯನ್ನು ಬಿಡಾರದಲ್ಲಿ ಬಿಟ್ಟು, ಪ್ರೋಲೀಸುಠಾಣೆಗೆ ಹೋದರು.

ಆತ್ಮಾರಾಮನು ಶಂಕರರಾಯನನ್ನು ಕಂಡೊಡನೆಯೆ ಅವನ ಕಾಲುಗಳ ಮೇಲೆಬಿದ್ದು "ಸ್ವಾಮಿ ! ನನ್ನಂತಹ ಪಾಪಿಯನ್ನು ನೋಡಲು ದಯೆಮಾಡಿದಿರಾ! ನನ್ನನ್ನು ನಿಮ್ಮ ಕೈಯಿಂದಲೇ ಸಂಹರಿಸಿ ನನ್ನ ಜನ್ಮವನ್ನು ಪುನೀತವಾದುದನ್ನಾಗಿ ಮಾಡುವುದಿಲ್ಲವೆ? ನಾನು ಸ್ವಾಮಿದ್ರೋಹಿ ! ನನ್ನನ್ನು ಕಾಲಿನಿಂದಾದರೂ ಒದೆಯಿರಿ" ಎಂದು ಬಹಳವಾಗಿ ರೋದನಮಾಡಿದನು. ಶಂಕರರಾಯನು, "ಆತ್ಮಾರಾಮ ! ಸುಮ್ಮನೆ ಏತಕ್ಕೆ ರೋದಿಸುವೆ ? ನೀನು ಏನು ಮಾಡಿದರೂ ಈ ಸಾರಿನ್ಯಾಯಸ್ಥಾನದ ಕೈಯಿಂದ ತಪ್ಪಿಸಿಕೊಂಡು ಹೋಗಲಾರೆ. ಸುಮ್ಮನೆ ಮರುಳುಮಾಡುವ ಮಾತುಗಳನ್ನೇತಕ್ಕಾಡುವೆ?" ಎಂದನು.

ಆತ್ಮಾರಾಮ—ಮಹಾಪ್ರಭೋ ! ನನ್ನ ಹೃದಯವನ್ನು ಬಿಚ್ಚಿ ತೋರಿಸಲವಕಾಶವಿದ್ದರೆ ಎಲ್ಲವೂ ತಮಗೆ ವ್ಯಕ್ತವಾಗುತ್ತಿತ್ತು. ಸರ್ವಾತ್ಮನಾ ಈ ಪಾಪಿ ಶರೀರವನ್ನಿಟ್ಟುಕೊಂಡು ನನಗೆ ಜೀವಿಸಲು ಇಷ್ಟವಿಲ್ಲ ತಾವು ನನ್ನ ಪೂರ್ವದ ತಪ್ಪಿತಗಳನ್ನು ಮನಸ್ಸಿನಲ್ಲಿಡುವುದಿಲ್ಲವೆಂದೂ ನನ್ನ ಹೆಸರಿನ ಮನುಷ್ಯನೊಬ್ಬನು ಇದ್ದನೆಂಬುದನ್ನು ಮರೆತು ಬಿಡುವುದಾಗಿಯೂ ವಾಗ್ದಾನ ಮಾಡಿದರೆ ನಿರಾಳವಾಗಿ ಪ್ರಾಣವನ್ನು ಬಿಡುವೆನು.

ಶಂ— ಸುಭದ್ರೆಯ ವಿಷಯದಲ್ಲಿ ನೀನು ತೋರಿಸಿರುವ

ನಿಷ್ಕಾರುಣ್ಯವನ್ನು ಎಂದೆಂದಿಗೂ ಕ್ಷಮಿಸಲಾರೆನು. ನೀನು ಅವಳನ್ನು ನಿನ್ನ ಮನೆಯಲ್ಲಿಟ್ಟುಕೊಂಡಿದ್ದುದರಿಂದ ನನ್ನ ವಂಶಕ್ಕೇ ಅಪಕೀರ್ತಿಯುಂಟಾಗಿದೆ. ಇದನ್ನು ಹೇಗೆ ಸಹಿಸಲಿ ?

ಆತ್ಮಾ—ಮಹಾಸ್ವಾಮಿ! ನಾನು ಅರಿಕೆಮಾಡುವುದನ್ನು ಲಾಲಿಸಬೇಕು. ನಾನು ಸುಭದ್ರಾಬಾಯಿಯವರನ್ನು ಬಹಳವಾಗಿ ಹಿಂಸೆಪಡಿಸಿದುದೇನೋ ನಿಜ. ಅವರು ನನಗೆ ತಾಯಿಯು ಮಗುವಿಗೆ ಶುಶ್ರೂಷೆಮಾಡುವಂತೆ ಮಾಡುತ್ತಿದ್ದರೆ ಹೊರತು ಅನ್ಯಥಾ ಇಲ್ಲ. ಅಲ್ಲದೆ ಅವರು ಇನ್ನೂ ಕನ್ಯಾವಸ್ಥೆಯಲ್ಲಿರುವುದರಿಂದ ತಮಗೆ ಲೋಕಾಪವಾದವೆಂದಿಗೂ ಬರಲಾರದು.

ಶಂ—ನಿನಗೆ ಓದು ಬರಹ ಬರುತ್ತದೆಯೆ ?

ಆತ್ಮಾ—ಈಚಿಗೆ ಕಲಿತುಕೊಂಡಿದ್ದೇನೆ.

ಶಂ—ಹಾಗಾದರೆ ಯಥಾರ್ಥವಾಗಿ, ನಡೆದ ಸಂಗತಿಯನ್ನು ಯಾವವಿಧವಾದ ಸಂದೇಹಕ್ಕೂ ಆಸ್ಪದವಿಲ್ಲದಂತೆ, ವಿವರಿಸಿ ಒಂದು ಕಾಗದವನ್ನು ಬರೆದು, ಒಬ್ಬ "ಮ್ಯಾಜಿಸ್ಟ್ರೇಟ''ರ ಸಮಕ್ಷಮ ರುಜುವನ್ನು ಹಾಕಿ ನನ್ನ ಕೈಯಲ್ಲಿ ಕೊಟ್ಟಕೂಡಲೆ ನಿನ್ನ ತಪ್ಪಿತಗಳನ್ನೆಲ್ಲವನ್ನೂ ಮನ್ನಿಸುವುದಲ್ಲದೆ ಪುನಃ ನನ್ನ ಸೇವೆಯಲ್ಲಿರಲು ನಿನಗೆ ಇಷ್ಟವಿದ್ದರೆ ಅದಕ್ಕೂ ಅವಕಾಶವನ್ನು ಕೊಡುವೆನು.

ಆತ್ಮಾ—ತಮ್ಮ ವಾಗ್ದಾನಕ್ಕೋಸ್ಕರ ನನ್ನ ಹೃದಯವು ಕೃತಜ್ಞತೆಯಿಂದ ಉಬ್ಬಿಬಿರಿಯುತ್ತದೆ. ದಯವಿಟ್ಟು "ಮ್ಯಾಜಿಸ್ಟ್ರೇಟ" ರನ್ನು ಕರೆದುತರೋಣಾಗಲಿ.

ಶಂಕರರಾಯನೂ ನವಾಬನೂ ಹೊರಟು ಹೋದರು.

## —ಹದಿನೆಂಟನೆಯ ಅಧ್ಯಾಯ—

ಮಾಧವನು ಮುಖ್ಯವೈದ್ಯನೊಡನೆ ರೋಗಿಗಳಿರುವ ಸ್ಥಳಕ್ಕೆ ಹೋದನು. ಸುಭದ್ರೆಯು ಮಲಗಿದ್ದ ಕೊಠಡಿಯಬಳಿಗೆ ಬರುತ್ತಲೆ, ವೈದ್ಯನು ಮಾಧವನನ್ನು ಸ್ವಲ್ಪ ಹೊತ್ತು ಮರೆಯಾಗಿರ ಹೇಳಿ ತಾನೊಬ್ಬನೆ ಒಳಗೆ ಹೋದನು. ಆಗ ಸುಭದ್ರೆಯು ಸಂಪೂರ್ಣವಾಗಿ ವಿಕಾಸವಾದ ಕಣ್ಣುಗಳಿಂದ ಮೇಲ್ಚಾವಣಿಯನ್ನು ನೋಡುತ್ತಾ ಮಲಗಿದ್ದಳು. ವೈದ್ಯನು "ಸುಭದ್ರಾಬಾಯಿ!" ಎನ್ನುತ್ತಲೆ ಗಕ್ಕನೆ ತಿರುಗಿ ನೋಡಿದಳು. "ಅಯ್ಯೋ! ನೀವೇ? ಅವರು ಬಂದರೇನೋ ಎಂದಿದ್ದೆ." ಎಂದು ತನ್ನಷ್ಟಕ್ಕೆ ತಾನೆ ಹೇಳಿಕೊಂಡಳು.

ವೈದ್ಯ—"ಅವರು" ಎಂದರೆ ಯಾರು?

ಸುಭದ್ರೆ—ಇನ್ನಾರು? ನನ್ನ ಕಣ್ಣೆದುರಿಗೆ ಇದುವರೆಗೂ ನಿಂತಿದ್ದವರು.

ವೈದ್ಯ—ಅವರಾರು?

ಸುಭದ್ರೆ—ನಾನು ಹೇಗೆ ಹೇಳಲಿ?

ವೈದ್ಯ—ನಿಮ್ಮ ಭರ್ತನೆ?

ಸುಭದ್ರೆ ಸುಮ್ಮನಿದ್ದಳು.

ವೈದ್ಯ—ಅವರ ಹೆಸರೇನು?

ಸುಭದ್ರೆ—ಹೇಗೆ ಹೇಳಲಿ?

ವೈದ್ಯ—ನಾನುಹೇಳುತ್ತೇನೆಕೇಳಿ. "ಮಾಧವರಾಯರು."

ಸುಭದ್ರೆ—(ಆಶ್ಚರ್ಯದಿಂದ) ನಿಮಗೆ ಯಾರುಹೇಳಿದರು?

ವೈದ್ಯನು—(ತನ್ನಷ್ಟಕ್ಕೆ ತಾನೆ) "ಇದುವರೆಗೂ ಕಾಣದ ನಗುವು ಈಗ ತೋರಿಬರುತ್ತಿದೆ. ನಾನು ಇಷ್ಟನ್ನು ಕಂಡು ಹಿಡಿಯಲಾರದೆ ಹೋದೆನಲ್ಲಾ—ಎಂತಹ

ಮೂಢ!'' ಎಂದಂದುಕೊಂಡು ಸುಭದ್ರೆಯ ಪ್ರಶ್ನೆಗೆ ಉತ್ತರವಾಗಿ ''ಅವರೇ'' ಎಂದನು.

ಸುಭದ್ರೆ—ಅವರನ್ನೆಲ್ಲಿ ನೋಡಿದ್ದಿರಿ!''

ವೈದ್ಯ—ಇಲ್ಲಿಯೇ !

ಸುಭದ್ರೆ—ಅವರೇತಕ್ಕೆ ಇಲ್ಲಿಗೆ ಬರುವರು ? ಕುಚೇಷ್ಟೆ ಮಾಡುತ್ತೀರಾ?

ವೈದ್ಯ—ಈಗ ಮಾಯಾಮಂತ್ರಮಾಡಿ ಅವರನ್ನು ನಿಮ್ಮೆದುರಿಗೆ ಬರುವಂತೆಮಾಡಲೆ?

ಸುಭದ್ರೆ—ಎಲ್ಲಿ ನೋಡೋಣ?

ವೈದ್ಯ—ನೀವು ಎದ್ದು ಕೂತುಕೊಳ್ಳಿ....ಸರಿ ..ಹಾಗೆ... ಕಣ್ಣುಮುಚ್ಚಿಕೊಳ್ಳಿ, ಈಗ ನಾನು ಮಂತ್ರಮಾಡುತ್ತೇನೆ. ಒಂದು,ಎರಡು,ಮೂರು,ಎಂದಕೂಡಲೆ ಕಣ್ಣುಬಿಡಬೇಕು ಅದಕ್ಕೆ ಮುಂಚೆ ಬಿಟ್ಟರೆ ಎಲ್ಲವೂ ಮಾಯವಾಗುವುದು.

ಸುಭದ್ರೆ—ಇದೇನೋ ಬ್ರಾಹ್ಮಣಿತಿಯು ಗಂಡನಿಗೆ ವಡೆ ಮಾಡಿಕೊಟ್ಟ ಕಥೆಯಂತಿದೆ.

ವೈದ್ಯ—ಒಂದು ಸಾರಿ ನನ್ನನ್ನು ಪರೀಕ್ಷೆಮಾಡಿ ನೋಡಿದರೆ ನನ್ನ ಮಂತ್ರದ ಮಹಿಮೆಯು ಗೊತ್ತಾಗುವುದು.

ಸುಭದ್ರೆಯುಎದ್ದು ದಿಂಬನ್ನೊರಗಿಕೊಂಡು ಕುಳಿತಳು. ಎರಡು ಕೈಗಳಿಂದಲೂಕಣ್ಣುಗಳನ್ನು ಮುಚ್ಚಿಕೊಂಡಳು. ವೈದ್ಯನು, '' ಹುಂ! ಮಹಂಕಾಳಿ ! ಚಂಡಿ! ಚಾಮುಂಡಿ ! ಹ್ರೀಂ, ಹ್ರೂಂ, ಪಟಪಟ ಝುಂಕಾರಧ್ವನಿಭೈರವಿ,ನನ್ನ ಇಷ್ಟಾರ್ಥವನ್ನು ನೆರವೇರಿಸು'' ಎಂದು, ಸುಭದ್ರೆಯನ್ನು ಕುರಿತು, "ಸುಭದ್ರಾಬಾಯಿ! ಒಂದು, ಎರಡು, ಮೂರು" ಎಂದು ಚಿಟಿಕಿಯನ್ನು ಹೊಡೆದನು. ಸುಭದ್ರೆಯು ಕಣ್ತೆರೆಯಲಾಗಿ ತನ್ನ ಪ್ರಾಣಸ್ವರೂಪನಾದವನೆ ಸ್ವಯಂ ನಿಂತಿದ್ದನು.

ಸುಭದ್ರೆಯು ತನ್ನ ಕಣ್ಣನ್ನೆ ತಾನು ನಂಬಲಾರದೆ ಹೋದಳು. ಹಾಗೆಯೆ ಪತಿಯ ಬಾಹುಗಳ ಸ್ಪರ್ಶವಾದುದರಿಂದ ಕನಸಲ್ಲವೆಂಬುದು ವ್ಯಕ್ತವಾಯಿತು. ದಂಪತಿಗಳಿಬ್ಬರೂ ಆನಂದಾತಿಶಯದಿಂದ ಅವಾಕ್ಕಾದರು. ಸುಭದ್ರೆಯು ಆಹಾರನಿದ್ರೆಗಳಿಲ್ಲದೆ ಬಹಳ ಬಡವಾಗಿದ್ದರೂ ಅವಳ ಸೌಂದರ್ಯವು ಸ್ವಲ್ಪವೂ ಕಡಿಮೆಯಾಗಿರಲಿಲ್ಲ. ತಲೆಯನ್ನು ಬಾಚಿಕೊಂಡು ಎಷ್ಟೋ ದಿನಗಳಾಗಿ ಹೋಗಿದ್ದುವು. ಹಳೆಯದಾದ ಮಾಸಲು ಬಣ್ಣದ ಸೀರೆಯನ್ನುಟ್ಟಿದ್ದಳು ಆಭರಣದ ಸೊಲ್ಲೇ ಇಲ್ಲ. ಹೀಗಿದ್ದರೂ ಆ ವಿಶಾಲವಾದ ಕಾಂತಿಯುಕ್ತವಾದ ನೇತ್ರದ್ವಯವೂ, ಶುಭ್ರವಾದ ದಂತ ಪಂಕ್ತಿಯೂ, ವಿಶಾಲವಾದ ಹಣೆಯೂ, ನಸು ನೀಟವಾದ ಮೂಗೂ, ಮೇಲಾಗಿ, ಸ್ವರ್ಣಕಾಂತಿಗೆ ಸಮವಾದ ಶರೀರ ಕಾಂತಿಯೂ ಎಂತಹ ನಿರಕ್ತನನ್ನಾದರೂ ಮರುಳುಮಾಡುವಂತಿದ್ದುವು. ಮಾಧವನು ತಾನೇ ಧನ್ಯನೆಂದುಕೊಂಡನು. ವೈದ್ಯನು "ನಾನೆಲ್ಲಿಯೂ ಇಂತಹ ಯುಗ್ಮವನ್ನು ನೋಡಲಿಲ್ಲ" ಎಂದೆಂದುಕೊಂಡು, ಮಾಧವನನ್ನು ಕುರಿತು, 'ರಾಯರೆ ! ನಾನು ಇನ್ನು ಸ್ವಲ್ಪ ಹೊತ್ತು ಬಿಟ್ಟುಕೊಂಡು ಬರುತ್ತೇನೆ. ಇಲ್ಲಿಯೇ ಇರೋಣಾಗಲಿ' ಎಂದು ಹೇಳಿ ಹೋದನು.

ಸುಭದ್ರೆಯೂ ಮಾಧವನೂ ಏನೇನು ಮಾತಾಡುತ್ತಿದ್ದರೋ ನಾವರಿಯೆವು. ಸುಭದ್ರೆಯು ತನ್ನ ಕಷ್ಟಗಳನ್ನೆಲ್ಲಾ ಹೇಳಿಕೊಂಡಿರಬಹುದು. ಮಾಧವನೂ ತಾನು ಪಂಡರಾಪುರವನ್ನು ಬಿಟ್ಟು ಹೊರಟ ಮೇಲೆ ನಡೆದುದೆಲ್ಲವನ್ನೂ ತಿಳಿಸಿರಬಹುದು. ಸ್ವಲ್ಪ ಹೊತ್ತು ಕಳೆದ ಅನಂತರ ಗಂಗಾಬಾಯಿ, ಶಂಕರರಾಯ, ನವಾಬ, ಈ ಮೂರು ಜನವೂ ಆಸ್ಪತ್ರೆಗೆ ಬಂದು ದಂಪತಿಗಳೆದುರಿಗೆ ನಿಂತರು. ಅವರನ್ನು ವೈದ್ಯನು ಕರೆಯ ಕಳುಹಿಸಿದ್ದನು. ಸುಭದ್ರೆಗೆ ಅವರನ್ನು ಕಂಡೊಡನೆಯೆ ಎಲ್ಲಿಂದಲೋ ಹೊಸ ಶಕ್ತಿಯುಂಟಾಯಿತು. ಸರಳಗವಾಗಿ ಎದ್ದು ಕೂರಲಾ

ರದವಳು ಮಂಚದಿಂದ ಕೆಳಗೆ ಜಗ್ಗನೆ ಇಳಿದು ಮೊದಲು ಶಂಕರರಾಯನಿಗೂ, ಅನಂತರ ಗಂಗಾಬಾಯಿಗೂ ನಮಸ್ಕಾರ ಮಾಡಿದಳು. ಇದನ್ನೆಲ್ಲಾ ನೋಡುತ್ತಿದ್ದ ವೈದ್ಯನಿಗೆ ಪರಮಾಶ್ಚರ್ಯವುಂಟಾಯಿತು. "ಮನಸ್ಸಿನ ಶಕ್ತಿಯ ಮುಂದೆ ಔಷಧದ ಶಕ್ತಿ ಎಷ್ಟರದು?" ಎಂದನು. ಶಂಕರರಾಯನು ಸುಭದ್ರೆಯ ರೂಪಲಾವಣ್ಯವನ್ನು ನೋಡಿ ಮುಗ್ಧನಾದನು. "ಮನೆಗೆ ಮಹಾಲಕ್ಷ್ಮೀ ಸ್ವರೂಪಳಾದವಳ ಮೇಲೆ ನಿಷ್ಕಾರಣವಾಗಿ ದ್ವೇಷಮಾಡಿ ಅಮೃತವನ್ನು ವಿಷಮಾಡಿಕೊಂಡಿದ್ದೆನಲ್ಲಾ! ಭಗವಂತನ ಕರುಣೆಯು ಅಪರಿಮಿತವಾದುದು" ಎಂದಂದುಕೊಂಡನು.

ಮುಖ್ಯವೈದ್ಯನು ಆಸ್ಪತ್ರೆಯಿಂದ ಸುಭದ್ರೆಯನ್ನು ಕರೆದುಕೊಂಡು ಹೋಗಬಹುದೆಂದೂ, ಆಕೆಗೆ ಸ್ವಲ್ಪ ಸರಿಯಾದ ಆಹಾರ, ವಿಶ್ರಾಂತಿಗಳನ್ನು ಕೊಟ್ಟರೆ ಒಂದು ವಾರದೊಳಗೆ ಸಂಪೂರ್ಣವಾಗಿ ಗುಣವಾಗುವುದೆಂದೂ ಹೇಳಿದನು. ಅದರಂತೆಯೆ ಸುಭದ್ರೆಯನ್ನು ಕರೆದುಕೊಂಡು ಹೋದರು.

——o——

## — ಹತ್ತೊಂಬತ್ತನೆಯ ಅಧ್ಯಾಯ. —

ಮಧ್ಯಾಹ್ನ, ಭೋಜನವಾದಕೂಡಲೆ, ಶಂಕರರಾಯನೂ, ನವಾಬನೂ, ಮಾಧವರಾಯನೂ ಪೋಲೀಸು ಠಾಣೆಗೆ ಹೋದರು. ಅಷ್ಟು ಹೊತ್ತಿಗೆ ನವಾಬನ ಮಾತಿನಮೇರೆ ಒಬ್ಬ "ಮ್ಯಾಜಿಸ್ಟ್ರೇಟ್" ನೂ ಬಂದು ಕುಳಿತಿದ್ದನು. ಆತ್ಮಾರಾಮನು ಒಂದು "ಹೇಳಿಕೆ" ಯನ್ನು ಬರೆದು ಸಿದ್ಧಮಾಡಿಕೊಂಡಿದ್ದನು. ಅದು ಬಹಳ ಉದ್ದವಾಗಿದ್ದುದರಿಂದ ಅದರ ಸಾರಾಂಶವನ್ನು ಮಾತ್ರ ಇಲ್ಲಿ ತಿಳಿಸುವೆವು.

ಆತ್ಮಾರಾಮನು ಶಂಕರರಾಯನ ಮನೆಯನ್ನು ಬಿಟ್ಟು ಓಡಿ ಹೋಗಿ ಇಪ್ಪತ್ತು ವರ್ಷಗಳಾದಮೇಲೆ ಮದುವೆಯನ್ನು ಮಾಡಿಕೊಳ್ಳ ಬೇಕೆಂದು ಇಷ್ಟಮಟ್ಟಿ ಹೆಣ್ಣು ಹುಡುಕಿಕೊಂಡು ರಾಂಪುರಕ್ಕೆ ಬಂದನು. ಅಲ್ಲಿ ಮದುವೆಗೆ ಎಲ್ಲವೂ ಸಿದ್ಧವಾಯಿತು. ಆದರೆ ಮದುವೆಯ ಹಿಂದಿನದಿನ ಎದುರುಗೊಳ್ಳುವ ಸಮಯದಲ್ಲಿ ಪೋಲೀಸಿನವರು ಹಿಡಿದುಕೊಂಡುಹೋಗಿ ಪುನಹೆಯಲ್ಲಿ ಸೆಷನ್ಸ್ ಕೋರ್ಟಿಗೆ ದಾಖಲ್ಮಾಡಿಸಿದರು. ಅನಂತರ ರಾಂಪುರದ ರಾಮರಾಯರು ಬಹಳದ್ರವ್ಯವನ್ನು ವ್ಯಯಮಾಡಿ ಆತ್ಮಾರಾಮನಿಗೆ ಬಿಡುಗಡೆಮಾಡಿಸಿದಲ್ಲದೆ ಸಿವಿಲ್ ಕೋರ್ಟಿನಲ್ಲಿ ಹುಡುಗಿಯನ್ನು ಸ್ವಾಧೀನಕ್ಕೆ ಕೊಡಿಸಬೇಕೆಂದು ದಾವಾಹಾಕಿಸಿದರು ಅದಕ್ಕೂ ಅವರುಸಾಕ್ಷಿಗಳಿಗೆಲ್ಲಾ ಲಂಚಕೊಡಬೇಕಾಯಿತಾದುದರಿಂದ ಬಹಳ ಹಣವು ವೆಚ್ಚವಾಯಿತು. ಸಿವಿಲ್ ಕೋರ್ಟಿನ ಡಿಕ್ರಿಯಂತೆ ಹುಡುಗಿಯನ್ನು ಸ್ವಾಧೀನಪಡಿಸಿಕೊಂಡು ರಾಮರಾಯರ ಅಪ್ಪಣೆಯಂತೆ ಯಾರಿಗೂ ಪತ್ತೆಯಾಗದ ಸ್ಥಳದಲ್ಲಿ ಕೆಲವು ಕಾಲವಿರಬೇಕೆಂದು ಆತ್ಮಾರಾಮನು ಗೊತ್ತುಮಾಡಿಕೊಂಡು ನಿಜಾಮ ರಾಷ್ಟ್ರಕ್ಕೆ ಹೋಗಿಸೇರಿದನು. ಅಲ್ಲಿಯೂ ರೈಲ್ವೆಸ್ಟೇಷನ್ ಗಳಬಳಿ ವಾಸಮಾಡಿದರೆತೊಂದರೆಯಾದೀತೆಂಬ ಭೀತಿಯಿಂದರೈಲ್ವೆ ಸ್ಟೇಷನ್ಗೆಬಂದುದಿನದದಾರಿಯಲ್ಲಿರುವನಿರ್ಮಲಕ್ಕೆ ಹೋದನು. ಅಲ್ಲಿ ವಿಶೇಷಜನಸಂಚಾರವಿಲ್ಲದಬೀದಿಯಲ್ಲಿ ಒಂದುಮುರುಕುಮನೆಯನ್ನು ಬಾಡಿಗೆಗೆ ತೆಗೆದುಕೊಂಡನು. ನಿರ್ಮಲವನ್ನು ಸೇರಿದಮೇಲೆ ಸುಭದ್ರೆಯುಬಂದೆರಡುದಿನ ಸ್ವಲ್ಪಮುಷ್ಕರಸ್ವಭಾವವನ್ನು ತೋರಿಸಿದಳು. ಅನಂತರ ಪ್ರಯೋಜನವಿಲ್ಲವೆಂದು ತಿಳಿದು ಕೇವಲವಿಧೇಯಳಾದಳು. ಆತ್ಮಾರಾಮನು ಆಮನೆಯಹೊರಬಾಗಿಲಿಗೆ ಬೀಗವನ್ನು ಹಾಕಿಹಿತ್ತಲಬಾಗಿಲಿನಿಂದ ಸಂಚಾರಮಾಡುತ್ತಿದ್ದನು. ಹಿತ್ತಲಬಾಗಿಲಿಗೂ ಒಳಗಡೆ ಬೀಗವನ್ನು ಹಾಕಿಕೊಳ್ಳುತ್ತಿದ್ದನು. ಹೀಗೆ ಸುಭದ್ರೆಗೆ ಆ ಮನೆಯು

ಪ್ರತ್ಯಕ್ಷ ಕಾರಾಗೃಹವಾಗಿಯೆ ಪರಿಣಮಿಸಿತ್ತು. ಆತ್ಮಾರಾಮನು ಒಂದು ಶುಭಮುಹೂರ್ತವನ್ನು ಕಟ್ಟಿಸಿ ಸುಭದ್ರೆಯನ್ನು ಮದುವೆಮಾಡಿಕೊಳ್ಳಬೇಕೆಂದು ಪ್ರಯತ್ನ ಮಾಡಿದನು. ಲಗ್ನವು ಇನ್ನೂ ಎರಡು ಮೂರು ದಿನವಿರುವಾಗ ಒಂದುಗಿನ ರಾತ್ರಿ ಅವನಿಗೆ ಭಯಂಕರವಾದ ಕನಸಾಯಿತು. ಒಬ್ಬ ಕೃಷ್ಣವರ್ಣದ ಪುರುಷನು ದೊಡ್ಡ ದೊಡ್ಡ ಗೋಪೀಚಂದನದ ನಾಮಗಳನ್ನು ಧರಿಸಿಕೊಂಡು ನಿಂತಂತಿತ್ತು. ಒಂದೊಂದು ಸಾರಿ ಆ ಮೂರ್ತಿಯ ಮುಖವು ಸಿಂಹದ ಮುಖದಂತೆ ತೋರುತ್ತಿತ್ತು. ಆ ಮೂರ್ತಿಯು ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಆತ್ಮಾರಾಮನನ್ನು ದುರುದುರನೆ ನೋಡುತ್ತಾ "ನಿನಗೆ ಬಂದಿದೆ ಕೇಡು" ಎಂದು ಆರ್ಭಟಿಸಿ, "ಆ ಹುಡುಗಿಯನ್ನು ಮನೆಯಿಂದ ಕಳುಹಿಸುವೆಯಾ ಇಲ್ಲವೆ?" ಎಂದು ಕೇಳಿದನು. ಆತ್ಮಾರಾಮನು ಯಾವ ಉತ್ತರವನ್ನೂ ಕೊಡಲಿಲ್ಲ. ಅವನಿಗೆ ಥಟ್ಟನೆ ಎಚ್ಚರವಾಯಿತು. ಮೈ ಬೆವತುಹೋಗಿತ್ತು. ಹಾಗೆಯೆ "ಇದು ಬರೀ ಕನಸು" ಎಂದಂದುಕೊಂಡು ಎದ್ದು ಕುಳಿತನು. ಆದರೂ ಮನಸ್ಸಿನಲ್ಲಿ ಭೀತಿಯು ತಪ್ಪಲಿಲ್ಲ. ಎದ್ದು ತಿರುಗಾಡಿದರೆ ಸರಿಯಾಗಬಹುದೆಂದುಕೊಂಡು ಏಳಲು ಪ್ರಯತ್ನಮಾಡಿದನು ಸಾಧ್ಯವಾಗಲಿಲ್ಲ. ಕಾಲುಗಳೆರಡರ ಕೀಲುಗಳೂ ಕಟ್ಟಿಕೊಂಡು ಹೋಗಿದ್ದುವು. ಅಂದಿನಿಂದ ಹಾಸಿಗೆ ಹಿಡಿದು ಮಲಗಿಬಿಟ್ಟನು. ಮನೆಯೊಳಗೆ ಒಂದೆರಡು ವಾರಕ್ಕೆ ಸಾಕಾಗುವಷ್ಟು ಆಹಾರಪದಾರ್ಥಗಳಿದ್ದುವು. ಅದುವರೆಗೂ ಆತ್ಮಾರಾಮನೆ ಅಡಿಗೆಯನ್ನು ಮಾಡಿ ಸುಭದ್ರೆಗೂ ಬಡಿಸುತ್ತಿದ್ದನು. ಆಗ ಸುಭದ್ರೆಯು ಅಡಿಗೆಮಾಡಬೇಕಾಯಿತು. ಅಡಿಗೆ ಮಾಡಬೇಕಾದರೆ ನೀರಿಗೆ ಹೊರಗೆಹೋಗಬೇಕಾಗಿತ್ತು. ಸುಭದ್ರೆಯನ್ನು ಹೊರಗೆ ಬಿಟ್ಟರೆ ಕೈಗೆ ಸಿಕ್ಕುವಳೆ? ಮನಸ್ಸಿಗೆ ಬಹಳ ಯೋಚನೆಯುಂಟಾಯಿತು. ಕೊನೆಗೆ ಅವಳನ್ನು ನಿರ್ಬಂಧದಿಂದಿಡುವುದು ಅಸಾಧ್ಯವೆಂದು ತಿಳಿದು

ಅವಳನ್ನು ಕರೆದು "ಸುಭದ್ರೆ! ನನಗೆ ಏಳುವುದಕ್ಕೂ ಕೂಡುವುದಕ್ಕೂ ಆಗುವುದಿಲ್ಲ. ನಿನಗೇನಾದರೂ ಕನಿಕರವಿದ್ದು ನನ್ನ ಪ್ರಾಣವನ್ನುಳಿಸಿ ನಿನ್ನ ಪ್ರಾಣವನ್ನೂ ಉಳಿಸಿಕೊಳ್ಳಬೇಕೆಂದಿದ್ದರೆ, ಇಗೋ ಈ ಜೀಗದ ಕೈಯನ್ನು ತೆಗೆದುಕೊ. ಬಾವಿಗೆ ಹೋಗಿ ನೀರು ತಂದು ಸ್ವಲ್ಪ ಅನ್ನವನ್ನು ಮಾಡಿಹಾಕು ನನ್ನನ್ನು ಬಿಟ್ಟು ಓಡಿಹೋಗಲು ಇಷ್ಟವಾದರೆ ಹಾಗೂ ಮಾಡಬಹುದು. ಆದರೆ ನಿನಗೆ ಅದರಿಂದ ಅನೇಕ ತೊಂದರೆಗಳುಂಟಾಗುವುವು ನೋಡಿಕೊ" ಎಂದನು. ಸುಭದ್ರೆಯು ಅಂದಿನಿಂದ ಆತ್ಮಾರಾಮನಿಗೆ ಅಡಿಗೆಮಾಡಿಹಾಕುವುದಲ್ಲದೆ, ಅವನು ಮನಸ್ವಿಯಾಗಿ ಬೈಯುವ ಬೈಗಳನ್ನೂ ಸಹಿಸಿಕೊಂಡು ಅವನ ಕಾಲುಗಳಿಗೆ ಎಣ್ಣೆಯನ್ನು ನೀವುವುದು, ಸೇಕವನ್ನು ಕೊಡುವುದು ಮುಂತಾದ ಶುಶ್ರೂಷೆಗಳನ್ನು ಬೇಸರವಿಲ್ಲದೆ ಮಾಡುತ್ತಿದ್ದಳು. ಕಾಯಿಲೆಯು ಹೆಚ್ಚುತಹೆಚ್ಚುತ ಆತ್ಮಾರಾಮನ ಹಿಂಸೆಯೂ ಹೆಚ್ಚುತ್ತಿತ್ತು. ಆದರೂ ಸುಭದ್ರೆಯು ಅದನ್ನು ಸಹಿಸಿಕೊಂಡಿದ್ದಳು. ಕೊನೆಗೆ, ಮೂರುದಿನಗಳು ಅವಳಿಗೆ ಸ್ವಲ್ಪವೂ ವಿಶ್ರಾಂತಿಯಿಲ್ಲದಂತಾಯಿತು. ಅದನ್ನೂ ಸಹಿಸಿಕೊಂಡಿದ್ದಳು. ನಾಲ್ಕನೆಯ ದಿನ ಬೆಳಗ್ಗೆ ಪೋಲೀಸಿನವರು ಮನೆಯೊಳಗೆ ನುಗ್ಗಿ ಆತ್ಮಾರಾಮನನ್ನು ಹಿಡಿದುಕೊಂಡುಹೋದರು. "ಸುಭದ್ರಾಬಾಯಿಯವರನ್ನು ನನ್ನ ತಾಯಿಗೆ ಸಮಾನರನ್ನಾಗಿ ಭಾವಿಸಿದ್ದೇನೆ. ಅವರು ನಿಷ್ಕಲ್ಮಷ ಹೃದಯರಾದ ಕನ್ನಿಕೆಯಾದುದರಿಂದ ಮಾಧವರಾಯರು ಸ್ವಲ್ಪವೂ ಸಂದೇಹಪಡದೆ ಅವರನ್ನು ಪರಿಗ್ರಹಿಸಬಹುದು. ನಾನು ನಿರ್ಮಲದ ಮನೆಯಲ್ಲಿ ಹೂತಿಟ್ಟಿರುವ ೧೦೦೦ ರೂಪಾಯಿಗಳನ್ನು ಸುಭದ್ರಾಬಾಯಿಯವರಿಗೆ ಬಳುವಳಿಯಾಗಿ ಕೊಟ್ಟಿದ್ದೇನೆ. ನಾನು ಇನ್ನು ಒಂದು ಕ್ಷಣವೂ ಈ ಪಾಪಿ ಶರೀರವನ್ನಿಟ್ಟುಕೊಂಡು ಬಾಳಲು ಇಷ್ಟವಿಲ್ಲ ಆದರೆ ಒಂದುಸಾರಿ ಸುಭದ್ರಾಬಾಯಿಯವರನ್ನು ದರ್ಶನ ಮಾಡಿಕೊಂಡು

ಅವನಿಗೆ ಕೊಟ್ಟ ಹಿಂಸೆಯನ್ನು ಕ್ಷಮಿಸುವಂತೆ ಕೇಳಿಕೊಳ್ಳಲು ಅವಕಾಶಕೊಟ್ಟರೆ ಬಹಳ ಕೃತಜ್ಞನಾಗಿರುವೆನು''. ಹೀಗೆಂದು ಆ ''ಹೇಳಿಕೆ''ಯು ಮುಗಿಸಲ್ಪಟ್ಟಿತ್ತು. ಆತ್ಮಾರಾಮನು ಆ ಕಾಗದಕ್ಕೆ ಮ್ಯಾಜಿಸ್ಟ್ರೇಟಿನ ಮುಂದೆ ರುಜುಹಾಕಿದನು. ನವಾಬನು ಸಾಕ್ಷಿ ಹಾಕಿದನು. ಮ್ಯಾಜಿಸ್ಟ್ರೇಟನೂ ರುಜುಮಾಡಿದನು. ''ನಾಳೆ ಬೆಳಗ್ಗೆ ಸುಭದ್ರೆಯನ್ನು ನೀನು ನೋಡಬಹುದು'' ಎಂದು ಹೇಳಿ ಶಂಕರರಾಯನು ನವಾಬ, ಮಾಧವನೊಡನೆ ಬಿಡಾರಕ್ಕೆ ಹೋದನು. ಮ್ಯಾಜಿಸ್ಟ್ರೇಟನು ಠಾಣೆಯ ದರೋಗನಿಗೆ ಆತ್ಮಾರಾಮನು ಆತ್ಮಹತ್ಯೆ ಮಾಡಿಕೊಳ್ಳದಂತೆ ಎಚ್ಚರವಾಗಿ ನೋಡಿಕೊಂಡಿರಬೇಕೆಂದು ಸೂಚಿಸಿ ಹೊರಟುಹೋದನು.

ಬಿಡಾರಕ್ಕೆ ಬಂದೊಡನೆಯೆ ಶಂಕರರಾಯನು ಸುಭದ್ರೆ ಮತ್ತು ಗಂಗಾಬಾಯಿ ಇವರೆದುರಿಗೆ ಆತ್ಮಾರಾಮನಹೇಳಿಕೆಯನ್ನು ಓದುತ್ತ, ಸುಭದ್ರೆಯು ಅವಕಾಶ ಸಿಕ್ಕಿದರೂ ಓಡಿಹೋಗದೆ ಇದ್ದುದು ಆಶ್ಚರ್ಯ ವೆಂದನು ಅದಕ್ಕೆ ಗಂಗಾಬಾಯಿಯು ''ಈ ವಿಚಾರವನ್ನು ನಾನು ಮೊದಲೇಕೇಳಿದೆನು. ನಮ್ಮ ಸುಭದ್ರೆಯು ಹುಡುಗಿಯಾದರೂ ದೂರದೃಷ್ಟಿಯುಳ್ಳವಳು. ರಾಮರಾಯನು ತನಗೆಶತ್ರುವಾಗಿ ನಿಂತಿರುವುದು ಅವಳಿಗೆ ತಿಳಿದಿದ್ದುದರಿಂದ ತಪ್ಪಿಸಿಕೊಂಡುಹೋಗುವುದು. ಮತ್ತಷ್ಟು ಅನರ್ಥಕ್ಕೆ ಕಾರಣವಾಗಬಹುದೆಂದು ತಿಳಿದು ಆತ್ಮಾರಾಮನಿಗೆ ಸ್ನೇಹಿಯಳಾಗಿದ್ದು ಶುಶ್ರೂಷೆ ಮಾಡುವುದರಮೂಲಕ ಅವನಲ್ಲಿ ಕನಿಕರವನ್ನು ಹುಟ್ಟಿಸಿ ತನ್ನ ಪತಿಯನ್ನು ಸೇರಲು ಅವನಿಂದಲೇ ಸಹಾಯವನ್ನು ಪಡೆಯುವ ಉದ್ದೇಶದಿಂದ ನಿಂತುಬಿಟ್ಟಳಂತೆ. ಆದರೆ ಅವನಿಗೆ ರೋಗವು ಗುಣವಾಗುವಸಂಭವವು ತೋರಲಿಲ್ಲವಾದುದರಿಂದಲೂ, ಕೊನೆಕೊನೆಗೆ ಅವನ ಹಿಂಸೆಯು ಸಹಿಸಲಸಾಧ್ಯವಾಗಿ

ಪರಿಣಮಿಸಿದುದರಿಂದಲೂ ಪ್ರಾಣತ್ಯಾಗ ಮಾಡಲು ನಿಶ್ಚಯಿಸಿ ಆಹಾರವನ್ನು ಬಿಟ್ಟಳಂತೆ'' ಎಂದು ಹೇಳಿದಳು.

ಕಾಗದವನ್ನೋದಿ ಪೂರೈಸುತ್ತಲೆ ಸುಭದ್ರೆಗೆ ಮನಸ್ಸಿನಲ್ಲಿದ್ದ ಆತಂಕವು ದೂರವಾಯಿತು. ಆತ್ಮಾರಾಮನು ಯಥಾರ್ಥವನ್ನು ಬರೆದು ತನ್ನ ಮೇಲೆ ಸಂದೇಹಕ್ಕೆ ಆಸ್ಪದವಿಲ್ಲದಂತೆ ಮಾಡಿದುದಕ್ಕೋಸ್ಕರ ಅವಳ ಹೃದಯವು ಕೃತಜ್ಞತೆಯಿಂದ ತುಂಬಿ ತುಳುಕಾಡುತ್ತಿತ್ತು. ಕಣ್ಣುಗಳು ಆನಂದಾಶ್ರುವನ್ನು ಸುರಿಸಿದುವು. ಶಂಕರರಾಯನು ಸುಭದ್ರೆಯ ಸಹಸಗುಣವನ್ನೂ ದೂರಾಲೋಚನೆಯನ್ನೂ ಬಹಳವಾಗಿ ಶ್ಲಾಘಿಸಿದನು.

—o—

## — ಇಪ್ಪತ್ತನೆಯ ಅಧ್ಯಾಯ —

ಮಾರಣೆಯ ದಿನ ಗಂಗಾಬಾಯಿ, ಸುಭದ್ರೆ, ಮಾಧವ, ಶಂಕರರಾಯ, ನವಾಬ, ಈ ಐದು ಜನವೂ ಠಾಣೆಗೆ ಹೋದರು. ಸುಭದ್ರೆಯನ್ನು ಕಂಡೊಡನೆಯೆ ಆತ್ಮಾರಾಮನು ಅವಳ ಕಾಲುಗಳ ಮೇಲೆಬಿದ್ದು ''ನನ್ನನ್ನು ಕ್ಷಮಿಸಿರುವೆನೆಂದು ಒಂದು ಮಾತು ಹೇಳಿ, ತಾಯೆ! ನಾನು ನಿಮ್ಮನ್ನು ಬಹಳವಾಗಿ ಕಷ್ಟಪಡಿಸಿದೆ' ಎಂದನು. ಸುಭದ್ರೆಯು ' ಮನಃಪೂರ್ವಕವಾಗಿ ನಿಮ್ಮನ್ನು ಕ್ಷಮಿಸಿರುವುದಲ್ಲದೆ ನಿಮಗೆ ಬಹಳ ಕೃತಜ್ಞಳಾಗಿದ್ದೇನೆ.'' ಎಂದಳು. ಅದನ್ನು ಕೇಳಿ ಆತ್ಮಾರಾಮನು ಗಟ್ಟಿಯಾಗಿ ನಕ್ಕು, 'ನಾನೇ ಧನ್ಯ, ನಾನೇ ಧನ್ಯ'' ಎಂದು ಕೂಗಿಕೊಂಡು ಸ್ಮೃತಿ ತಪ್ಪಿದವನಂತೆ ಬಿದ್ದುಕೊಂಡನು. ಠಾಣೆಯ ದರೋಗನು ಅವನ ಸಹಾಯಕ್ಕೆ ಓಡಿದನು. ಆದರೆ ಆತ್ಮಾರಾಮನು ಗತಾಸುವಾಗಿದ್ದನು. ಕೂಡಲೆ ಒಬ್ಬ ಜವಾನನು ಆಸ್ಪತ್ರೆಗೆ ಓಡಿಹೋಗಿ

ಡಾಕ್ಟರನ್ನು ಕರೆತಂದನು. ಮ್ಯಾಜಿಸ್ಟ್ರೇಟನನ್ನೂ ಅಲ್ಲಿಗೆ ಬರಮಾಡಿದರು; ಅವರಿಬ್ಬರೂ ನೋಡಿದರು. ಕೊಂಚ ಹೊತ್ತಿನಲ್ಲಿಯೆ ಶವವು ಹಸುರು ಬಣ್ಣಕ್ಕೆ ತಿರುಗಿದ್ದುದರಿಂದ ಸಂದೇಹವುಂಟಾಗಿ ಆಸ್ಪತ್ರೆಗೆ ಅದನ್ನು ತೆಗೆದುಕೊಂಡು ಹೋದರು. ಅಲ್ಲಿ ಪರೀಕ್ಷೆಮಾಡಲಾಗಿ ಅನ್ನಕೋಶದಲ್ಲಿ ವಿಷವಿತ್ತು. ಅದು ನಿಧಾನವಾಗಿ ಕೊಲ್ಲುವ ವಿಷವೆಂದು ತಿಳಿಯಬಂದಿತು. ಆತ್ಮಾರಾಮನು ಅದನ್ನು ಹಿಂದಿನ ರಾತ್ರೆ ನುಂಗಿರಬೇಕೆಂದು ನಿರ್ಧರಿಸಿದರು ಅನಂತರ ಆತ್ಮಾರಾಮನ ಮರಣವನ್ನು "ಆತ್ಮಹತ್ಯೆ" ಯೆಂದು ತೀರ್ಮಾನಿಸಿ ಶವವನ್ನು ಶಂಕರರಾಯನ ಕೋರಿಕೆಯಂತೆ ಅವನವಶಕ್ಕೆ ಕೊಡಿಸಿದರು ಶಂಕರರಾಯನಿಗೆ ಆತ್ಮಾರಾಮನು ಪ್ರಾಣಬಿಟ್ಟುದಕ್ಕಾಗಿ ಬಹಳ ವ್ಯಥೆಯುಂಟಾಯಿತು. ಅವನ ಅಪರಕರ್ಮಕ್ಕೆ ತಕ್ಕ ಏರ್ಪಾಡು ಮಾಡಿ, ಎಲ್ಲರೂ ನಿರ್ಮಲವನ್ನು ಬಿಟ್ಟು ಪ್ರಯಾಣಮಾಡಿದರು. ಆಸ್ಪತ್ರೆಯ ಮುಖ್ಯವೈದ್ಯನಿಗೂ ಗಂಗಾರಾಮನಿಗೂ ಅತಿಶಯವಾದ ಬಹುಮಾನಗಳು ದೊರಕಿದುವು. ಶಂಕರರಾಯನೂ ಅವನ ಕುಟುಂಬದವರೂ ಹೈದರಾಬಾದಿನಲ್ಲಿ ನವಾಬನ ಕೋರಿಕೆಯಂತೆ ೩-೪ ದಿನಗಳು ನಿಂತು ಅವನ ಅನುಮತಿಯನ್ನು ಪಡೆದು ಪುನಹೆಗೆ ತಲುಪಿದರು.

ಶಂಕರರಾಯನು ಒಂದುದಿನ ಏಕಾಂತವಾಗಿ ರಾಮರಾಯನನ್ನು ರಾಂಪುರದಿಂದ ಕರೆಸಿಕೊಂಡು ಆತ್ಮಾರಾಮನ ಹೇಳಿಕೆಯ ನಕಲೊಂದನ್ನು ತೆಗೆದು ಕೈಯಲ್ಲಿಟ್ಟನು. ರಾಮರಾಯನಿಗೆ ಯಾವ ಸಂಗತಿಯೂ ಗೊತ್ತಾಗಿರಲಿಲ್ಲ ಆ ಹೇಳಿಕೆಯನ್ನು ನೋಡುತ್ತಲೇ ನಡುಗಲಾರಂಭಿಸಿ ಶಂಕರರಾಯನ ಎರಡು ಕಾಲುಗಳನ್ನೂ ಹಿಡಿದುಕೊಂಡು "ನನ್ನನ್ನು ಉದ್ಧಾರಮಾಡಬೇಕು." ಎಂದನು. ಶಂಕರರಾಯನು ಅವನ ಕೈಗಳನ್ನು ಬಿಡಿಸಿ,

"ಸ್ವಾಮಿ ! ತಾವು ಹೆದರಬೇಡಿ. ನಾನು ಹಾಗೆ ತಮಗೆ ತೊಂದರೆ ಕೊಡಬೇಕೆಂದಿದ್ದರೆ ಈ ಕಾಗದವು ನ್ಯಾಯಸ್ಥಾನ ದಲ್ಲಿರುತ್ತಿತ್ತು. ಇನ್ನು ಮೇಲಾದರೂ ತಾವು ನಮ್ಮಲ್ಲಿ ಪ್ರಸನ್ನರಾಗು ವುದಾಗಿ ವಾಗ್ದಾನಮಾಡುವಿರಾ?" ಎಂದು ಕೇಳಿದನು ರಾಮ ರಾಯನು, "ನಾನು ತಮ್ಮ ದಾಸಾನುದಾಸನಾಗಿರುವೆನು" ಎಂದನು. ಶಂಕರರಾಯನು "ನಮಗೇನಾದರೂ ವಿರೋಧವಾಗಿ ನಡೆದರೆ ಗೊತ್ತೇ ಇದೆಯಷ್ಟೆ" ಎಂದು ಹೇಳಿ ಕಳುಹಿಸಿಕೊಟ್ಟನು.

ಶಂಕರರಾಯನು ಒಂದು ಶುಭಲಗ್ನವನ್ನು ಗೊತ್ತುಮಾಡಿ "ಗೃಹಪ್ರವೇಶ" ವೆಂಬ ಶಾಸ್ತ್ರವನ್ನು ನೆರವೇರಿಸಿದನು. ಆ ದಿನ ಬ್ರಾ ಹ್ಮಣರು ಮಾತ್ರವಲ್ಲದೆ ಯೂರೋಪಿಯನರು, ಮಹಮದೀಯರು ಮುಂತಾದ ಎಲ್ಲಾ ಜಾತಿಯ ಜನರಿಗೂ ಅತ್ಯಂತಾದರದಿಂದ ಔತಣವು ನಡೆಯಿತು. ಆ ದಿನದ ವಿಜೃಂಭಣೆಯು ವರ್ಣಿಸಲಸದಳ ವೆಂಬಂತಿತ್ತು. ಆದರೆ ಮಾಧವನೂ ಸುಭದ್ರೆಯೂ ಹಸೆಯಮೇಲೆ ಕುಳಿತಿದ್ದಾಗ್ಗೆ ಇವರ ಸೊಬಗನ್ನು ನೋಡುವುದರಿಂದುಂಟಾದ ತೃಪ್ತಿಗೆ ಇದಾವುದೂ ಸರಿಬರಲಿಲ್ಲ. ಗಂಗಾಬಾಯಿಯೂ ಶಂಕರ ರಾಯನೂ ಮಗನನ್ನೂ ಸೊಸೆಯನ್ನೂ ನೋಡಿ ನೋಡಿ ಸಂತೋ ಷದಿಂದ ಹಿಗ್ಗುತಲಿದ್ದರು.

ಸಂತೋಷದ ಮೇಲೆ ಸಂತೋಷ! ವಿಶ್ವನಾಥನೂ ರಮಾಬಾ ಯಿಯೂ ಪುನಹೆಯ ಹತ್ತಿರ ಯಾವುದೋ ಹಳ್ಳಿಪಳ್ಳಿಗಳಲ್ಲಿ ಭಿಕ್ಷಾಟನೆ ಮಾಡುತ್ತಿದ್ದವರು ಆಕಸ್ಮಿತವಾಗಿ ಪುನಹೆಗೆ ಆ ದಿನ ಬಂದರು. ಅಲ್ಲಿ ಶಂಕರರಾಯರ ಮನೆಯಲ್ಲಿ ದೊಡ್ಡ ಔತಣ ನಡೆಯುವುದಾಗಿ ತಿಳಿದು ಭೋಜನಕ್ಕೆ ಬಂದರು. ಭೋಜನ ನಡೆಯುವಾಗ್ಗೆ ಜನಸಂದಣಿಯಲ್ಲಿ ದ್ದುದರಿಂದ ಇವರಿರುವುದು ಯಾರಿಗೂ ಗೋಚರವಾಗಲಿಲ್ಲ. ಭೋಜ ನಾನಂತರ ಸಭೆಸೇರಿ ಹಸೆಯಮೇಲೆ ದಂಪತಿಗಳು ಕುಳಿತಿದ್ದಾಗ್ಗೆ, ರಮಾ

ಬಾಯಿಎದ್ದುನಿಂತು ಸುಮ್ಮನೇ ಬೆರಗಾಗಿ ನೋಡುತ್ತಿದ್ದಳು. ಅವಳ ಆಶ್ಚರ್ಯಕ್ಕೆ ಮಿತಿಯೇ ಇರಲಿಲ್ಲ. ಹಸೆಯಮೇಲೆಕುಳಿತಿರುವರಾರು? ಮಗಳು, ಅಳಿಯ. ಎಷ್ಟು ನೋಡಿದರೂ ಅವರೇ. ಅಷ್ಟುಹೊತ್ತಿಗೆ ಯಾವುದೋ ಕೆಲಸದ ನಿಮಿತ್ತವಾಗಿ ಗಂಗಾಬಾಯಿಯು ರಮಾಬಾಯಿ ನಿಂತಿದ್ದಕಡೆ ಬಂದು, ಅವಳನ್ನು ಕಂಡು "ಇದೇನು ರಮಾಬಾಯಿ! ಯಾವಾಗ ಬಂದಿರಿ? ಇದೀಗ ಸುದಿನ!" ಎಂದುಹೇಳುತ್ತಾ ನೆಟ್ಟಗೆ ದೊಡ್ಡ ಮನುಷ್ಯರ ಹೆಂಗಸರು ಕುಳಿತಿದ್ದಕಡೆಗೆ ಕರೆದುಕೊಂಡು ಹೋಗಿ ಕುಳ್ಳಿರಿಸಿ "ಎಲ್ಲಿ ಯಜಮಾನರು?" ಎಂದು ಕೇಳಿದಳು. ರಮಾಬಾಯಿಯು ವಿಶ್ವನಾಥನನ್ನು ತೋರಿಸಿಕೊಟ್ಟಳು. ಅವನೂ ಹೆಂಡತಿಯಂತೆಯೆ ಎದ್ದುನಿಂತು ಆಶ್ಚರ್ಯ ಪರವಶನಾಗಿ ನೋಡುತ್ತಿದ್ದನು. ಗಂಗಾಬಾಯಿ ಅವನನ್ನು ಮೇಲಕ್ಕೆ ಕರೆಸಿಕೊಂಡು ಶಂಕರರಾಯನಿಗೆ ಪರಿಚಯಮಾಡಿಸಿದಳು. ವಿಶ್ವನಾಥನು ಆ ಸಮಯಕ್ಕೆ ಸರಿಯಾಗಿ ಬಂದುದಕ್ಕೆ ಶಂಕರರಾಯನು ಬಹಳವಾಗಿ ಸಂತೋಷಪಟ್ಟನು. ತಂದೆತಾಯಿಗಳನ್ನು ಕಂಡೊಡನೆಯೆ ಸುಭದ್ರೆಗುಂಟಾದ ಸಂತೋಷವಿಷ್ಟೆಂದು ಹೇಳಬೇಕಾದುದೇ ಇಲ್ಲ. ಮಾಧವನಿಗೂ ಸ್ವಲ್ಪಮಟ್ಟಿಗೆ ಅಪೂರ್ಣವಾಗಿದ್ದ ಸುಖಪರಂಪರೆಯು ಸಂಪೂರ್ಣವಾಯಿತು.

---

— ಸಂಪೂರ್ಣಂ. —